ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 28 ಗುರುವಾರ 2023

ಸಂಪುಟ: 44 | ಸಂಚಿಕೆ: 163 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜೆಡಿಎಸ್ ಎನ್‌ಡಿಎ ಮೈತ್ರಿಕೂಟ ಸೇರಿದರೂ

ನಮ್ಮ ಜಾತ್ಯಾತೀತ ನಿಲುವು ಬದಲಾಗಲ್ಲ

- ನನ್ನ 60 ವರ್ಷದ ರಾಜಕೀಯ ಜೀವನದಲ್ಲಿ ಯಾರಿಗೂ ಅನ್ಯಾಯ ಮಾಡಿಲ್ಲ
- ಈ ಮೊದಲು ಬಿಜೆಪಿಯೊಂದಿಗೆ ಸರ್ಕಾರ ರಚಿಸಿದಾಗಲೂ ಅಲ್ಪಸಂಖ್ಯಾತರ ರಕ್ಷಣೆ ಮಾಡಿದ್ದೇವೆ
- ಜಾತ್ಯಾತೀತ ಶಕ್ತಿಗಳಿಗೆ ಧಕ್ಕೆ ತಂದಿದ್ದೇ ಕಾಂಗ್ರೆಸ್; ಇದಕ್ಕೆ ಬೇಕಾದಷ್ಟು ನಿದರ್ಶನ ಇವೆ

ಬೆಂಗಳೂರು, ಸೆ.27(ಕೆಎಂಶಿ)–ಜೆಡಿಎಸ್, ಎನ್‌ಡಿಎ ಮೈತ್ರಿಕೂಟ ಸೇರಿದರೂ ನಮ್ಮ ಜಾತ್ಯಾತೀತ ನಿಲುವಿನ ಬದ್ಧತೆಯಲ್ಲಿ ಯಾವುದೇ ರಾಜೀ ಇಲ್ಲ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 60 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಅಲ್ಪಸಂಖ್ಯಾತರಷ್ಟೇ ಅಲ್ಲ, ಯಾವುದೇ ಸಮುದಾಯಕ್ಕೆ ಅನ್ಯಾಯ ಆಗಲು ಬಿಟ್ಟಿಲ್ಲ. ನೇರ ಅಥವಾ ಪರೋಕ್ಷವಾಗಿ ಬಿಜೆಪಿಯೊಂದಿಗಿನ ಸಂಬಂಧವಿಲ್ಲದೆ ಸ್ವಚ್ಛವಾಗಿರುವ ಯಾವುದೇ ಒಂದು ಪಕ್ಷವಿದ್ದರೆ ಯಾರು ಬೇಕಾದರೂ ಪ್ರಶ್ನಿಸಬಹುದು ಎಂದರು. ಕುಮಾರಸ್ವಾಮಿ ಅವರು ಮೊದಲು ಬಿಜೆಪಿ ಜತೆ ಸೇರಿ ಸರ್ಕಾರ ರಚನೆ ಮಾಡಿದ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಹಿತ ಕಾಪಾಡಲಾಗಿದೆ ಎಂದು

● 10ನೇ ಪುಟಕ್ಕೆ

ಬಿಜೆಪಿಯೊಂದಿಗಿನ ಮೈತ್ರಿ ವಿಚಾರವನ್ನು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಗಮನಕ್ಕೆ ತಂದಿದ್ದೇವೆ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ ಬಿಜೆಪಿಯೊಂದಿಗಿನ ಮೈತ್ರಿ ವಿಚಾರದ ಬೆಳವಣಿಗೆಯನ್ನು ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಗಮನಕ್ಕೆ ತರಲಾಗಿದೆ ಎಂದರು.

ದೇವೇಗೌಡರು ಎಂದೂ ಯಾವುದೇ ಸಮುದಾಯವನ್ನು ಅಗೌರವದಿಂದ ನಡೆಸಿಕೊಂಡಿಲ್ಲ. ಅಲ್ಪಸಂಖ್ಯಾತರಷ್ಟೇ ಅಲ್ಲ. ನಾಡಿನ ಸಮಸ್ತ ಸಮುದಾಯಗಳ ಹಿತ ಕಾಪಾಡುವುದು ಜೆಡಿಎಸ್ ಉದ್ದೇಶ. ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅವರು 2004ರಿಂದಲೂ ಜೆಡಿಎಸ್ ಮುಗಿಸಲು ಕಾಂಗ್ರೆಸ್ ಹವಣಿಸಿದೆ. ಅಮಿತ್ ಷಾ ಅವರ ಕಾಲು ಹಿಡಿಯುವ ದುಸ್ಥಿತಿ ನಮಗೆ ಬಂದಿಲ್ಲ. ದೇವೇಗೌಡರ ಕಾಲು ಹಿಡಿಯುವ ದುಸ್ಥಿತಿ ಕಾಂಗ್ರೆಸ್ ನಾಯಕರಿಗೆ ಬಂದಿತ್ತು ಎಂದು ಸಚಿವ ಪ್ರಿಯಾಂಕ ಖರ್ಗೆ ಹೇಳಿಕೆಗೆ ತಿರುಗೇಟು ನೀಡಿದರು.

ಡಿ.ಕೆ.ಶಿವಕುಮಾರ್ ತಮಿಳುನಾಡಿಗೆ ನೀರು ಬಿಡುಗಡೆ ವಿಚಾರದಲ್ಲಿ ಕಾವೇರಿ ಜಲ ನಿರ್ವಹಣಾ ಸಮಿತಿ ಮಾಡಿರುವ ಶಿಫಾರಸ್ಸು ಸಂತಸ ತಂದಿದೆ ಎಂದು ಹೇಳಿದ್ದಾರೆ. ಮೆಟ್ಟೂರು ಜಲಾಶಯದಲ್ಲಿ 11 ಟಿಎಂಸಿ ನೀರಿದೆ. 7231 ಕ್ಯುಸೆಕ್ ಒಳಹರಿವಿದೆ. ಆದರೆ, ಕೆಆರ್‌ಎಸ್‌ಗೆ 7000 ದಿಂದ 5000 ಕ್ಯುಸೆಕ್‌ಗೆ ಒಳಹರಿವು ಇಳಿಕೆಯಾಗಿದೆ. ಆದರೂ ವಿಷಯಾಂತರ ಮಾಡಲು ಅಂತಹ ಹೇಳಿಕೆ ನೀಡಿದ್ದಾರೆ ಎಂದರು.

ತಮಿಳುನಾಡು ಸಿಎಂ ಸ್ಟಾಲಿನ್ ಓಲೈಸಲು ನಮ್ಮ ರೈತರ ಬಾಳಲ್ಲಿ ಕಾಂಗ್ರೆಸ್ ಸರ್ಕಾರ ಚೆಲ್ಲಾಟ

ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ ವಾಗ್ದಾಳಿ




ಬೆಂಗಳೂರು, ಸೆ.27(ಕೆಎಂಶಿ)–ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಓಲೈಕೆ ಮಾಡಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನಮ್ಮ ರೈತರ ಬಾಳಲ್ಲಿ ಚೆಲ್ಲಾಟವಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಬಿ.ಎಸ್.ಯಡಿಯೂರಪ್ಪ ಇಂದಿಲ್ಲಿ ಕಿಡಿ ಕಾರಿದ್ದಾರೆ.

ಕಾವೇರಿ ನದಿಯಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯದ ಕ್ರಮವನ್ನು ವಿರೋಧಿಸಿ ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ಪ್ರತಿಭಟನೆ ನಡೆಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿವೆ. ಜೆಡಿಎಸ್ ಎನ್‌ಡಿಎ ಮೈತ್ರಿಕೂಟ ಸೇರಿದ ನಂತರ ಇಂದು ಬಿಜೆಪಿ ಜತೆಗೂಡಿ ಆ ಪಕ್ಷದ ಶಾಸಕರು ಮತ್ತು ಮುಖಂಡರು ವಿಧಾನಸೌಧ ಮತ್ತು ವಿಕಾಸಸೌಧದ ನಡುವೆ ಇರುವ ಗಾಂಧಿ ಪ್ರತಿಮೆ ಬಳಿ ಧರಣಿ ಕುಳಿತು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

● 6ನೇ ಪುಟಕ್ಕೆ

ರಕ್ಷಣೆಗಾಗಿ ಪೊಲೀಸ್ ಠಾಣೆ ಮೆಟ್ಟಿಲೇರಿದ ಜಿಂಕೆ..!!

- ಬೀದಿ ನಾಯಿಗಳ ದಾಳಿಗೆ ತತ್ತರಿಸಿ ಠಾಣೆಯಲ್ಲಿ ಆಶ್ರಯ
- ಓಡೋಡಿ ಬಂದ ಜಿಂಕೆ ಕಂಡು ಸಿಬ್ಬಂದಿಯಲ್ಲಿ ಅಚ್ಚರಿ
- ನಾಯಿ ಕಚ್ಚಿದ್ದ ಸ್ಥಳಕ್ಕೆ ಅರಿಶಿನ ಪುಡಿ ಹಚ್ಚಿದ ಆ 'ರಕ್ಷಕರು'



ಮೈಸೂರು,ಸೆ.27(ಎಂಟಿವೈ)– ನಂಜನಗೂಡಿನಲ್ಲಿ ಜಿಂಕೆಯೊಂದು ತನ್ನನ್ನು ಬೆನ್ನತ್ತಿದ್ದ ಬೀದಿನಾಯಿಗಳಿಂದ ಪಾರಾಗಲು ಪೊಲೀಸ್ ಠಾಣೆ ಮೆಟ್ಟಿಲೇರಿದ ಅತ್ಯಂತ ಅಚ್ಚರಿ ಹಾಗೂ ಕುತೂಹಲಕಾರಿ ಘಟನೆ ಬುಧವಾರ ನಡೆದಿದ್ದು, ಹಾಡಹಗಲೇ ಪಟ್ಟಣದಲ್ಲಿ ಜಿಂಕೆ ಓಡಾಡಿದ್ದನ್ನು ಕಂಡು ಜನರು ಆಶ್ಚರ್ಯಚಕಿತರಾಗಿದ್ದಾರೆ.

ಬುಧವಾರ ಬೆಳಗ್ಗೆ 11.10ರಲ್ಲಿ ಜಿಂಕೆ ದಾರಿ ತಪ್ಪಿ ನಂಜನಗೂಡು ಪಟ್ಟಣ ಪ್ರವೇಶಿಸಿದೆ. ಜನ ಹಾಗೂ ವಾಹನ ದಟ್ಟಣೆ ಕಂಡು ವಿಚಲಿತವಾಗಿ, ಕೆಲ ಬಡಾವಣೆಗಳಲ್ಲಿ ಸುತ್ತಾಡಿದೆ. ಈ ವೇಳೆ ಬೀದಿನಾಯಿಗಳು ಅದರ ಮೇಲೆ ಮುಗಿಬಿದ್ದಿವೆ. ಮೂರ್‍ನಾಲ್ಕು ಕಡೆ ಅದನ್ನು ಕಚ್ಚಿ ಗಾಯಗೊಳಿಸಿವೆ.

ನಾಯಿಗಳ ದಾಳಿಯಿಂದ ತತ್ತರಿಸಿದ ಜಿಂಕೆ ನೇರವಾಗಿ ಪೊಲೀಸ್ ಠಾಣೆ ಮೆಟ್ಟಿಲೇರಿದೆ. ನಂಜನಗೂಡಿನ ಶ್ರೀಕಂಠೇಶ್ವರ(ನಂಜುಂಡೇಶ್ವರ) ದೇವಾಲಯದ ಬಳಿಯಿರುವ ಪೊಲೀಸ್ ಉಪ ಠಾಣೆಯ ಮುಂಭಾಗದ ಬ್ಯಾರಿಕೇಡ್ ಹಾರಿ ನೇರವಾಗಿ ಠಾಣೆಯ ಕೊಠಡಿಗೆ ಬಂದು ನಿಂತಿದೆ. ಅನಿರೀಕ್ಷಿತವಾಗಿ ಪ್ರತ್ಯಕ್ಷವಾದ ಜಿಂಕೆ ಕಂಡು ಪೊಲೀಸರು ಆಶ್ಚರ್ಯಚಕಿತರಾಗಿದ್ದಾರೆ. ಕತ್ತಿನ ಭಾಗದಲ್ಲಿ ನಾಯಿ ಕಚ್ಚಿದ್ದರಿಂದ ಸೋರುತ್ತಿದ್ದ ರಕ್ತವನ್ನು ಗಮನಿಸಿದ ಪೊಲೀಸರು, ಜಿಂಕೆಗೆ ಪ್ರಾಥಮಿಕ ಚಿಕಿತ್ಸೆಯೊಂದಿಗೆ ಸಂತೈಸಿದ್ದಾರೆ. ಅಲ್ಲದೆ, ಠಾಣೆಯ ಕೊಠಡಿಯಲ್ಲೇ ಗಾಯಕ್ಕೆ ಅರಿಶಿನದ ಪುಡಿ ಹಚ್ಚಿ ರಕ್ತ ನಿಲ್ಲುವಂತೆ ಮಾಡಿದ್ದಾರೆ. ಕೊನೆಗೆ ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಕೆಲ ಸಮಯದಲ್ಲೇ ಠಾಣೆಗೆ ಬಂದ ಅರಣ್ಯ ಸಿಬ್ಬಂದಿ ಜಿಂಕೆಯನ್ನು ಕೊಂಡೊಯ್ದು ಸುರಕ್ಷಿತ ಸ್ಥಳದಲ್ಲಿ ಬಿಟ್ಟುಬಂದಿದ್ದಾರೆ.

ಕೋವಿಡ್ ವೇಳೆ ಚಾ.ನಗರದಲ್ಲಿ ಆಕ್ಸಿಜನ್ ಲಭಿಸದೆ 36 ಮಂದಿ ದುರಂತ ಸಾವಿನ ಪ್ರಕರಣ

ಸಂತ್ರಸ್ತರ ಕುಟುಂಬಕ್ಕೆ ಸರ್ಕಾರಿ ನೌಕರಿ



ಚಾಮರಾಜನಗರ, ಸೆ.27(ಎಸ್‌ಎಸ್)–ಚಾಮರಾಜನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಎರಡು ವರ್ಷದ ಹಿಂದೆ, ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಆಕ್ಸಿಜನ್ ಲಭಿಸದೇ ಮೃತಪಟ್ಟ 36 ಮಂದಿಯ ಕುಟುಂಬ ಸದಸ್ಯರಿಗೆ ಖಾಯಂ ಸರ್ಕಾರಿ ಉದ್ಯೋಗ ನೀಡಲು ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಈ ಭರವಸೆ ನೀಡಿದರು.

ಸಭೆಯಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ ಆಕ್ಸಿಜನ್ ಅಲಭ್ಯತೆಯಿಂದ ಸಂಭವಿಸಿದ ದುರಂತದ ವಿಷಯವನ್ನು ಪ್ರಸ್ತಾಪಿಸಿ, ನಗರದಲ್ಲಿ ಆಕ್ಸಿಜನ್ ಲಭಿಸದೇ 36 ಜನರು ಮೃತಪಟ್ಟಿದ್ದರು. ಆಗಿನ ಸರ್ಕಾರ ಮೂವರು ಮಾತ್ರ ಸಾವನ್ನಪ್ಪಿದ್ದಾರೆ ಎಂದು ಹೇಳಿತ್ತು. ಈ ವೇಳೆ ಕಾಂಗ್ರೆಸ್ ಪಕ್ಷದಿಂದ ಮೃತಪಟ್ಟ 36 ಕುಟುಂಬದ ಸದಸ್ಯರಿಗೆ ತಲಾ ಒಂದು ಲಕ್ಷ ರೂ.ಪರಿಹಾರ ನೀಡಲಾಗಿತ್ತು. ಇದಲ್ಲದೇ ಸರ್ಕಾರಿ ಉದ್ಯೋಗ ನೀಡುವ ಭರವಸೆ ನೀಡಲಾಗಿತ್ತು ಎಂದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಪೈಕಿ 13 ಕುಟುಂಬದ ಸದಸ್ಯರಿಗೆ 5 ಲಕ್ಷ ರೂ., 11 ಕುಟುಂಬದ ಸದಸ್ಯರಿಗೆ 2ಲಕ್ಷ ರೂ. ಪರಿಹಾರ ನೀಡಲಾಗಿದೆ ಎಂದರು. ಈ ಹಂತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಸರ್ಕಾರಿ ಉದ್ಯೋಗ ಕೊಡುವುದಾಗಿ ನಾವು ಭರವಸೆ ನೀಡಿದ್ದೆವು. ಈ ಬಗ್ಗೆ ಏನೂ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಜಿಲ್ಲಾ ಉಸ್ತುವಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ಉದ್ಯೋಗ ನೀಡುವ ಸಲುವಾಗಿ ಅವರ ವಿದ್ಯಾರ್ಹತೆಯನ್ನು ಪಡೆಯಲಾಗಿದೆ. ಅದಕ್ಕೆ ತಕ್ಕ ಉದ್ಯೋಗಗಳು ಎಲ್ಲಿ ಖಾಲಿ ಇದೆ ಎಂಬ ಮಾಹಿತಿಯನ್ನು ಸಹ ಪಡೆದು, ದಾಖಲಿಸಿಕೊಳ್ಳಲಾಗಿದೆ. ಈ ಪ್ರಸ್ತಾವನೆ ಕಳುಹಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಈ ವೇಳೆ ಸಚಿವ ಎಚ್.ಸಿ. ಮಹದೇವಪ್ಪ ಇದನ್ನು ವಿಶೇಷ

● 10ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

ಬಲವಂತ ವಸೂಲಿಗೆ ತಡೆ ಹಾಕಿ

ಖಾಸಗಿಯಾಗಿ ಸಾಲ ನೀಡಿದವರು ರೈತರಿಗೆ ಬಲವಂತವಾಗಿ ವಸೂಲಿ ಮಾಡದಂತೆ ಕ್ರಮ ವಹಿಸಬೇಕು. ಬರ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಶೋಷಣೆ ಮಾಡದಂತೆ ಕಾರ್ಯನಿರ್ವಹಿಸಬೇಕು. ಈ ಎಲ್ಲಾ ಸೂಚನೆಗಳನ್ನು ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಾರ್ವಜನಿಕರಿಂದ ದೂರು ಬಂದರೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು.

ಮುಂದಿನ ವರ್ಷ ರಾಜ್ಯ ಶಿಕ್ಷಣ ನೀತಿ ಜಾರಿ



ಅರಸೀಕೆರೆ: ರಾಜ್ಯದ ಹಲವು ಕಡೆಗಳಲ್ಲಿ ಎನ್‌ಇಪಿ ಜಾರಿ ನಂತರ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಅನೇಕ ಕಡೆಗಳಲ್ಲಿ ಮೂಲ ಸೌಕರ್ಯ ಇಲ್ಲದ ಕಾರಣ ರಾಜ್ಯದಲ್ಲಿ ಎನ್‌ಇಪಿಗೆ ಪೂರಕ ವಾತಾವರಣ ಇಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ ಹೇಳಿದರು.

ಪಟ್ಟಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ದೇಶದಲ್ಲೇ ಕರ್ನಾಟಕದಲ್ಲಿ ಮಾತ್ರ 2021ರಲ್ಲಿ ಎನ್‌ಇಪಿ ಜಾರಿಗೆ ಮಾಡಿತ್ತು. ಯಾವುದೇ ಪೂರ್ವ ತಯಾರಿ ಇಲ್ಲದೇ ಜಾರಿ ಮಾಡಲಾಗಿದೆ. ಸಾಕಷ್ಟು ನ್ಯೂನತೆ ಇರುವುದರಿಂದ ರದ್ದು ಮಾಡಲು ನಿರ್ಧರಿಸಲಾಗಿದೆ ಎಂದರು. ಹಿಂದಿನ ಸರ್ಕಾರ ಜಾರಿಗೆ ತಂದಿದ್ದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದು ಮಾಡುವುದಾಗಿ ಬಜೆಟ್‌ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದರು. ಅದರಂತೆ ಮುಂದಿನ ವರ್ಷದಿಂದ ಎನ್‌ಇಪಿ ರದ್ದುಪಡಿಸಿ, ರಾಜ್ಯ ಶಿಕ್ಷಣ ನೀತಿ ಜಾರಿ ಮಾಡಲಾಗುವುದು ಎಂದು ಹೇಳಿದರು. ಎನ್‌ಇಪಿ ವಿಷಯಗಳೇ ಬೇರೆ, ರಾಜ್ಯದಲ್ಲಿ ಚಾಲ್ತಿಯಲ್ಲಿರುವ ವಿಷಯಗಳೇ ಬೇರೆ. ಹೀಗಾಗಿ ಹೆಚ್ಚು ಮಕ್ಕಳಿಗೆ ಇದರಿಂದ ತೊಂದರೆಯಾಗಿದೆ. ಅದರಲ್ಲೂ ಗ್ರಾಮೀಣ ಮಕ್ಕಳಿಗೆ ಅನೇಕ ರೀತಿಯ ಅನಾನುಕೂಲ ಆಗಿದೆ. ಎಲ್ಲರಿಗೂ ಅನುಕೂಲ ಆಗುವ, ಎಲ್ಲ ವರ್ಗ, ಜಾತಿಗಳನ್ನು ಒಳಗೊಂಡ ಶಿಕ್ಷಣ ನೀತಿ ಜಾರಿ ಮಾಡಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ನಾಳೆ ಕರ್ನಾಟಕ ಬಂದ್



ಬೆಂಗಳೂರು, ಸೆ.27–ತಮಿಳುನಾಡಿಗೆ ಕಾವೇರಿ ನೀರು ಬಿಡುವುದನ್ನು ರಾಜ್ಯ ಸರ್ಕಾರ ನಿಲ್ಲಿಸಬೇಕು ಎಂದು ಒತ್ತಾಯಿಸಿ ವಿವಿಧ ಕನ್ನಡ ಪರ ಸಂಘಟನೆಗಳು ಸೆಪ್ಟೆಂಬರ್ 29ರಂದು ಕರ್ನಾಟಕ ಬಂದ್‌ಗೆ ಕರೆ ನೀಡಿವೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರಕ್ಕೆ ತಡೆಯೊಡ್ಡುವುದಾಗಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಬೆದರಿಕೆ ಹಾಕಿದ್ದಾರೆ. ಬೆಂಗಳೂರಿನಲ್ಲಿ ಶುಕ್ರವಾರ ನಡೆಯಲಿರುವ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಳ್ಳುವಂತೆ ಸ್ಯಾಂಡಲ್‌ವುಡ್ ನಟರಿಗೆ ಮನವಿ ಮಾಡಿದ್ದಾರೆ. ಶುಕ್ರವಾರ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ನಡೆಯಲಿರುವ ಕರ್ನಾಟಕ ಬಂದ್‌ಗೆ ನೂರಾರು ಸಂಘಟನೆಗಳು ಬೆಂಬಲ ಸೂಚಿಸಿವೆ ಎಂದು ಅವರು ಹೇಳಿದ್ದಾರೆ.

20 ದಿನಗಳ ಅವಧಿಯಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಮೂರನೇ ಬಂದ್ ಇದಾಗಿದೆ. ಮೊದಲನೆಯ ಬಂದ್ ಸೆಪ್ಟೆಂಬರ್ 11ರಂದು ಖಾಸಗಿ ಸಾರಿಗೆ ಒಕ್ಕೂಟ ಗಳು ಕರೆ ನೀಡಿತ್ತು. ಎರಡನೆಯದು ಸೆ.26 ರಂದು ಕರ್ನಾಟಕ ಜಲ ಸಂರಕ್ಷಣಾ ಸಮಿತಿಯು ವಿವಿಧ ಸಂಘಟನೆಗಳ ಬೆಂಬಲದೊಂದಿಗೆ ಆಚರಿಸಿತು. ಕರ್ನಾಟಕ ಬಂದ್ ದಿನ ಓಲಾ ಮತ್ತು ಉಬರ್ ಸೇವೆಗಳು, ಆಟೋರಿಕ್ಷಾಗಳು, ಕಾರ್ಮಿಕ ಆಧಾರಿತ ಕೆಲಸಗಳು, ಟ್ರಕ್ ಸಾರಿಗೆ, ಮಾರುಕಟ್ಟೆಗಳು, ಬೀದಿ ವ್ಯಾಪಾರಿಗಳು, ಹೋಟೆಲ್‌ಗಳು, ಚಿತ್ರಮಂದಿರಗಳು, ಮಾಲ್‌ಗಳು, ಖಾಸಗಿ ಬಸ್ಸುಗಳು, ಬೇಕರಿಗಳು ಇರುವುದಿಲ್ಲ ಎಂದು ಹೇಳಲಾಗುತ್ತಿದೆ.

ಆಸ್ಪತ್ರೆ, ಔಷಧಾಲಯಗಳು, ಆಂಬ್ಯುಲೆನ್ಸ್ ಸೇವೆಗಳು, ಮೆಟ್ರೋ ಸೇವೆ, ಹಾಲಿನ ಪಾರ್ಲರ್‌ಗಳು ಇರುತ್ತವೆ. ಅಲ್ಲದೆ ಶಾಲೆ ಮತ್ತು ಕಾಲೇಜುಗಳು, ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್ ಸೇವೆಗಳ ಬಗ್ಗೆ ಇನ್ನು ನಿರ್ಧಾರವಾಗಿಲ್ಲ. ಮಕ್ಕಳಿಗೆ ನಡೆಯುತ್ತಿರುವ ಪರೀಕ್ಷೆಗಳಿಂದಾಗಿ ಖಾಸಗಿ ಶಾಲಾ ವ್ಯಾನ್ ಚಾಲಕರ ಸಂಘವು ಬಂದ್‌ಗೆ ತಮ್ಮ ನೈತಿಕ ಬೆಂಬಲವನ್ನು ನೀಡಿವೆ.

● 6ನೇ ಪುಟಕ್ಕೆ

ಬೆಳ್ಳೂರು ಕ್ರಾಸ್ ಬಳಿ ಭೀಕರ ರಸ್ತೆ ಅಪಘಾತ

ನಾಲ್ವರು ದುರ್ಮರಣ



ನಾಗಮಂಗಲ, ಸೆ.27–ಭೀಕರ ರಸ್ತೆ ಅಪಘಾತದಲ್ಲಿ ನಾಲ್ವರು ಸಾವನ್ನಪ್ಪಿ ರುವ ಘಟನೆ ತಾಲೂಕಿನ ಬೆಳ್ಳೂರು ಕ್ರಾಸ್ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಬುಧವಾರ ಬೆಳಿಗ್ಗೆ 7.45ರ ಸಮಯದಲ್ಲಿ ಸಂಭವಿಸಿದೆ.

ಬೆಳ್ಳೂರು ಕ್ರಾಸ್‌ನ ರಾಷ್ಟ್ರೀಯ ಹೆದ್ದಾರಿಯ ಬಿಜಿಎಸ್ ವೈದ್ಯಕೀಯ ವಿಜ್ಞಾನ ಸಂಸ್ಥೆ ಮುಂದೆ ರಸ್ತೆ ಬದಿ ನಿಂತಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಸ್ವಿಫ್ಟ್ ಕಾರು ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದ್ದು, ಮೃತರನ್ನು ಬೆಂಗಳೂರಿನ ಆಸೆಂಚರ್ ಕಂಪನಿಯ ನೌಕರರಾದ ರಾಜಸ್ಥಾನ ಮೂಲದ ಪಂಕಜ್ ಶರ್ಮ, ಹೊಸಕೋಟೆಯ ವಂಶಿಕೃಷ್ಣ, ಧಾರವಾಡದ ರಘುನಾಥ್ ಬಜಂತ್ರಿ ಹಾಗೂ ಬೆಂಗಳೂರಿನ ನಮಿತಾ ಎಂದು ಗುರುತಿಸ ಲಾಗಿದೆ. ಕಾರ್ಯನಿಮಿತ್ತ ಮಂಗಳೂರಿಗೆ ತೆರಳಿದ್ದ ಈ ನಾಲ್ವರು ಸ್ನೇಹಿತರು ಮಂಗಳೂರಿನಿಂದ ಹಾಸನ ಮಾರ್ಗವಾಗಿ ಬೆಂಗಳೂರಿಗೆ ಸ್ವಿಫ್ಟ್ ಕಾರಿನಲ್ಲಿ ಪ್ರಯಾಣಿಸುವಾಗ ಆಸ್ಪತ್ರೆಯ ಮುಂಭಾಗದಲ್ಲಿ ಪ್ರಯಾಣಿಕರ ಇಳಿಸಲು ನಿಲ್ಲಿಸಲಾಗಿದ್ದ ಕೆಎಸ್‌ಆರ್‌ಟಿಸಿ ಬಸ್ ಅನ್ನು ಗಮನಿಸದ ಕಾರಿನ ಚಾಲಕನು ಅದಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾನೆ. ಅತೀ ವೇಗದ ಚಾಲನೆಯಿಂದ ಡಿಕ್ಕಿ ಹೊಡೆದ ರಭಸಕ್ಕೆ ಬಸ್ಸಿನ ಹಿಂಬದಿಯ ಒಳಕ್ಕೆ ನುಗ್ಗಿದ ಕಾರು ಸಂಪೂರ್ಣವಾಗಿ ಜಖಂಗೊಂಡಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಕ್ರೇನ್ ಮೂಲಕ ಕಾರು ತೆಗೆದು ಅದರೊಳಗಿದ್ದ ಮೃತ ದೇಹಗಳನ್ನು ಹೊರತೆಗೆದಿದ್ದಾರೆ. ಆದಿಚುಂಚನಗಿರಿ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆಯ ನಂತರ ವಾರಸುದಾರರಿಗೆ ಶವಗಳನ್ನು ಹಸ್ತಾಂತರಿಸಲಾಯಿತು. ಈ ಸಂಬಂಧ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದ್ಯಮಗಳ ಅಭಿವೃದ್ಧಿಯಲ್ಲಿ ಬ್ಯಾಂಕ್‌ಗಳ ಪಾತ್ರ ಪ್ರಮುಖ

ಫೆಡರಲ್ ಬ್ಯಾಂಕ್ ಉದ್ಘಾಟಿಸಿ ಶ್ರೀಶೈಲ ರಾಮಣ್ಣನವರ್ ಪ್ರತಿಪಾದನೆ



ಮೈಸೂರು,ಸೆ.27–ಯಾವುದೇ ಒಂದು ಉದ್ಯಮದ ಅಭಿವೃದ್ಧಿಯಲ್ಲಿ ಬ್ಯಾಂಕುಗಳ ಪಾತ್ರ ಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಫೆಡರಲ್ ಬ್ಯಾಂಕ್ ಕೈಗಾರಿಕೋದ್ಯಮಿಗಳ ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದೆ ಎಂದು ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಖಜಾಂಚಿ ಹಾಗೂ ಮೈಸೂರು ಗ್ರಾಹಕ ಪರಿಷತ್ ಅಧ್ಯಕ್ಷ ಶ್ರೀಶೈಲ ರಾಮಣ್ಣನವರ್ ಹೇಳಿದರು.

ನಗರದ ಬೋಗಾದಿ ಬಸವನಗುಡಿ ವೃತ್ತದಲ್ಲಿ ನೂತನವಾಗಿ ಪ್ರಾರಂಭಿಸಲಾದ ಫೆಡರಲ್ ಬ್ಯಾಂಕ್ ಬೋಗಾದಿ ಬ್ರಾಂಚ್ ಉದ್ಘಾಟಿಸಿ ಮಾತನಾಡಿ, ಬ್ಯಾಂಕುಗಳು ಜನರಿಗೆ ಉತ್ತಮ ಸೇವೆ ನೀಡಿದಾಗ ಮಾತ್ರ ಪ್ರಗತಿ ಹೊಂದಲು ಸಾಧ್ಯ. ಈ ನಿಟ್ಟಿನಲ್ಲಿ ಫೆಡರಲ್ ಬ್ಯಾಂಕ್ ತನ್ನ ಗ್ರಾಹಕರಿಗೆ ಅತ್ಯುತ್ತಮ ಸೇವೆ ನೀಡುವ ಮೂಲಕ ನಗರದಲ್ಲಿ ತನ್ನ 4ನೇ ಬ್ರಾಂಚ್ ಪ್ರಾರಂಭಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು.

1931ರಲ್ಲಿ ಕೇರಳ ಕೊಚ್ಚಿ ಜಿಲ್ಲೆಯ ಅಲುವಾದಲ್ಲಿ ಪ್ರಾರಂಭವಾದ ಫೆಡರಲ್ ಬ್ಯಾಂಕ್ ಇಂದು ದೇಶಾದ್ಯಂತ 1370 ಬ್ರಾಂಚ್‌ಗಳನ್ನು ಹೊಂದಿದೆ. ಸುಮಾರು 13 ಸಾವಿರ ಜನರಿಗೆ ಕೆಲಸ ನೀಡಿರುವುದಲ್ಲದೆ, ಅಬುದಾಭಿ, ಕತಾರ್, ಕುವೈತ್, ಓಮನ್ ಮತ್ತು ದುಬೈನಲ್ಲಿ ತನ್ನ ಬ್ರಾಂಚ್ ಹೊಂದಿರುವುದು ವಿಶೇಷವಾಗಿದೆ ಎಂದರು.

ಇದೇ ವೇಳೆ ನೂತನ ಎಟಿಎಂ ಕೇಂದ್ರ ಹಾಗೂ ಸೇಫ್ ಲಾಕರ್‌ಗಳನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಉತ್ತಮ್ ರಬ್ಬರ್ಸ್ ಪ್ರೈ.ಲಿ ವ್ಯವಸ್ಥಾಪಕ ನಿರ್ದೇಶಕ ಜಾನ್ಸನ್ ಜೋಸೆಫ್, ಉದ್ಯಮಿ ಮತ್ತು ಸಮಾಜ ಸೇವಕ ರಾಬರ್ಟ್ ಅಂತೋಣಿ, ಫೆಡರಲ್ ಬ್ಯಾಂಕ್ ಹಿರಿಯ ಉಪಾಧ್ಯಕ್ಷ ದಿಲೀಪ್ ಬಿ., ಬ್ರಾಂಚ್ ಹೆಡ್ ರಾಹುಲ್ ಕೆ.ಓ., ಇತರರು ಉಪಸ್ಥಿತರಿದ್ದರು.

ಆಧುನಿಕ ಕಾಲದಲ್ಲಿ ಹೆಣ್ಣು ಗಂಡಿಗಿಂತಲೂ ಶಕ್ತಿವಂತೆ

ಕಾನೂನು ಅರಿವು ಹಾಗೂ ಸ್ವಯಂ ರಕ್ಷಣಾ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಭಿಮತ





ಮೈಸೂರು, ಸೆ.27(ಜಿಎ)–ಆಧುನಿಕ ಕಾಲದಲ್ಲಿ ಗಂಡಿಗಿಂತಲೂ ಹೆಣ್ಣು ಶಕ್ತಿವಂತೆ ಎಂದು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಜಿಲ್ಲಾಡಳಿತ, ಪೊಲೀಸ್, ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲ್ಮಿಕ್ ಬಾಲ ಕಾರ್ಮಿಕ ಯೋಜನಾ ಸೊಸೈಟಿ ವತಿಯಿಂದ ನಗರದ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಬಾಲಕಾರ್ಮಿಕ ಕಿಶೋರ ಕಾರ್ಮಿಕತೆ ನಿಷೇಧ ಹಾಗೂ ನಿಯಂತ್ರಣ, ಮಾನವ ಕಳ್ಳ ಸಾಗಾಣಿಕೆ ಭಿಕ್ಷಾಟನೆ ಕುರಿತು ಕಾನೂನು ಅರಿವು ಕಾರ್ಯಕ್ರಮ ಹಾಗೂ ಸ್ವಯಂರಕ್ಷಣಾ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ, ಮಾತನಾಡಿದರು.

ಮಹಿಳೆಯರು ಬಹಳಷ್ಟು ಕಡೆ ದೈಹಿಕವಾಗಿ ಹಿಂದಿದ್ದಾರೆ. ಪುರುಷರಿಗಿಂತಲೂ ಮಹಿಳೆಯರಿಗೆ ಹೆಚ್ಚು ಶಕ್ತಿ ಇದೆ. ಮಗುವಿಗೆ ಜನನ ನೀಡುವ ಶಕ್ತಿ ಇರುವುದು, ಪ್ರಸವದ ನೋವು ತಡೆದುಕೊಳ್ಳುವ ಶಕ್ತಿ ಇರುವುದು ಅವರಿಗೆ ಮಾತ್ರ. ಮಾನಸಿಕ ಮತ್ತು ದೈಹಿಕ ಶಕ್ತಿಗಿಂತ ಯುಕ್ತಿ ಬಹಳ ಮುಖ್ಯ ಎಂದು ಹೇಳಿದರು.

ಎಲ್ಲರಿಗೂ ಸಮಾನ ಸ್ವಾತಂತ್ರ್ಯವಿದೆ. ಆದರೆ, ಹೆಣ್ಣು ಮಕ್ಕಳಿಗೆ ಹೆಚ್ಚು ಕಡಿವಾಣ ಹಾಕಲಾಗುತ್ತದೆ. ಸಮಾನತೆ ವಿಚಾರದಲ್ಲಿ ಕೆಲವರು ಪೈಪೋಟಿಯಲ್ಲಿ ದುಷ್ಟ ಚಟಗಳಿಗೆ ಬಲಿಯಾಗುತ್ತಿದ್ದಾರೆ. ಈ ರೀತಿಯ ಸಮಾನತೆ ಅಗತ್ಯವಿಲ್ಲ. ಅದರ ಬದಲು ಸ್ವಯಂ ರಕ್ಷಣೆ ಕಲಿತುಕೊಂಡರೆ ಒಳಿತು ಎಂದು ಜಿಲ್ಲಾಧಿಕಾರಿಗಳು ಕರೆ ನೀಡಿದರು.

ಯಾರಿಂದಲೂ ಸಹಾಯ ನಿರೀಕ್ಷಿಸಬೇಡಿ. ತಮ್ಮನ್ನೂ ತಾವು ರಕ್ಷಣೆ ಮಾಡಿಕೊಳ್ಳುವ ನಿರ್ಧಾರ ತೆಗೆದುಕೊಳ್ಳಿ. ಅಡುಗೆ ಮನೆ, ಅಲಂಕಾರಿಕ ವಸ್ತುಗಳ ಖರೀದಿಯಲ್ಲಿ ತೊಡಗಿಸಿಕೊಳ್ಳುವ ಬದಲು ಕ್ರೀಡೆ ಸೇರಿದಂತೆ ಇತರ ಆತ್ಮಸ್ಥೈರ್ಯ ಹೆಚ್ಚಿಸುವ ಚಟುವಟಿಕೆಯಲ್ಲಿ ತೊಡಗಿಕೊಳ್ಳಿ. ಸಮಾಜದಲ್ಲಿ ಘಾತುಕ ಶಕ್ತಿಗಳು ಇರುತ್ತವೆ. ಇದಕ್ಕೆ ಸ್ವಯಂರಕ್ಷಣೆ ಬಹಳ ಮುಖ್ಯ. ನಮಗೆ ಎನ್‌ಸಿಸಿಯವರು ಎಲ್ಲರಿಗೂ ಮಾದರಿ ಎಂದು ತಿಳಿಸಿದರು.

ಮಕ್ಕಳಿಗೆ ಸ್ವಯಂ ರಕ್ಷಣೆ ಕೌಶಲ್ಯ ಕಲಿಸುತ್ತಿಲ್ಲ: ಈ ವೇಳೆ ಡಿಸಿಪಿ ಮುತ್ತುರಾಜ್ ಮಾತನಾಡಿ, ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳದವನು ಯಾರನ್ನು ರಕ್ಷಣೆ ಮಾಡಲಾರ. ಆದ್ದರಿಂದ ಸ್ವಯಂರಕ್ಷಣೆ ಮಾಡಿಕೊಳ್ಳುವುದು ಮುಖ್ಯ. ಇತ್ತೀಚಿನ ದಿನಗಳಲ್ಲಿ ಕೆಲ ಪೋಷಕರು ರಸ್ತೆ ದಾಟಲು ಮಕ್ಕಳನ್ನು ಬಿಡುತ್ತಿಲ್ಲ. ತಂದೆ ತಾಯಿ ರಕ್ಷಣೆಯಲ್ಲಿ ಬೆಳೆಯುವವರಿಗೆ ಸ್ವಯಂ ರಕ್ಷಣೆಯ ಕಲೆ ಬರುವುದಿಲ್ಲ. ಇದರಿಂದ ಜೀವಿಸುವುದು ಕಷ್ಟಕರ ಎಂದರು.

ಶಿಕ್ಷಣ ಹೆಚ್ಚಾದಂತೆ ಪುಕ್ಕಲುತನ ಹೆಚ್ಚಾಗುತ್ತದೆ. ಅಸ್ತ್ರಗಳಿಂದ ಯಶಸ್ಸು ಸಿಗುವುದಿಲ್ಲ. ಕೆಲವು ವೇಳೆ ತಂತ್ರಗಾರಿಕೆ ಬಳಕೆ ಮಾಡಿ. ದೈಹಿಕ ಮತ್ತು ಮಾನಸಿಕ ಬಲ ಬೇಕಾಗುತ್ತದೆ. ಕಾಲಕ್ಕೆ ತಕ್ಕಂತೆ ಬದಲಾಗಿ, ಮೊಬೈಲ್ ಅನ್ನು ಎಚ್ಚರಿಕೆಯಿಂದ ಬಳಕೆ ಮಾಡಿ, ಸೈಬರ್ ಕ್ರೈಂನ ಆರೋಪಿಗಳನ್ನು ಕಂಡುಹಿಡಿಯುವುದು ಕಷ್ಟ, ಕೆಲವೊಮ್ಮೆ ನೀವೇ ಅಪರಾಧಿಗಳಾಗುತ್ತೀರಾ. ಗುಡ್ ಮತ್ತು ಬ್ಯಾಡ್ ಟಚ್ ಬಗ್ಗೆ ಗಮನವಿರಲಿ. ಮಾದಕ ವಸ್ತುಗಳ ತೆಗೆದುಕೊಳ್ಳಲು ಒತ್ತಡ ಹೇರಿದರೆ ಕಟ್ಟುನಿಟ್ಟಿನ ನಿರ್ಧಾರ ತೆಗೆದುಕೊಳ್ಳಿ. ಈ ಬಗ್ಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ. ಪೊಲೀಸ್ ಸಹಾಯವಾಣಿ 112ಗೆ ಕರೆ ಮಾಡಿದ ಕೆಲವೇ ನಿಮಿಷದಲ್ಲಿ ನಿಮ್ಮ ಸಹಾಯಕ್ಕೆ ಮುಂದಾಗುತ್ತೇವೆ ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಯೋಧ ಸಮರ ಕಲೆಗಳ ಅಕಾಡೆಮಿ ವತಿಯಿಂದ ಉಚಿತವಾಗಿ ಕಾಲೇಜಿನ ವಿದ್ಯಾರ್ಥಿನಿಯರಿಗೆ ಸ್ವಯಂರಕ್ಷಣೆ ಕುರಿತು ವಿಶೇಷ ತರಬೇತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಡಿಸಿಪಿ ಎಸ್.ಜಾಹ್ನವಿ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಸದಸ್ಯ ಕಾರ್ಯದರ್ಶಿ ನಾಜಿಯಾ ಸುಲ್ತಾನ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್, ಕಾಲೇಜಿನ ಪ್ರಾಂಶುಪಾಲ ಸೋಮಣ್ಣ, ಯೋಧ ಸಮರ ಕಲೆಗಳ ಅಕಾಡೆಮಿ ಸಂಸ್ಥಾಪಕ ರಾಕೇಶ್ ಯಾದವ್, ಹಿರಿಯ ಕಾರ್ಮಿಕ ನಿರೀಕ್ಷಕಿ ಮಂಗಳಗೌರಿ ಮತ್ತು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಹೆಚ್.ಪಿ. ಮಲ್ಲಿಕಾರ್ಜುನ ಉಪಸ್ಥಿತರಿದ್ದರು.

ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ



ಮೈಸೂರು, ಸೆ. 27– ಇಪಿಎಫ್‌ಓ ಪ್ರಾದೇಶಿಕ ಕಚೇರಿಯಿಂದ ನಿಧಿ ಆಪ್ಕೆ ನಿಕಟ್ 2.0ರ ಅಡಿಯಲ್ಲಿ ಜಿಲ್ಲಾ ವ್ಯಾಪ್ತಿಯ ಕಾರ್ಯಕ್ರಮವನ್ನು ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ನಂಜನಗೂಡು ಇಂಡಸ್ಟ್ರೀಸ್ ಅಸೋಸಿಯೇಷನ್‌ನಲ್ಲಿ ನಡೆಸಲಾಯಿತು.

ನಂಜನಗೂಡು ಕೈಗಾರಿಕಾ ಸಂಘದ ಅಧ್ಯಕ್ಷ ರಾಮಪ್ರಸಾದ್ ಉಪಸ್ಥಿತರಿದ್ದರು.

ಇಪಿಎಫ್‌ಓ, ಪ್ರಾದೇಶಿಕ ಕಚೇರಿಯಿಂದ ಲೆಕ್ಕಾಧಿಕಾರಿ, ಜಿಲ್ಲಾ ನೋಡಲ್ ಅಧಿಕಾರಿ ಎಂ.ಅಶೋಕ್‌ಕುಮಾರ್, ಎಎಸ್‌ಎ ಎ.ತೇಜಸ್‌ಕೃಷ್ಣನ್, ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರು ಕುಂದು ಕೊರತೆಗಳ ಪರಿಹಾರ ಮತ್ತು ಸಂದರ್ಭದ ಸರಿಯಾದ ನಿರ್ವಹಣೆಗಾಗಿ ಉಪಸ್ಥಿತರಿದ್ದರು. ಇಪಿಎಫ್‌ಓ ಉದ್ಯೋಗದಾತರು, ಉದ್ಯೋಗಿಗಳು ಮತ್ತು ಪಿಂಚಣಿದಾರರು ತಮ್ಮ ಪ್ರಶ್ನೆಗಳು ಮತ್ತು ಕುಂದುಕೊರತೆಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿದ್ದರು. ಅವುಗಳನ್ನು ಸ್ಥಳದಲ್ಲೇ ಆಲಿಸಿ, ಪರಿಹರಿಸಲಾಯಿತು.

ಪಿಂಜರಾಪೋಲ್‌ನ ಪಶು ಚಿಕಿತ್ಸಾಲಯ ಉತ್ತನಹಳ್ಳಿಗೆ ಸ್ಥಳಾಂತರಕ್ಕೆ ಖಂಡನೆ



ಮೈಸೂರು,ಸೆ.27(ಎಂಟಿವೈ)– ಅನಾಥ ಗೋವುಗಳ ಸಂರಕ್ಷಣಾ ಕೇಂದ್ರವಾದ ಪಿಂಜರಾಪೋಲ್ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಪಶು ಚಿಕಿತ್ಸಾಲಯವನ್ನು ಉತ್ತನಹಳ್ಳಿಗೆ ಸ್ಥಳಾಂತರಿಸಿದ್ದು ಖಂಡನೀಯ ಎಂದು ಪಿಂಜರಾಪೋಲ್ ಕಾನೂನು ಸಲಹೆಗಾರ ಸಿ.ವಿ.ಕೇಶವಮೂರ್ತಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಪಿಂಜರಾಪೋಲ್‌ನಲ್ಲಿ 3500ಕ್ಕೂ ಹೆಚ್ಚು ಗೋವುಗಳನ್ನು ಪಾಲನೆ ಮಾಡಲಾಗುತ್ತಿದೆ. ಕಸಾಯಿಖಾನೆಗೆ ಸಾಗಿಸುವಾಗ ರಕ್ಷಿಸಲ್ಪಟ್ಟ ಗೋವುಗಳು, ಅಪಘಾತಕ್ಕೀಡಾದ ಗೋವುಗಳು, ಪಾಲಕರಿಗೆ ಬೇಡವಾದ ಹೋರಿ ಕರುಗಳನ್ನು ಪಿಂಜರಾ ಪೋಲ್‌ನಲ್ಲಿ ಪಾಲನೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪಿಂಜರಾಪೋಲ್‌ನಲ್ಲಿ ಪಶು ಚಿಕಿತ್ಸಾ ಕೇಂದ್ರ ಸ್ಥಾಪಿಸುವ ಅಗತ್ಯವಿತ್ತು. ಈ ಹಿನ್ನೆಲೆಯಲ್ಲಿ ಈ ಹಿಂದೆ ಮಂಜೂರಾಗಿದ್ದ ಪಶು ಚಿಕಿತ್ಸಾ ಕೇಂದ್ರವನ್ನು ಇದೀಗ ಉತ್ತನಹಳ್ಳಿಗೆ ಸ್ಥಳಾಂತರ ಮಾಡಿರುವುದು ಸರಿಯಲ್ಲ ಎಂದರು.

ಪಶು ವೈದ್ಯಕೀಯ ಇಲಾಖೆ ತನ್ನದೇ ಪಶು ಚಿಕಿತ್ಸಾಲಯ ಸ್ಥಾಪಿಸಲು ಪಿಂಜರಾಪೋಲ್‌ಗೆ ಎಲ್ಲಾ ರೀತಿಯ ಅನುಕೂಲ ಕಲ್ಪಿಸಿದ್ದು, ಅದರಿಂದ ಗೋಶಾಲೆಯ ಹಸುಗಳಿಗೆ ಅನುಕೂಲವಾಗಿತ್ತು. ಆದರೆ ಈಗ ಜಿಪಂ ಸೂಚನೆಯಂತೆ ಅದನ್ನು ಸರ್ಕಾರಿ ಉತ್ತನಹಳ್ಳಿಗೆ ಸ್ಥಳಾಂತರಿಸಲಾಗಿದೆ. ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ಮೊದಲಿದ್ದ ಸ್ಥಳದಲ್ಲೇ ಮುಂದುವರಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಪಿಂಜರಾಪೋಲ್ ಸಂಸ್ಥೆಯ ಸುಮತಿಲಾಲ್ ಪಗಾರಿಯಾ, ಸುರೇಂದ್ರಕುಮಾರ್, ವಿನೋದ್, ಶ್ರೀರಾಮಸೇನೆಯ ಸಂಜಯ್ ಇದ್ದರು.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಅರ್ಜಿ

ಮೈಸೂರು,ಸೆ.27–2023–24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಹೊಸ ವಿದ್ಯಾರ್ಥಿಗಳಿಗೆ (ಇದುವರೆಗೂ SSP ತಂತ್ರಾಂಶದಲ್ಲಿ ನೋಂದಣಿಯಾಗದ) ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ ssp.karna taka.gov.in ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಪೋಷಕರ ವಾರ್ಷಿಕ ಆದಾಯ ಮಿತಿಯು 1ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ರೂ. 6 ಲಕ್ಷ ಹಾಗೂ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ 2.5 ಲಕ್ಷ ಒಳಗೊಂಡಿರಬೇಕು. ಅರ್ಜಿ ಸಲ್ಲಿಸಲು ಅ.20 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರಿನ ಪಡುವಾರಹಳ್ಳಿಯಲ್ಲಿನ ಡಾ.ಬಾಬು ಜಗಜೀವನರಾಂ ಭವನ ಕಟ್ಟಡದ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ರವರ ಕಚೇರಿ ದೂ.ಸಂ: 2520910 ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ನಿಧನ



ಎನ್.ಲೀಲಮ್ಮ

ಮೈಸೂರು,ಸೆ.27–ಮೈಸೂರಿನ ಚೆಲುವಾಂಬ ಅಗ್ರಹಾರದ ನಿವಾಸಿ ಎಂ.ಆರ್.ಶ್ರೀಕಂಠ ಅವರ ಪತ್ನಿ ಎನ್.ಲೀಲಮ್ಮ (74) ಬೆಂಗಳೂರಿನಲ್ಲಿ ಬುಧವಾರ ನಿಧನರಾದರು. ಮೃತರು ಪತಿ, ಓರ್ವ ಪುತ್ರಿ, ಪುತ್ರ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಧಿಕಾರದಲ್ಲಿದ್ದಾಗ ಇರುವ ವ್ಯಕ್ತಿತ್ವ ಅದು ಹೋದಾಗಲೂ ಉಳಿಸಿಕೊಳ್ಳಬೇಕು



ಮೈಸೂರು,ಸೆ.27(ಎಸ್‌ಪಿಎನ್)–ಅಧಿಕಾರದಲ್ಲಿದ್ದಾಗ ಇರುವ ವ್ಯಕ್ತಿತ್ವ ಅಧಿಕಾರ ಹೋದಾಗಲೂ ಉಳಿಸಿಕೊಳ್ಳಲು ಪ್ರಯತ್ನಿಸಬೇಕು. ಈ ಎಲ್ಲಾ ವ್ಯಕ್ತಿತ್ವ ಪ್ರಭು ಶ್ರೀರಾಮಚಂದ್ರನಲ್ಲಿ ಕಾಣಬಹುದು ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಗಳಂವರು ಪ್ರವಚನ ಮಾಲೆಯಲ್ಲಿ ವಿವರಿಸಿದರು.

ಮೈಸೂರಿನ ಸಾಹುಕಾರ್ ಚೆನ್ನಯ್ಯ ರಸ್ತೆಯ ಟಿ.ಕೆ.ಬಡಾವಣೆ ಶ್ರೀಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ ಶ್ರೀಮದ್ರಾಮಾಯಣ ಪ್ರವಚನ ಮಾಲೆಯಲ್ಲಿ ತಿಳಿಸಿದರು.

ತನ್ನ ತಂದೆ ದಶರಥ ಮಹಾರಾಜ, ಕೈಕೇಯಿಗೆ ನೀಡಿದ್ದ ವಾಗ್ದಾನವನ್ನು ಈಡೇರಿಸಲು ಶ್ರೀರಾಮಚಂದ್ರ ಕಾಡಿಗೆ ಹೊರಟು ಅರ್ಧದಾರಿ ಕ್ರಮಿಸಿ ಬಂದಾಗಲೂ ಶ್ರೀರಾಮಚಂದ್ರನ ವ್ಯಕ್ತಿತ್ವದಲ್ಲಿ ಯಾವುದೇ ಬದಲಾವಣೆ ಆಗಿರಲಿಲ್ಲ. ಆದರೆ, ಈಗಿನ ಕಾಲದಲ್ಲಿ ಮನೆಯಿಂದ ಹೊರಗಡೆ ಬಂದಾಗ ನೆಲದ ಮೇಲೆ ಕುಳಿತುಕೊಳ್ಳಲು ಕೆಲವರು ಪರದಾಡುತ್ತಾರೆ. ಆದರೆ, ಪ್ರಭು ಶ್ರೀರಾಮಚಂದ್ರ ಅರಮನೆಯಿಂದ ಕಾಡಿಗೆ ಬಂದಾಗ ಒಂದು ಮರದ ಕೆಳಗೆ ಶ್ರೀಸಾಮಾನ್ಯನಂತೆ ಹುಲ್ಲು ಹಾಸಿನ ಮೇಲೆ ಕುಳಿತು, ವಿಶ್ರಾಂತಿ ತೆಗೆದುಕೊಳ್ಳುವ ರೂಪಕ ಎಲ್ಲರ ಮನ ಕಲಕುತ್ತದೆ ಎಂದರು. ಇದಕ್ಕೂ ಮುನ್ನ ವಿದ್ವಾನ್ ವಿಜಯೇಂದ್ರ ಆಚಾರ್ಯರು ವಿಶೇಷ ಉಪನ್ಯಾಸ ಮಾಲೆ ನಡೆಸಿಕೊಟ್ಟರು. ನಂತರ ಬೆಂಗಳೂರಿನ ವಿದುಷಿ ರೂಪಶ್ರೀ ತಂಡದ ಕಲಾವಿದರು ನೃತ್ಯಾರ್ಪಣ ನೃತ್ಯ ಪ್ರದರ್ಶನ ನಡೆಸಿಕೊಟ್ಟರು.

ಚಾತುರ್ಮಾಸ್ಯ ಸಮಾರೋಪ; ಗೋವಾ ರಾಜ್ಯಪಾಲರ ಉಪಸ್ಥಿತಿ



ಶ್ರೀಧರನ್ ಪಿಳ್ಳೈ

ಮೈಸೂರು: ಮೈಸೂರಿನಲ್ಲಿ ವೈಭವದಿಂದ ನಡೆಯುತ್ತಿರುವ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರ 36 ನೇ ಚಾತುರ್ಮಾಸ್ಯ ವ್ರತದ ಸಮಾರೋಪ ಸಮಾರಂಭ ಮತ್ತು ಶ್ರೀಗಳಿಗೆ ಗುರುವಂದನಾ ಕಾರ್ಯಕ್ರಮವು ನಾಳೆ (ಗುರುವಾರ) ಸಂಜೆ 4 ಗಂಟೆಗೆ ಶ್ರೀ ಕೃಷ್ಣಧಾಮದಲ್ಲಿ ನಡೆಯಲಿದೆ. ಆರಂಭದಲ್ಲಿ ಬೆಂಗಳೂರಿನ ಪ್ರಸಿದ್ಧ ಗಾಯಕಿ ಮೇಧಾ ವಿದ್ಯಾಭೂಷಣ್ ಅವರಿಂದ ಭಕ್ತಿಗಾನಸುಧೆ ನಡೆಯಲಿದೆ. ಸಂಜೆ 5.15 ರಿಂದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಸುತ್ತೂರು ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ ಶುಭ ಸಂದೇಶ ನೀಡುವರು. ಮುಖ್ಯ ಅಭ್ಯಾಗತರಾಗಿ ಗೋವಾ ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ ಭಾಗವಹಿಸುವರು. ಬೆಂಗಳೂರು ಪೂರ್ಣ ಪ್ರಜ್ಞ ಸಂಶೋಧನಾ ಮಂದಿರದ ನಿರ್ದೇಶಕ ಡಾ.ಆನಂದ ತೀರ್ಥ ನಾಗಸಂಪಿಗೆ ಗುರುವಂದನಾ ನುಡಿಗಳನ್ನಾಡುವರು ಚಾತುರ್ಮಾಸ್ಯ ಸಮಿತಿ ಪ್ರಮುಖರಾದ ವಾಸುದೇವಭಟ್, ಎಂ.ಕೆ.ಪುರಾಣಿಕ್, ರವಿಶಾಸ್ತ್ರಿ, ಸುಬ್ರಹ್ಮಣ್ಯ ತಂತ್ರಿ, ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಪಿ.ಎಸ್.ರಮೇಶ್ ಮೊದಲಾದವರು ಉಪಸ್ಥಿತರಿರುವರು ಎಂದು ಚಾತುರ್ಮಾಸ್ಯ ಸಮಿತಿ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಯೋಗ ದಸರಾ ಉಪಸಮಿತಿಯಿಂದ ವಿವಿಧ ಕಾರ್ಯಕ್ರಮ ಆಯೋಜನೆ

ಮೈಸೂರು,ಸೆ.27–ಮೈಸೂರು ದಸರಾ ಮಹೋತ್ಸವ, ಯೋಗ ದಸರಾ ಉಪ ಸಮಿತಿ ವತಿಯಿಂದ ಅ.15ರಂದು ಬೆಳಗ್ಗೆ 8ರಿಂದ ಸಂಜೆ 8ರವರೆಗೆ ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಭವನದಲ್ಲಿ ಯೋಗ ದಸರಾ ಉದ್ಘಾಟನೆ ಹಾಗೂ ರಾಜ್ಯ ಮಟ್ಟದ ಯೋಗ ನೃತ್ಯ ರೂಪಕ ಸ್ಪರ್ಧೆ, ಅ.16ರಂದು ಬೆಳಗ್ಗೆ 6ರಿಂದ 8ರವರೆಗೆ ನಂಜನಗೂಡು ನಂಜುಂಡೇಶ್ವರ ದೇವಸ್ಥಾನದ ಆವರಣದಲ್ಲಿ "ಗ್ರಾಮೀಣ ಯೋಗ" ಸಾಮೂಹಿಕ ಯೋಗಭ್ಯಾಸ ಮತ್ತು ಶಿವ ನಮಸ್ಕಾರ, ಅ.19ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಪಿ. ಕಾಳಿಂಗ ರಾವ್ ಸಭಾಂಗಣದಲ್ಲಿ ರಾಜ್ಯ ಮಟ್ಟದ ದಸರಾ ಯೋಗಾಸನ ಸ್ಪರ್ಧೆ ಆಯೋಜಿಸಲಾಗಿದೆ. ಅ.20ರಂದು ಬೆಳಗ್ಗೆ 6ರಿಂದ 8ರವರೆಗೆ ಜಿಲ್ಲಾ ಕಾರಾಗೃಹದಲ್ಲಿ ವಿಶಿಷ್ಟ ಯೋಗ ಜೈಲು ಹಕ್ಕಿಗಳಿಗೆ ಯೋಗಾಭ್ಯಾಸ, ಅ.22ರಂದು ಬೆಳಗ್ಗೆ 6ರಿಂದ 8ರವರೆಗೆ ಚಾಮುಂಡಿಬೆಟ್ಟದತಪ್ಪಲು ಮತ್ತು ದೇವಸ್ಥಾನದ ಆವರಣದಲ್ಲಿ ಯೋಗ ಚಾರಣ ಮತ್ತು ದುರ್ಗಾ ನಮಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮೈಸೂರು ದಸರಾ ಮಹೋತ್ಸವ ಯೋಗ ದಸರಾ ಉಪಸಮಿತಿ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 97.00 ಅಡಿ	ಇಂದಿನ ಮಟ್ಟ 2,273.59 ಅಡಿ	ಇಂದಿನ ಮಟ್ಟ 2,854.41 ಅಡಿ
ಹಿಂದಿನ ವರ್ಷದ ಮಟ್ಟ 123.92 ಅಡಿ	ಹಿಂದಿನ ವರ್ಷದ ಮಟ್ಟ 2,282.82 ಅಡಿ	ಹಿಂದಿನ ವರ್ಷದ ಮಟ್ಟ 2,857.08 ಅಡಿ
ನಿನ್ನೆಯ ಮಟ್ಟ 96.80 ಅಡಿ	ನಿನ್ನೆಯ ಮಟ್ಟ 2,273.82 ಅಡಿ	ನಿನ್ನೆಯ ಮಟ್ಟ 2,854.91 ಅಡಿ
ಇಂದಿನ ಒಳಹರಿವು 7,451 ಕ್ಯೂಸೆಕ್	ಇಂದಿನ ಒಳಹರಿವು 1,180 ಕ್ಯೂಸೆಕ್	ಇಂದಿನ ಒಳಹರಿವು 832 ಕ್ಯೂಸೆಕ್
ಇಂದಿನ ಹೊರಹರಿವು 5,691 ಕ್ಯೂಸೆಕ್	ಇಂದಿನ ಹೊರಹರಿವು 2,500 ಕ್ಯೂಸೆಕ್	ಇಂದಿನ ಹೊರಹರಿವು 2,758 ಕ್ಯೂಸೆಕ್

ಇಂದು ಮೈಸೂರಲ್ಲಿ ಈದ್ ಮೀಲಾದ್ ಮೆರವಣಿಗೆ

ಮೈಸೂರು,ಸೆ.27–ಮೈಸೂರಿನ ದಾವತೆ–ಇಸ್ಲಾಮಿ ಹಿಂದ್ ಕರ್ನಾಟಕ ವತಿಯಿಂದ ಪ್ರತಿ ವರ್ಷದಂತೆ ಜುಲೂಸ್ ಮೊಹ ಮದಿ (ಪ್ರವಾದಿ ಮೊಹಮ್ಮದ್‌ರವರ ಜನ್ಮದಿನದ ಅಂಗವಾಗಿ) ಈದ್ ಮಿಲಾದ್ ಉನ್ ನಬಿ ಮೆರವಣಿಗೆಯನ್ನು ಸೆ.28ರ ಮಧ್ಯಾಹ್ನ 2.12 ಗಂಟೆಗೆ ಲಷ್ಕರ್ ಮೊಹಲ್ಲಾ, ಅಶೋಕ ರಸ್ತೆಯಲ್ಲಿರುವ ಮಸೀದಿ ಅಜಾಮ್ ಮರ್‌ಕಾಜ್ ಅಹಲ ಸುನ್ನತೋ ಜಮಾತ್‌ನಿಂದ ಹೊರಟು, ಸಾಡೆ ರಸ್ತೆ, ಈದಿಗಾ ಮಸೀದಿ ರಸ್ತೆ, ಪುಲಿಕೇಶಿ ರಸ್ತೆ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ ರಸ್ತೆಗಳಲ್ಲಿ ಸಾಗಲಿದೆ. ಸರ್‌ಖಾಜಿಯಮಾದ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್ ಹಾಗೂ ಮುಸ್ಲಿಂ ಬಾಂಧವರು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ. ವಿವರಗಳಿಗೆ ನಾಸಿರ್‌ಖಾನ್, ಮೊ. 9900717020 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.9.2023 ಗುರುವಾರ, ಮಳೆ ನಕ್ಷತ್ರ: ಹಸ್ತ, 28.09.2023ರಿಂದ 10.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ:** ಮೂತ್ರಪಿಂಡ ರೋಗ ತಪಾಸಣಾ ಶಿಬಿರ, ಮೂತ್ರಪಿಂಡ ತಜ್ಞ ಡಾ. ಅರುಣ್ ಕೆ.ಜಿ. ಅವರ ನೇತೃತ್ವ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆಯಿಂದ.

■ **ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತು :** ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ, ಮಜಾಭಾರತ ಮತ್ತು ಗಿಚ್ಚಿಗಿಲಿಗಿಲಿ ಹಾಸ್ಯ ಕಲಾವಿದರಾದ ಚಂದ್ರಪ್ರಭ, ಬಸವರಾಜ್ ಮತ್ತು ವಿನೋದ್ ಗೊಬ್ಬರಗಾಲ ಅವರಿಂದ ಹಾಸ್ಯ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಶ್ರೀ ರಾಜಶೇಖರ ಸ್ವಾಮೀಜಿ, ಉದ್ಘಾಟನೆ : ಡಾ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಉದ್ಯಮಿ ಡಾ. ಸೀತಾರಾಮೇಗೌಡ, ವಿಶೇಷ ಆಹ್ವಾನಿತರು : ಡಾ. ಹೆಚ್.ಎಂ. ಕೃಷ್ಣಮೂರ್ತಿ, ಸ್ಥಳ: ಪುರಭವನ, ಬೆಳಗ್ಗೆ 10ಕ್ಕೆ.

■ **ಪೀಪಲ್ಸ್ ಫೋರಮ್ ಫಾರ್ ಕರ್ನಾಟಕ ಎಜುಕೇಷನ್ :** ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಶಿಕ್ಷಣ ತಜ್ಞರ ವಿಶೇಷ ಸಭೆ, ಉಪಸ್ಥಿತರು: ಶಿವಮೊಗ್ಗ ಕುವೆಂಪು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಕೆ. ಚಿದಾನಂದಗೌಡ, ಹಿರಿಯ ಪತ್ರಕರ್ತ ರವೀಂದ್ರ ರೇಷ್ಮೆ, ಬೆಂಗಳೂರು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ವೇಣುಗೋಪಾಲ್, ಸೆಸ್ ನಿರ್ದೇಶಕ ಗೌರೀಶ್, ಮಾಜಿ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ, ಸ್ಥಳ: ವಿ.ಕೆ. ಫಂಕ್ಷನ್ ಹಾಲ್, ನಜರ್‌ಬಾದ್, ಬೆಳಗ್ಗೆ 11ಕ್ಕೆ.

■ **ಯುವ ಭಾರತ್ ಸಂಘಟನೆ :** ಕ್ರಾಂತಿಕಾರಿ ಮಹಾನ್ ದೇಶಭಕ್ತ ಭಗತ್‌ಸಿಂಗ್ ಅವರ 116ನೇ ಜಯಂತ್ಯುತ್ಸವ ಅಂಗವಾಗಿ ಜೈ ಹಿಂದ್ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಮೈಸೂರು ನಗರ ಬಿಜೆಪಿ ಹಿಂದುಳಿದ ವರ್ಗದ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾನಂದೀಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಟಿ.ಎಸ್.ಗೋಪಾಲ್, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 10.00 ಹೆಚ್.ಆರ್.ಕೃತಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 1.20 ಭಾವಗೀತೆ–ಅನುಪಮಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಬಯಲು ಸಂಬಾರ ಬೆಳೆಗಳ ಬೇಸಾಯ ಕುರಿತು ಸಂಬಾರು ಮಂಡಳಿಯ ವಿಜ್ಞಾನಿ ಡಾ.ಕೆ.ಎನ್. ಹರ್ಷ ಅವರೊಂದಿಗೆ ಸಂದರ್ಶನ, 8.00 ಯುವವಾಣಿ, 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ ಬಿತ್ತಿದಂತೆ ಬೆಳೆ, ರಚನೆ– ಡಾ.ಮುರಳೀಧರ ಕಿರಣಕರೆ ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ

■ **ನಾದವಿದ್ಯಾಲಯ ಸಂಗೀತ ಮತ್ತು ನೃತ್ಯ ಅಕಾಡೆಮಿ :** ನಾದ ನೃತ್ಯೋತ್ಸವ, ಮುಖ್ಯ ಅತಿಥಿಗಳು : ಸಂಸ್ಕೃತ ವಿದ್ವಾನ್ ಡಾ. ಹೆಚ್.ವಿ. ನಾಗರಾಜರಾವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸನ್ಮಾನ : ಕಲಾವಿದೆ ಶ್ರೀಮತಿ ವಿದ್ವಾನ್ ಅರ್ಪಣಾ ಕೊಡಂಕಿರಿ, ವಿದ್ವಾನ್ ಎಂ.ಎಸ್. ನವೀನ್ ಅವರ ಶಿಷ್ಯರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಸುಬ್ರಮಣ್ಯ ಜಿ. ಕುಮಾರ್ –ಮೃದಂಗ, ವಿದ್ವಾನ್ ಚೇತನ್–ವಯೋಲಿನ್, ವಿದ್ವಾನ್ ಎಂ.ಎಸ್. ನವೀನ್ –ಕೀಬೋರ್ಡ್, ಯಶಸ್ ಎನ್. ಕಶ್ಯಪ್–ಕೊಳಲು, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ 'ಕನಕ ಜಾನಕಿ'–ಏಕವ್ಯಕ್ತಿ ತಾಳಮದ್ದಳೆ, ಪ್ರಸ್ತುತಿ : ಆಕಾಶವಾಣಿ ದಿವಾಕರ ಹೆಗಡೆ, ಹಿನ್ನೆಲೆಯಲ್ಲಿ : ಭಾಗವತರು ಅನಂತ ಹೆಗಡೆ, ದಂತಳಿಗೆ, ಮದ್ದಳೆ : ಅನಂತ ಪದ್ಮನಾಭ ಫಾಟಕರು, ಸಂಜೆ 6.45ಕ್ಕೆ ಮೈಸೂರು ಎಂ. ನಾಗರಾಜ್, ವಿದ್ವಾನ್ ಡಾ. ಮೈಸೂರು ಎಂ. ಮಂಜುನಾಥ್ ಅವರಿಂದ ದ್ವಂದ್ವ ವಯೋಲಿನ್, ವಿದ್ವಾನ್ ಉಮಯಾಳಪುರಂ ಕೆ. ಶಿವರಾಮನ್–ಮೃದಂಗ, ವಿದ್ವಾನ್ ಗುರುಪ್ರಸನ್ನ–ಖಂಜಿರ, ಸ್ಥಳ: 8ನೇ ಕ್ರಾಸ್, ವಿ.ವಿ.ಮೊಹಲ್ಲಾ.

■ **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು – ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣಧಾಮ :** ಸಂಜೆ 6ಕ್ಕೆ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯ ವ್ರತ ಸಮಾರೋಪ ಮತ್ತು ಅಭಿವಂದನ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ದಿವ್ಯೋಪಸ್ಥಿತಿ : ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಪ್ರಧಾನ ಅಭ್ಯಾಗತರು : ಗೋವಾ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ, ಅಭಿವಂದನ ಭಾಷಣ : ಶ್ರೀ ಪೂರ್ಣಪ್ರಜ್ಞ ಸಂಶೋಧನಾ ಮಂದಿರದ ನಿರ್ದೇಶಕರಾದ ಡಾ. ಆನಂದತೀರ್ಥಾಚಾರ್ಯ ನಾಗಸಂಪಿಗೆ, ಸಂಜೆ 4.30ಕ್ಕೆ ವಿದುಷಿ ಮೇಧಾ ವಿದ್ಯಾಭೂಷಣ್ ಅವರಿಂದ ಹರಿದಾಸ ಕೀರ್ತನೆ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ.

■ **ರಂಗಾಯಣ :** ರಂಗಾಯಣದ ರೆಪರ್ಟರಿ ಕಲಾವಿದರಿಂದ ಕಸಾಂದ್ರ ಮತ್ತು ಸತಿ ನಾಟಕ ಪ್ರದರ್ಶನ, ರಚನೆ: ಹೆಚ್.ಎಸ್. ಶಿವಪ್ರಕಾಶ್, ನಿರ್ದೇಶನ : ಬಿ.ಆರ್. ವೆಂಕಟರಮಣ ಐತಾಳ, ಸಂಗೀತ : ದಿಗ್ವಿಜಯ ಹೆಗ್ಗೋಡು, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಆಕರ್ಷಕ ಮೆರವಣಿಗೆ ಮೂಲಕ ಮೈಸೂರಲ್ಲಿ ವಿಶ್ವ ಪ್ರವಾಸೋದ್ಯಮ ದಿನ ಆಚರಣೆ



ಮೈಸೂರಿನ ಅರಮನೆ ಆವರಣದಲ್ಲಿ ನಡೆದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಸಂದರ್ಭ ಸಾಂಪ್ರದಾಯಿಕ ಕೊಡವ ಧಿರಿಸಿನೊಂದಿಗೆ ವಿದೇಶಿ ಪ್ರವಾಸಿಗರಿಗೆ ಆರತಿ ಮಾಡಿ, ಗುಲಾಬಿ ಹೂ ಹಾಗೂ ಮೈಸೂರು ಪಾಕ್ ನೀಡಿ ಸ್ವಾಗತಿಸಲಾಯಿತು. ಡಿಸಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಉಪ ಮೇಯರ್ ಡಾ.ರೂಪಾ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಬಿ.ಎಸ್.ಪ್ರಶಾಂತ್, ಸಿ.ಎ.ಜಯಕುಮಾರ್, ಎಸಿ ರವಿ, ಭಾಸ್ಕರ್ ಶೆಟ್ಟಿ ಇತರರಿದ್ದಾರೆ.

ಮೈಸೂರು,ಸೆ.27(ಆರ್‌ಕೆ)– ಮೈಸೂರಿನಲ್ಲಿ ವಿಶ್ವ ಪ್ರವಾಸೋದ್ಯಮ ದಿನವನ್ನು ಬುಧವಾರ ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು. ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಅರಮನೆ ಮಂಡಳಿ, ಮೈಸೂರು ಟ್ರಾವೆಲ್ ಅಸೋಸಿಯೇಷನ್ ಹಾಗೂ ಹೋಟೆಲು ಮಾಲೀಕರ ಸಂಘದ ಸಂಯುಕ್ತಾಶ್ರಯದಲ್ಲಿ ಅರಮನೆ ವರಹಾ ದ್ವಾರದ ಬಳಿ ವಿದೇಶಿ ಪ್ರವಾಸಿಗರಿಗೆ ಆರತಿ ಮಾಡಿ, ಗುಲಾಬಿ, ಮೈಸೂರು ಪಾಕ್ ಸಿಹಿ ನೀಡುವ ಮೂಲಕ ಬರಮಾಡಿಕೊಳ್ಳಲಾಯಿತು.

ಇದೇ ಮೊದಲ ಬಾರಿ ದಸರಾ ಆನೆಗಳನ್ನು ಬಳಸಿಕೊಂಡು ಮೆರವಣಿಗೆ ನಡೆಸುವ ಮೂಲಕ ವಿಶೇಷ ರೀತಿಯಲ್ಲಿ ವಿಶ್ವ ಪ್ರವಾಸೋದ್ಯಮ ದಿನವನ್ನು ಅರ್ಥಗರ್ಭಿತವಾಗಿ ಆಚರಿಸಲಾಯಿತು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ವರ್ಣರಂಜಿತ ಮೆರವಣಿಗೆಗೆ ಚಾಲನೆ ನೀಡಿದರು.

ಮಹಿಳೆಯರು ಕೊಡವ ಸಾಂಪ್ರದಾಯಿಕ ಉಡುಗೆ ಧರಿಸಿದರೆ, ಪುರುಷರೂ ಸಹ ಸಾಂಪ್ರದಾಯಿಕ ಧಿರಿಸಿನೊಂದಿಗೆ ಪಾಲ್ಗೊಂಡು ಮೆರವಣಿಗೆಗೆ ಮೆರಗು ನೀಡಿದರು. ಅರಮನೆ ಆವರಣದ ವರಹಾ ದ್ವಾರದ ಬಳಿಯಿಂದ ಆರಂಭವಾದ ಮೆರವಣಿಗೆಯು ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದ, ಕೆ.ಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್ ತಲುಪಿ ಮರಳಿ ಅದೇ ಮಾರ್ಗದಲ್ಲಿ ಸಾಗಿ ಅರಮನೆಯಲ್ಲಿ ಅಂತ್ಯವಾಯಿತು. ದಸರಾ ಗಜಪಡೆಯ ಅರ್ಜುನ, ಧನಂಜಯ, ಮಹೇಂದ್ರ, ವರಲಕ್ಷ್ಮಿ ಹಾಗೂ ವಿಜಯ ಮೆರವಣಿಗೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು. ಅಶ್ವಾರೋಹಿ ದಳ, ಕೊಡವ ಮಹಿಳೆಯರು ಮತ್ತು ಪುರುಷರು, ಜಾನಪದ ಕಲಾತಂಡಗಳು, ಟಿಬೆಟಿಯನ್ ತಂಡ, ಟಾಂಗಾ, ಮಹಾಜನ ಕಾಲೇಜಿನ ಪ್ರವಾಸೋದ್ಯಮ ವಿಭಾಗದ ವಿದ್ಯಾರ್ಥಿಗಳು, ಸಾರೋಟುಗಳು, ಬಲೂನುಗಳಿಂದ ಅಲಂಕೃತಗೊಂಡ ತೆರೆದ ಜೀಪುಗಳು, ಕಾರುಗಳು, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದ ಸ್ವಯಂ ಸೇವಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಉಪಮೇಯರ್ ಡಾ.ಜಿ.ರೂಪಾ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್ಪಿ ಸೀಮಾ ಲಾಟ್ಕರ್, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಕೆ.ಎಂ.ಗಾಯತ್ರಿ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಸಹಾಯಕ ನಿರ್ದೇಶಕ ರಾಘವೇಂದ್ರ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ರಾಘವೇಂದ್ರ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ರಾಘವೇಂದ್ರ, ವಾರ್ತಾ ಮತ್ತು ಸಾರ್ವಜನಿಕ ಪ್ರಚಾರ ಇಲಾಖೆ ಉಪನಿರ್ದೇಶಕ ಅಶೋಕ್, ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಡಿಸಿಪಿ ಎಂ.ಮುತ್ತುರಾಜ್, ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಮೈಸೂರು ಟ್ರಾವೆಲ್ ಅಸೋಸಿಯೇಷನ್‌ನ ಸಿ.ಎ.ಜಯಕುಮಾರ್, ಬಿ.ಎಸ್.ಪ್ರಶಾಂತ್, ಎಸಿ ರವಿ, ಅನಿಲ್, ಅರುಣ್, ಚಂದ್ರಶೇಖರ್, ಭಾಸ್ಕರ್ ಶೆಟ್ಟಿ, ಡಿಸಿಪಿ ಎಂ. ಮುತ್ತುರಾಜ್, ಎಸಿಪಿ ಶಾಂತಮಲ್ಲಪ್ಪ ಸೇರಿದಂತೆ ಹಲವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಇದೇ ವೇಳೆ ಜಿಲ್ಲಾಧಿಕಾರಿಗಳು, ನಗರ ಪೊಲೀಸ್ ಆಯುಕ್ತ ಎಸ್ಪಿ ಸೀಮಾ ಲಾಟ್ಕರ್, ಡಿಸಿಪಿ ಎಂ.ಮುತ್ತುರಾಜ್ ಹಾಗೂ ಇತರರು ಮೆರವಣಿಗೆಯಲ್ಲಿ ಸಾಗಿದರು.

ಡಿಸಿ, ಪೊಲೀಸ್ ಆಯುಕ್ತರ ಸಾರೋಟ್ ಸವಾರಿ



ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಡಿಸಿಪಿ ಎಂ.ಮುತ್ತುರಾಜ್ ಬುಧವಾರ ಸಾರೋಟು ಸವಾರಿ ಮಾಡಿ, ಸಂಭ್ರಮಿಸಿದರು.



ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಬಾಗಿದ ಕೊಂಬೆಗಳ ತೆರವು ಕಾರ್ಯಾಚರಣೆ



ಮೈಸೂರು,ಸೆ.27(ಎಂಟಿವೈ)– ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆ ಮಾರ್ಗದಲ್ಲಿ ರಸ್ತೆಗೆ ಚಾಚಿ, ಬಾಗಿದ ಮರಗಳ ಕೊಂಬೆ ತೆರವು ಕಾರ್ಯಾಚರಣೆ ಆರಂಭವಾಗಿದೆ.

ಅರಮನೆಯಿಂದ ಬನ್ನಿಮಂಟಪದವರೆಗೂ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಹಲವೆಡೆ ಮರಗಳ ಕೊಂಬೆಗಳು ರಸ್ತೆಗೆ ಬಾಗಿಕೊಂಡಿದ್ದು, ಸುಗಮ ಸವಾರಿಗೆ ಅಡಚಣೆಯಾಗಿವೆ. ಈ ನಿಟ್ಟಿನಲ್ಲಿ ಇಂತಹ ಬಾಗಿರುವ ಕೊಂಬೆಗಳನ್ನು ಕತ್ತರಿಸುವ ಪ್ರಕ್ರಿಯೆ ಆರಂಭಿಸಲಾಗಿದೆ.

ಜಂಬೂಸವಾರಿಗೆ 28 ದಿನ ಬಾಕಿ ಇದ್ದು, ಈ ಹಿನ್ನೆಲೆಯಲ್ಲಿ ಸಿದ್ಧತಾ ಕಾರ್ಯ ಚುರುಕುಗೊಳಿಸಲಾಗಿದೆ. ಬುಧವಾರ ಪಾಲಿಕೆ ವತಿಯಿಂದ ಬಾಗಿರುವ ಕೊಂಬೆಗಳ ಕತ್ತರಿಸುವ ಕಾರ್ಯಾಚರಣೆ ಆರಂಭಿಸಲಾಗಿದೆ. ಪಾಲಿಕೆ ಸಿಬ್ಬಂದಿ ಕಾರ್ಯಾಚರಣೆ ಪೂರ್ಣಗೊಳಿಸಿದ ನಂತರ ಚೆಸ್ಕಾಂ ತಂಡವು ಮಾರ್ಗದುದ್ದಕ್ಕೂ ಪರಿಶೀಲನೆ ಮಾಡಲಿದೆ. ಆನೆ ಮೇಲಿನ ಅಂಬಾರಿಯ ಎತ್ತರವನ್ನು ಪರಿಗಣಿಸಿ ಕೊಂಬೆ ಕತ್ತರಿಸುವ ಹಾಗೂ ವಿದ್ಯುತ್ ದೀಪಾಲಂಕಾರಕ್ಕೆ ಕಟ್ಟುವ ತಂತಿ ಎಷ್ಟು ಎತ್ತರದಲ್ಲಿರಬೇಕೆಂದು ನಿರ್ಧರಿಸಲಾಗುತ್ತದೆ. ಈಗಾಗಲೇ ಚೆಸ್ಕಾಂ ಬಳಿ ಅಂಬಾರಿ ಎತ್ತರಕ್ಕೆ ಅನುಗುಣವಾಗಿ ಬಿದಿರು ಕೋಲು(ಗಳ)ವೊಂದನ್ನು ಇಟ್ಟುಕೊಂಡಿದ್ದು, ಅದರಿಂದ ನಿಗದಿತ ಎತ್ತರ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಆನೆಗೆ ಮರದ ಅಂಬಾರಿ ಕಟ್ಟಿ ತಾಲೀಮು ಆರಂಭಿಸಿದ ನಂತರ ಜಂಬೂಸವಾರಿ ಮಾರ್ಗದಲ್ಲಿ ಕೈಗೊಳ್ಳಬೇಕಾದ ಇನ್ನಷ್ಟು ಮಾರ್ಪಾಡುಗಳನ್ನು ಮಾಡಲಾಗುತ್ತದೆ. ಪಾಲಿಕೆ ವತಿಯಿಂದ ಈಗ ತೆರವು ಮಾಡುವ ಬಾಗಿರುವ ಮರದ ಕೊಂಬೆಗಳ ಸ್ಥಿತಿಗತಿ ಬಗ್ಗೆ ಮತ್ತಷ್ಟು ಸ್ಪಷ್ಟತೆ ಮರದ ಅಂಬಾರಿ ತಾಲೀಮಿನ ವೇಳೆ ಗೊತ್ತಾಗುವುದರಿಂದ ಮತ್ತೊಂದು ಸುತ್ತಿನ ಕಾರ್ಯಾಚರಣೆ ನಡೆಸಲಾಗುತ್ತದೆ. ಇಂದು ಕೆ.ಆರ್.ವೃತ್ತದಿಂದ ಕೆ.ಆರ್.ಆಸ್ಪತ್ರೆವರೆಗೂ ಸಯ್ಯಾಜಿರಾವ್ ರಸ್ತೆಯಲ್ಲಿ ಗುಲ್‌ಮೊಹರ್ ಮರದ ಬಾಗಿರುವ ರೆಂಬೆಗಳನ್ನು ತೆರವುಗೊಳಿಸಲಾಯಿತು. 5ಕ್ಕೂ ಹೆಚ್ಚು ಮಂದಿ ಪಾಲಿಕೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿದ್ದರು.

ನಿವೃತ್ತ ಸಮಾಜಶಾಸ್ತ್ರ ಪ್ರಾಧ್ಯಾಪಕರು, ಅಂಕಣಕಾರರಾದ ಪ್ರೊ.ಇಂದಿರಾಗೆ 'ರೋಟರಿ ಮೈಸೂರು ಮಿಡ್‌ಟೌನ್-ಅಮರವಾಣಿ' ಪ್ರಶಸ್ತಿ ಪ್ರದಾನ

ಮಹಿಳಾ ಮಸೂದೆ ಜಾರಿ ಬಗ್ಗೆ ಜನರಲ್ಲಿ ಇನ್ನೂ ಗೊಂದಲವಿದೆ: ಪ್ರೊ.ಉಮಾಪತಿ

ಮೈಸೂರು,ಸೆ.27(ಎಸ್‌ಪಿಎನ್)–ಕಳೆದ 30 ವರ್ಷಗಳ ಸುದೀರ್ಘ ಪ್ರಸ್ತಾಪದ ಬಳಿಕ ರಾಜ್ಯಗಳ ವಿಧಾನಸಭೆಗಳು ಮತ್ತು ಲೋಕಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ 'ಮಹಿಳಾ ಮೀಸಲಾತಿ ಮಸೂದೆ ಮಂಡನೆಯಾಗಿ, ಎರಡೂ ಸದನದಲ್ಲೂ ಪಾಸಾಗಿದ್ದರೂ ಅದು ಜಾರಿಗೆ ಬರುತ್ತದೋ, ಇಲ್ಲವೋ ಎಂಬ ಗೊಂದಲ, ಸಾರ್ವಜನಿಕವಾಗಿ ಮೂಡುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ರಾಜ್ಯಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಂ.ಉಮಾಪತಿ ಅಭಿಪ್ರಾಯಪಟ್ಟರು.

ಮೈಸೂರು ಝಾನ್ಸಿರಾಣಿ ಲಕ್ಷ್ಮೀಬಾಯಿ (ಜೆಎಲ್‌ಬಿ) ರಸ್ತೆಯಲ್ಲಿನ ಐಡಿಯಲ್ ಜಾವಾ ರೋಟರಿ ಕೇಂದ್ರ ಸಭಾಂಗಣದಲ್ಲಿ ರೋಟರಿ ಕ್ಲಬ್ ಮೈಸೂರು ಮಿಡ್‌ಟೌನ್ ಮತ್ತು ಪ್ರೊ.ಎಂ.ಜಿ.ನಂಜುಂಡಾರಾಧ್ಯ ಸ್ಮಾರಕ ಸಹಯೋಗದೊಂದಿಗೆ ವಿವಿಧ ಸಾಧಕರಿಗೆ ಕೊಡಮಾಡುವ 'ರೋಟರಿ ಮೈಸೂರು ಮಿಡ್‌ಟೌನ್–ಅಮರವಾಣಿ' ಪ್ರಶಸ್ತಿಯನ್ನು ಬೆಂಗಳೂರಿನ ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸಮಾಜ ವಿಜ್ಞಾನ ಸಂಸ್ಥೆಯ ಪ್ರತಿಷ್ಠಿತ ಪ್ರಾಧ್ಯಾಪಕರೂ (ಪ್ರೊಫೆಸರ್ ಆಫ್ ಎಮಿನೆನ್ಸ್) ಆದ ಹಿರಿಯ ಅಂಕಣಕಾರರಾದ ಪ್ರೊ.ಆರ್.ಇಂದಿರಾ ಅವರಿಗೆ ಪ್ರದಾನ ಮಾಡಿ, ಮಾತನಾಡಿದರು.

ಮೈಸೂರು ವಿವಿಯ ಸಮಾಜಶಾಸ್ತ್ರ ವಿಭಾಗದಲ್ಲಿ ಸುಮಾರು 42 ವರ್ಷಗಳ ಕಾಲ ಸೇವೆ ಸಲ್ಲಿಸಿ, ಮಹಿಳಾ ಅಧ್ಯಯನ ಕೇಂದ್ರ ಮತ್ತು ಅಂತರರಾಷ್ಟ್ರೀಯ ಕೇಂದ್ರದ ನಿರ್ದೇಶಕರಾಗಿ ಪ್ರೊ.ಇಂದಿರಾ ಸೇವೆ ಸಲ್ಲಿಸಿದ್ದಾರೆ. ಅದರಲ್ಲೂ ವಿಶೇಷವಾಗಿ ಮಹಿಳೆಯರ ಶೋಷಣೆ ಬಗ್ಗೆ ವಿವಿಧ ಹಂತದ ವೇದಿಕೆಗಳಲ್ಲಿ ದನಿಯಾಗಿ, ಸರ್ಕಾರದ ಗಮನ ಸೆಳೆಯುವಲ್ಲಿ ಇವರ ಪಾತ್ರ ಪ್ರಮುಖವಾಗಿದೆ. ಅಲ್ಲದೆ, ಕಳೆದ ವಾರ ನೂತನ ಸಂಸತ್ ಭವನದ ಉದ್ಘಾಟನಾ ಅಂಗವಾಗಿ ಕೇಂದ್ರ ಸರ್ಕಾರ ವಿಶೇಷ ಅಧಿವೇಶನ ನಡೆಸಿ, ಕಳೆದ 30 ವರ್ಷಗಳಿಂದ ಚರ್ಚೆಗೆ ಸೀಮಿತವಾಗಿದ್ದ ಮಹಿಳಾ ಮೀಸಲಾತಿ ಮಸೂದೆಯನ್ನು ಎರಡೂ ಸದನಗಳಲ್ಲೂ ಪಾಸ್ ಆಗಿದೆ. ಆದರೆ, ಇದು ಜಾರಿಗೆ ಬರುತ್ತೋ? ಇಲ್ಲವೋ ಎಂಬ ಅನುಮಾನ ವ್ಯಕ್ತಪಡಿಸಿ, 'ಮೈಸೂರು ಮಿತ್ರ'ನ ಸೆ.21ರ ಪುಟ 4ರಲ್ಲಿ ಸಮಾಜಮುಖಿ ಅಂಕಣದಲ್ಲಿ "ಬಹುಜನರಿಗೆ ಗಗನಕುಸುಮ ಆಗದಿರಲಿ ಮಹಿಳಾ ಮೀಸಲಾತಿ' ಶೀರ್ಷಿಕೆಯಡಿ ಪ್ರೊ.ಆರ್.ಇಂದಿರಾ ಅವರು ಬಹುಸೊಗಸಾಗಿ ವಿವರಿಸಿದ್ದಾರೆ ಎಂದರು.

ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಬಿಲ್ ಯಾವಾಗ ಮಂಡನೆಯಾಯಿತು. ಯಾರು ಯಾರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಎಷ್ಟು ಬಾರಿ ಸಂಸತ್‌ನಲ್ಲಿ ಮಂಡನೆಯಾಗಿದೆ ಎಂಬುದರ ಅಂಕಿ–ಅಂಶಗಳು ಈ ಅಂಕಣದಲ್ಲಿ ಉಲ್ಲೇಖವಾಗಿದೆ. ಅಲ್ಲದೆ, ಮುಂದಿನ ಹಂತದವರೆಗೂ ಶೇ.33ರಷ್ಟು ಮಹಿಳಾ ಮೀಸಲಾತಿ ಜಾರಿ ಏಕೆ ಸಾಧ್ಯವಿಲ್ಲ ಎಂಬುದರ ಸವಿವರ ಈ ಅಂಕಣದಲ್ಲಿದೆ. ಈ ಅಂಕಣವನ್ನು ನಾನು ಮೊನ್ನೆ (ಸೋಮವಾರ) ಓದಿದೆ. ನೀವು ಸಹ ಅಂಕಣವನ್ನು ಓದುವಂತೆ ಸಭಿಕರಿಗೆ ಮನವಿ ಮಾಡಿದರು. ಇಂತಹ ಮಹಾನ್ ಸಾಧಕರಾದ ಪ್ರೊ.ಆರ್.ಇಂದಿರಾ ಅವರಿಗೆ, ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಹಾಗೂ ಆಸ್ಥಾನ ವಿದ್ವಾನ್ ಪ್ರೊ.ಎಂ.ಜಿ.ನಂಜುಂಡಾರಾಧ್ಯ ಅವರ ಕಾವ್ಯನಾಮ 'ಅಮರವಾಣಿ' ಹೆಸರಿನಲ್ಲಿ ಪ್ರಶಸ್ತಿ ನೀಡಿ, ಗೌರವಿಸುತ್ತಿರುವುದು ಸಂತೋಷದ ಸಂಗತಿ ಎಂದರು. ಪ್ರಶಸ್ತಿ ಸ್ಥಾಪಕ ರೊ.ಡಾ.ಎಂ.ಎನ್.ಭೀಮೇಶ್ ಪ್ರಾಸಾವಿಕ ನುಡಿಗಳನ್ನಾಡುತ್ತ, ಕಳೆದ 15 ವರ್ಷಗಳಿಂದ ಪ್ರೊ.ಎಂ.ಜಿ.ನಂಜುಂಡಾರಾಧ್ಯ ಸ್ಮಾರಕ ಮತ್ತು ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ 'ಅಮರವಾಣಿ' ಹೆಸರಿನಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ಪ್ರೊ.ಎಂ.ಎಸ್.ಗೋಪಾಲ್, ಪ್ರೊ.ಎಂ.ಆರ್.ಚಿಂತಾಮಣಿ, ಪ್ರೊ.ಎ.ಪದ್ಮಾಜಿ, ಪ್ರೊ. ಎ.ಎಸ್.ಜಯರಾಂ, ಪ್ರೊ.ಸೂರ್ಯನಾರಾಯಣಸ್ವಾಮಿ, ವಿದ್ವಾನ್ ಹೆಚ್.ವಿ.ನಾಗರಾಜರಾವ್, ಪ್ರೊ. ಸಿ.ಎನ್.ಮಂಜಪ್ಪ, ಪ್ರೊ.ಎನ್.ಎಸ್.ತಾರಾನಾಥ್, ಡಾ.ನಿರಂಜನವಾನಳ್ಳಿ, ಪ್ರೊ.ಹೆಚ್.ಎಸ್.ಉಮೇಶ್, ಪ್ರೊ.ಶುಭಚಂದ್ರ, ಎಸ್.ತಿಪ್ಪೇಸ್ವಾಮಿ, ಡಾ.ಪರ್ವತ ರಾಜು, ಡಾ.ಸಿಕೆಎನ್.ರಾಜ, ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಅವರು, ಈ ಗೌರವಕ್ಕೆ ಪಾತ್ರರಾಗಿದ್ದಾರೆ ಎಂದು ತಿಳಿಸಿದರು. ಈ ವೇಳೆ ರೊ. ಡಾ.ಎಂ.ಎನ್.ಭೀಮೇಶ್, ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ರೊ.ಡಿ.ಶ್ರೀನಿವಾಸ, ಗೌರವ ಕಾರ್ಯದರ್ಶಿ ರೊ.ಸತ್ಯೇಂದ್ರ ಕಶ್ಯಪ್, ಪ್ರೊ.ಪಂಡಿತಾರಾಧ್ಯ ಸೇರಿದಂತೆ ಇತರರಿದ್ದರು.



ರೋಟರಿ ಕ್ಲಬ್ ಮೈಸೂರು ಮಿಡ್‌ಟೌನ್ ಮತ್ತು ಪ್ರೊ.ಎಂ.ಜಿ.ನಂಜುಂಡಾರಾಧ್ಯ ಸ್ಮಾರಕ ಸಹಯೋಗದೊಂದಿಗೆ ವಿವಿಧ ಸಾಧಕರಿಗೆ ಕೊಡ ಮಾಡುವ 'ರೋಟರಿ ಮೈಸೂರು ಮಿಡ್‌ಟೌನ್–ಅಮರವಾಣಿ' ಪ್ರಶಸ್ತಿಯನ್ನು ಹಿರಿಯ ಅಂಕಣಕಾರರಾದ ಪ್ರೊ.ಆರ್.ಇಂದಿರಾ ಅವರಿಗೆ ಪ್ರದಾನ ಮಾಡಲಾಯಿತು.



3ನೇ ಏಕದಿನ ಪಂದ್ಯ: ಆಸ್ಟ್ರೇಲಿಯಾಗೆ 66 ರನ್‌ಗಳ ಜಯ; ಭಾರತಕ್ಕೆ ಸರಣಿ

ರಾಜ್‌ಕೋಟ್: ರಾಜ್‌ಕೋಟ್‌ನಲ್ಲಿ ನಡೆದ ಆಸ್ಟ್ರೇಲಿಯಾ–ಭಾರತದ ನಡುವಿನ 3ನೇ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ಭಾರತದ ವಿರುದ್ಧ 66 ರನ್‌ಗಳ ಜಯ ಗಳಿಸಿದೆ. ಆದರೆ ಸರಣಿಯಲ್ಲಿ 2 ಪಂದ್ಯಗಳನ್ನು ಗೆದ್ದಿರುವ ಭಾರತ ಸರಣಿಯನ್ನು ವಶಪಡಿಸಿಕೊಂಡಿದೆ. ಆಸ್ಟ್ರೇಲಿಯಾ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿ ಭಾರತಕ್ಕೆ 352 ರನ್ ಕಲೆ ಹಾಕಿತು. ಆಸ್ಟ್ರೇಲಿಯಾ ನೀಡಿದ ಗುರಿ ಬೆನ್ನಟ್ಟಿದ ಭಾರತಕ್ಕೆ 49.4 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 286 ರನ್‌ಗಳನ್ನು ಗಳಿಸಲು ಮಾತ್ರ ಸಾಧ್ಯವಾಯಿತು. ಭಾರತದ ಪರ ರೋಹಿತ್ ಶರ್ಮಾ 57 ಎಸೆತಗಳಲ್ಲಿ 81 ರನ್ ಗಳಿಸಿದರಾದರೂ ಏಕಾಂಗಿ ಹೋರಾಟವಾಯಿತು. ವಿರಾಟ್ ಕೊಹ್ಲಿ (61 ಎಸೆತಗಳಲ್ಲಿ 56 ರನ್) ಹಾಗೂ ಶ್ರೇಯಸ್ ಅಯ್ಯರ್ (43 ಎಸೆತಗಳಲ್ಲಿ 48 ರನ್) ಗಳಿಸಿ ಭಾರತದ ಗೆಲುವಿನ ಆಸೆಯನ್ನು ಜೀವಂತವಾಗಿರಿಸಿದ್ದರು. ಆದರೆ ಮ್ಯಾಕ್ಸ್‌ವೆಲ್ ಈ ಜೊತೆಯಾಟವನ್ನು ಮುರಿದ ಪರಿಣಾಮ ಭಾರತದ ಗೆಲುವಿನ ಆಸೆ ಕಮರಿತು.

ಜಂಬೋಪಡೆ 14 ಆನೆಗಳಿಗೂ ಭಾರ ಬಲಾಢ್ಯತೆ ಪರೀಕ್ಷೆ: ಅರ್ಜುನನೇ ಬಲಿಷ್ಠ



- 21 ದಿನದಲ್ಲಿ 315 ಕೆಜಿ ತೂಕ ಹೆಚ್ಚಿಸಿಕೊಂಡ ಭೀಮ
- ಕ್ಯಾಪ್ಟನ್ ಅಭಿಮನ್ಯು 140 ಕೆಜಿ, ಹೊಸ ಆನೆ ಕಂಜನ್ 155 ಕೆಜಿ, ವರಲಕ್ಷ್ಮಿ 150 ಮಹೇಂದ್ರ 135 ಕೆಜಿ ತೂಕ ಹೆಚ್ಚಳ

ಗಜಪಡೆಯ ಆನೆಗಳು ಆರೋಗ್ಯದಿಂದಿವೆ

ದಸರಾ ಗಜಪಡೆಯ ಎಲ್ಲಾ ಆನೆಗಳಿಗೂ ಅರಮನೆ ಆವರಣದಲ್ಲಿ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಅವುಗಳ ಆರೋಗ್ಯದ ಮೇಲೆ ಕಾಳಜಿ ಇಡಲಾಗಿದೆ. ಪೌಷ್ಟಿಕ ಆಹಾರ ಸೇವಿಸುತ್ತಿರುವ ಹಿನ್ನೆಲೆಯಲ್ಲಿ ಮೊದಲ ತಂಡದ ಆನೆಗಳ ತೂಕ ಹೆಚ್ಚಾಗಿದೆ. ಇದರಿಂದ ಎಲ್ಲಾ ಆನೆಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿವೆ. ಹೊಸ ಆನೆಗಳು ತಾಲೀಮಿನಲ್ಲಿ ಉತ್ತಮವಾಗಿ ಪಾಲ್ಗೊಳ್ಳುತ್ತಿವೆ. ಭೀಮ 315 ಕೆಜಿ ತೂಕ ಹೆಚ್ಚಿಸಿಕೊಂಡಿದ್ದಾನೆ.

–ಸೌರಭ್‌ಕುಮಾರ್, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಮೈಸೂರು,ಸೆ.27(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಎರಡೂ ತಂಡಗಳ 14 ಆನೆಗಳಿಗೆ ಬುಧವಾರ ತೂಕದ ಪರೀಕ್ಷೆ ಮಾಡಿಸಲಾಯಿತು. ಮಾಜಿ ಕ್ಯಾಪ್ಟನ್ ಅರ್ಜುನ ಎಲ್ಲಾ ಆನೆಗಳಿಗಿಂತ ಹೆಚ್ಚು ತೂಗಿದ್ದಾನೆ. ಪೌಷ್ಟಿಕ ಆಹಾರ ಸೇವನೆಯಿಂದ 21 ದಿನದಲ್ಲೇ ಭರವಸೆಯ ಆನೆ ಭೀಮ 315 ಕೆಜಿ ತೂಕ ಹೆಚ್ಚಿಸಿಕೊಂಡು ಬೀಗಿದ್ದಾನೆ.

ಎರಡನೇ ತಂಡ ಆನೆಗಳು ಸೆ.25ರಂದು ಅರಮನೆ ಆವರಣಕ್ಕೆ ಆಗಮಿಸಿದ್ದವು. ಸಂಪ್ರದಾಯದಂತೆ ಆನೆಗಳು ಅರಮನೆಗೆ ಬಂದಾಗ ತೂಕ ಮಾಡಿಸುವ ಪದ್ಧತಿ ರೂಢಿಯಲ್ಲಿದ್ದು, ಮೊದಲ ತಂಡದ 9 ಆನೆಗಳಲ್ಲಿ ಅರ್ಜುನ ಹೊರತುಪಡಿಸಿ 8 ಆನೆಗಳಿಗೆ ಸೆ.6ರಂದು ತೂಕ ಮಾಡಿಸಲಾಗಿತ್ತು. ಹುಲಿ ಸೆರೆ ಕಾರ್ಯಾಚರಣೆಗೆ ತೆರಳಿ ವಾಪಸ್ಸಾಗಿದ್ದ ಅರ್ಜುನ ಹಾಗೂ ಎರಡನೇ ತಂಡದ 5 ಆನೆಗಳು ಸೇರಿದಂತೆ ಅರಣ್ಯ ಇಲಾಖೆ ಬುಧವಾರ ಬೆಳಗ್ಗೆ ಎಲ್ಲಾ 14 ಆನೆಗಳಿಗೆ ತೂಕ ಮಾಡಿಸಿ, ದಾಖಲೀಕರಿಸಲಾಯಿತು. ಅರಮನೆಯ ಬಲರಾಮ ದ್ವಾರದಿಂದ ಬೆಳಗ್ಗೆ ಹೊರಬಂದ ಗಜಪಡೆ ಕೆ.ಆರ್.ವೃತ್ತದ ಮೂಲಕ ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ ಮೂಲಕ ಸಾಯಿರಾಮ್ ಅಂಡ್ ಕೋ. ವೇ–ಬ್ರಿಡ್ಜ್‌ಗೆ ಕರೆತರಲಾಯಿತು. ನಂತರ ಒಂದೊಂದೇ ಆನೆಯನ್ನು ತೂಕ ಮಾಡಿಸಲಾಯಿತು. 14 ಆನೆಗಳಲ್ಲಿ ಅರ್ಜುನನೇ ತೂಕದಲ್ಲಿ ಮುಂದೆ ಇದ್ದರೆ, ಹಿರಿಯ ಹೆಣ್ಣಾನೆ ವಿಜಯ 2885 ಕೆಜಿ ತೂಗುವ ಮೂಲಕ ಕೊನೆಯಲ್ಲಿದ್ದಾಳೆ.

ಆನೆಗಳ ಬಲಾಬಲ: ಅಂಬಾರಿ ಆನೆ ಅಭಿಮನ್ಯು 5300ಕೆಜಿ, ಅರ್ಜುನ 5680, ಗೋಪಿ 5145, ಸುಗ್ರೀವ 5035, ಧನಂಜಯ 4990, ಪ್ರಶಾಂತ 4970, ಭೀಮ 4685, ಮಹೇಂದ್ರ 4665, ಕಂಜನ್ 4395, ರೋಹಿತ 3350 ಕೆಜಿ, ಹೆಣ್ಣಾನೆಗಳಾದ ಹೊಸ ಆನೆ ಲಕ್ಷ್ಮೀ 3235, ವರಲಕ್ಷ್ಮೀ 3170, ಹೊಸ ಆನೆ ಹಿರಣ್ಯ 2915, ಹಿರಿಯ ಆನೆ ವಿಜಯ 2885 ಕೆಜಿ ತೂಗಿದ್ದಾಳೆ.

21 ದಿನದಲ್ಲೇ ತೂಕದಲ್ಲಿ ಹೆಚ್ಚಳ: ಮೊದಲ ತಂಡದ 9 ಆನೆಗಳನ್ನು ಸೆ.1ರಂದು ಗಜಪಯಣದ ಮೂಲಕ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನಕ್ಕೆ ಕರೆತರಲಾಗಿತ್ತು. ಸೆ.5ರಂದು ಅರಮನೆ ಪ್ರವೇಶಿಸಿದ್ದ ಗಜಪಡೆಗೆ ಸೆ.6ರಿಂದ ಪೌಷ್ಟಿಕ ಆಹಾರ ನೀಡಲು ಆರಂಭಿಸಲಾಗಿತ್ತು. ಆರಂಭದ 3–4 ದಿನ ಕಡಿಮೆ ಪ್ರಮಾಣದ ಪೌಷ್ಟಿಕ ಆಹಾರ ನೀಡಲಾಗಿತ್ತು. ಆ ನಂತರ ಹಂತ ಹಂತವಾಗಿ ಪೌಷ್ಟಿಕ ಆಹಾರದ ಪ್ರಮಾಣ ಹೆಚ್ಚಿಸಲಾಗಿತ್ತು. ಇದರ ಪರಿಣಾಮವಾಗಿ ಮೊದಲ ತಂಡ 8 ಆನೆಗಳಲ್ಲಿ 21 ದಿನದಲ್ಲೇ ತೂಕ ಹೆಚ್ಚಾಗಿದೆ. ಅದರಲ್ಲೂ ಭರವಸೆ ಆನೆ ಭೀಮ 315 ಕೆಜಿ ತೂಕ ಹೆಚ್ಚಿಸಿಕೊಂಡಿದ್ದಾನೆ. ಸೆ.6ರಂದು ಮಾಡಿಸಿದ್ದ ತೂಕದಲ್ಲಿ ಭೀಮ 4370 ಕೆಜಿ ತೂಗಿತ್ತು ಇಂದು 4685 ಕೆಜಿ ತೂಗುವ ಮೂಲಕ 315 ಕೆಜಿ ತೂಕ ಹೆಚ್ಚಿಸಿಕೊಂಡಿದ್ದಾನೆ. ಅಂಬಾರಿ ಆನೆ ಅಭಿಮನ್ಯು 140 ಕೆಜಿ. ಮಹೇಂದ್ರ 135 ಕೆಜಿ, ಧನಂಜಯ 50 ಕೆಜಿ, ಗೋಪಿ 65 ಕೆಜಿ, ಕಂಜನ್ 155 ಕೆಜಿ, ವಿಜಯ 55 ಕೆಜಿ ಹಾಗೂ ವರಲಕ್ಷ್ಮೀ 150 ಕೆಜಿ ತೂಕ ಹೆಚ್ಚಿಸಿಕೊಂಡಿವೆ.

ಅರಮನೆಗೆ ವಾಪಸ್ಸಾದ ಆನೆ: ಧನ್ವಂತರಿ ರಸ್ತೆಯಲ್ಲಿರುವ ವೇ–ಬ್ರಿಡ್ಜ್‌ನಲ್ಲಿ ತೂಕ ಮಾಡಿದ ನಂತರ 14 ಆನೆಗಳನ್ನು ಅರಣ್ಯ, ಪೊಲೀಸ್ ಪಡೆಗಳ ಬೆಂಗಾವಲಿನಲ್ಲಿ ಜೆ.ಕೆ.ಮೈದಾನ, ಇರ್ವಿನ್ ರಸ್ತೆ, ಆಯುರ್ವೇದ ಆಸ್ಪತ್ರೆ ವೃತ್ತ, ಸಯ್ಯಾಜಿರಾವ್ ವೃತ್ತ, ಕೆ.ಆರ್.ವೃತ್ತ ಹಾಗೂ ಚಾಮರಾಜ ವೃತ್ತದ ಮೂಲಕ ಕೋಟೆ ಆಂಜನೇಯಸ್ವಾಮಿ ದೇವಾಲಯದ ದ್ವಾರದಿಂದ ಅರಮನೆಗೆ ಕರೆತರಲಾಯಿತು. ದಾರಿಯುದ್ದಕ್ಕೂ ಜನ ದಸರಾ ಗಜಪಡೆಯನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಸೌರಭ್‌ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್, ಸಹಾಯಕರಾದ ರಂಗರಾಜು, ಅಕ್ರಂ ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಸೆ.27–ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಮೈಸೂರು, ಕೇಂದ್ರದಲ್ಲಿ 2023–24ನೇ ಸಾಲಿನ ಪೋಸ್ಟ್ ಡಿಪ್ಲೊಮಾ ಇನ್ ಟೂಲ್ ಡಿಸೈನ್ ಕೋರ್ಸ್ ಪ್ರವೇಶಕ್ಕೆ, (Post Diploma in Tool Design) Diploma/BE (ಯಾಂತ್ರಿಕ ಸ್ಟ್ರೀಮ್) ಪಾಸಾದ ವಿದ್ಯಾರ್ಥಿ ಗಳಿಂದ ಅರ್ಜಿಯನ್ನು ಆಹ್ವಾನಿಸಿದೆ.

AITT, SCP/TSP ಯೋಜನೆ ಅಡಿಯಲ್ಲಿ ಅರ್ಹ SC & ST ಅಭ್ಯರ್ಥಿಗಳಿಗೆ ಮಾಸಿಕ ರೂ 2500/– ಸ್ಟೈಫಂಡ್‌ನೊಂದಿಗೆ ಉಚಿತ ತರಬೇತಿ ನೀಡಲಾಗುತ್ತಿದ್ದು, ಉಚಿತವಾಗಿ ಹಾಸ್ಟೆಲ್ ವ್ಯವಸ್ಥೆ ಮಾಡಿಕೊಡಲಾಗುವುದು. ತರಬೇತಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಕ್ಯಾಂಪಸ್ ಸಂದರ್ಶನ ಆಯೋಜಿಸಲಾಗುವುದು. ಡಿಪ್ಲೊಮಾ ಮತ್ತು ಬಿ.ಇ ಪಾಸಾದ ಅಭ್ಯರ್ಥಿಗಳು ನೇರವಾಗಿ ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿಗೆ 8050325552, 8095978954, 9945349638 ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಪೊಲೀಸ್ : "ಸರ್, ನಿನ್ನೆ ರಾತ್ರಿ ಜೈಲಿನಲ್ಲಿ ಖೈದಿಗಳು ರಾಮಾಯಣ ನಾಟಕ ಆಡಿದ್ರು"

ಆಫೀಸರ್ : "ಅದಕ್ಕೇನೀಗ?"

ಪೊಲೀಸ್ : "ನಿನ್ನೆ ರಾತ್ರಿ ಸಂಜೀವಿನಿ ತರ್ತೀನಿ ಅಂತ ಕಾಂಪೌಂಡ್ ಹಾರಿ ಹೋದ ಖೈದಿ ಇನ್ನೂ ಬಂದಿಲ್ಲ ಸರ್!"

ಮೈಸೂರು ಮಿತ್ರ

ಗುರುವಾರ, 28 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ದುರ್ಗುಣವನ್ನು ತ್ಯಜಿಸು, ಕೋಪವನ್ನು ನುಂಗು, ಸತ್ಯವನ್ನು ಹೇಳು, ಸತ್ಕಾರ್ಯವನ್ನು ಮಾಡು, ಸದಾ ಹರ್ಷಿತನಾಗಿರು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಳ್ಳಗಿರೋದೆಲ್ಲ ಹಾಲಲ್ಲ, ಹೊಳೆಂಯೋದೆಲ್ಲ ಚಿನ್ನ ಅಲ್ಲ.

ನಿಮ್ಮ ಪತ್ರಗಳು

ಕೆ.ಬಿ. ಗಣಪತಿಯವರಿಗೆ ಅಭಿನಂದನೆಗಳು



ಮಾನ್ಯರೇ

ತಮ್ಮ ಜೀವಮಾನದ ಸಾಧನೆಗಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಕೆ.ಬಿ. ಗಣಪತಿ ಅವರಿಗೆ ಪ್ರಶಸ್ತಿ ನೀಡಲಾಗಿದೆ. ಅಭಿನಂದನೆಗಳು.

ಈಗ್ಗೆ ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಪತ್ರಿಕೆ ನಡೆಸುವುದು, ಪತ್ರಿಕೆಗಳಲ್ಲಿ ವರದಿ ಪ್ರಕಟಿಸುವುದು, ಸುದ್ದಿ ಸಂಗ್ರಹಣೆ ಮಾಡುವುದು ಈಗಿನಷ್ಟು ಸುಲಭ ಸಾಧ್ಯವಾಗಿರಲಿಲ್ಲ. ನಗರದ ಹತ್ತಾರು ಕಡೆ ನಡೆಯುವ ಸಮಾರಂಭಗಳ ವರದಿ, ಛಾಯಾಚಿತ್ರಗಳನ್ನು ಸೈಕಲ್‌ನಲ್ಲಿ ಹೋಗಿ ಸಂಗ್ರಹಿಸಿ ಪತ್ರಿಕೆಗಳಿಗೆ ನೀಡುತ್ತಿದ್ದ, ಹಾಗೆಯೇ ಸಂಪಾದಕರೇ ಎಲ್ಲಾ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಪ್ರತಿದಿನ ಪತ್ರಿಕೆ ಪ್ರಕಟ ಮಾಡುವುದು ದಿನವೂ ತಾಯಂದಿರ ಒಂದು ಹೆರಿಗೆ ಯಾದಂತೆ ಎಂಬ ನನ್ನ ಪತ್ರಕರ್ತ ಮಿತ್ರರ ಮಾತು ನನಗೆ ನೆನಪಾಗುತ್ತದೆ.

ಇಂತಹ ಕಷ್ಟಕರ ದಿನಗಳನ್ನು ಯಶಸ್ವಿಯಾಗಿ ನಿಭಾಯಿಸಿಕೊಂಡು ಯಾವ ಸರ್ಕಾರದ, ಯಾರ ಮುಲಾಜಿಗೂ ಬೀಳದೆ ಇಂದಿಗೂ ಪತ್ರಿಕಾ ಧರ್ಮವನ್ನೇ ಪವಿತ್ರ ಧರ್ಮವೆಂದು ಬದುಕಿ ತೋರಿಸುತ್ತಿರುವ ಕೆ.ಬಿ. ಗಣಪತಿಯವರು ಅನುಕರಣೀಯ ವ್ಯಕ್ತಿ. ಹಾಗೆಯೇ ಅವರಿಗೆ ಈ ಪ್ರಶಸ್ತಿ ಸಂದಿರುವುದು ಆ ಪ್ರಶಸ್ತಿಯ ಮೌಲ್ಯವನ್ನು ಹೆಚ್ಚಿಸಿದೆ. ಪತ್ರಕರ್ತರು ಒಗ್ಗಟ್ಟಿನಿಂದ ಇರಬೇಕು ಎಂದಿರುವ ಗಣಪತಿಯವರ ಮಾತು ಇಂದಿನ ಕಾಲಮಾನಕ್ಕೆ ಹೊಂದುವುದಿಲ್ಲ. ಇಂದು ಪತ್ರಿಕಾ ಹಾಗೂ ದೃಶ್ಯ ಮಾಧ್ಯಮದಲ್ಲಿ ಆಮಿಷಕ್ಕೆ ಬಲಿಯಾದವರು, ರಾಜಕಾರಣಿಗಳ ಗುಲಾಮರಂತೆ ವರ್ತಿಸುವ ಪತ್ರಕರ್ತರ ಸಂಖ್ಯೆ ಹೆಚ್ಚಿದೆ. ಸುದ್ದಿ ಪ್ರಕಟಿಸುವಲ್ಲಿ, ವರದಿ ಮಾಡುವಲ್ಲೂ ಇವರುಗಳು ತಾರತಮ್ಯ ಮೆರೆದಿದ್ದಾರೆ. ಇನ್ನು ಇವರು ಯಾವ ರೀತಿಯ ನೈತಿಕತೆ ಇಟ್ಟುಕೊಂಡಾರು. ಮತ್ತೆ ಒಗ್ಗಟ್ಟಿನ ಮಾತು ಬಲು ದೂರ. ಅದೊಂದು ದುರಂತವೇ ಸರಿ.

ಪ್ರಾಮಾಣಿಕತೆಗೆ ಇಂದು ಬೆಲೆಯೇ ಇಲ್ಲದಿರುವಾಗ ತಮ್ಮ ಪತ್ರಿಕಾ ಜೀವನದಲ್ಲಿ ಸದಾ ಅದರ ಪರವಾಗಿ ನಿಂತು ಕೆಲಸ ಮಾಡುತ್ತಿರುವ ಗಣಪತಿಯವರು ಎಲ್ಲರಿಗೂ ವಿಶೇಷವಾಗಿ ಯುವ ಪತ್ರಕರ್ತರಿಗೆ ಆದರ್ಶಪ್ರಾಯರಾಗಿದ್ದಾರೆ.

ಕಳೆದ 13–14 ವರ್ಷಗಳಿಂದ 'ಮೈಸೂರು ಮಿತ್ರ' ಓದುತ್ತಾ ಅದು ಸಾಗಿ ಬಂದ ದಾರಿಯ ಅವಲೋಕನ ಮಾಡಿದಾಗ ನನಗೆ ಸಿಕ್ಕಿದ್ದು ಮೇಲಿನ ಅಂಶಗಳು. ತಮ್ಮ ಜೀವನದಲ್ಲಿ ಏಳು–ಬೀಳುಗಳನ್ನು ಸಮಚಿತ್ತದಿಂದ ಸ್ವೀಕರಿಸಿ ಪತ್ರಿಕಾ ಧರ್ಮಕ್ಕೆ ಇಂದಿಗೂ ನೈಜ ಅರ್ಥ ನೀಡಿರುವ ಕೆ.ಬಿ. ಗಣಪತಿಯವರಿಗೆ ಮತ್ತೊಮ್ಮೆ ಅಭಿನಂದನೆಗಳು.

– ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಅಮೆರಿಕದ ಇಬ್ಬಗೆಯ ನೀತಿ...

ಮಾನ್ಯರೆ,

ಎಪ್ಪತ್ತರ ದಶಕದ ಅಮೆರಿಕಾದ ರಾಷ್ಟ್ರೀಯ ಭದ್ರತಾ ಸಲಹೆಗಾರ ಹೆನ್ರಿ ಕಿಸೆಂಜರ್ ಪ್ರಕಾರ, ಅಮೆರಿಕಕ್ಕೆ ಯಾರು ಶಾಶ್ವತ ಶತ್ರುಗಳು ಇಲ್ಲ, ಯಾರು ಶಾಶ್ವತ ಮಿತ್ರರು ಇಲ್ಲ. ಕೇವಲ ಅಮೆರಿಕದ ಹಿತಾಸಕ್ತಿ ಮಾತ್ರ ಮುಖ್ಯವಾಗಿರುತ್ತದೆ ಎಂಬುದನ್ನು ಅಮೆರಿಕದ ವಿದೇಶಾಂಗ ನೀತಿಯನ್ನು ಕುರಿತಾಗಿ ಹೇಳಿದ ಈ ಮಾತು ಈಗಲೂ ಪ್ರಸ್ತುತವಾಗಿದೆ.

ಚೀನಾವನ್ನು ತಡೆಯಲು ಭಾರತಕ್ಕೆ ಬೇಕಾದ ಯುದ್ಧ ಸಾಮಗ್ರಿಗಳನ್ನು ನೀಡುತ್ತಾ ಭಾರತವನ್ನು ತನ್ನ ತಾಳಕ್ಕೆ ಕುಣಿಯುವಂತೆ ಮಾಡಲು ಅಮೆರಿಕ ಪ್ರಯತ್ನ ಮಾಡುತ್ತಿದ್ದು, ಇದಕ್ಕೆ ಈಗ ಕೆನಡಾವನ್ನು ದಾಳವನ್ನಾಗಿಸಿ ಇತ್ತೀಚೆಗೆ ಹತ್ಯೆಯಾದ ಹರದೀಪ್ ಸಿಂಗ್ ನಿಜ್ಜರ್ ಖಲಿಸ್ತಾನಿ ಉಗ್ರನ ಸಾವಿಗೆ ಭಾರತದ ಏಜೆನ್ಸಿಗಳು ಕಾರಣವೆಂದು ಹೇಳಿಸಿ, ಅದಕ್ಕೆ ಬೇಕಾದ ಪೂರಕ ಮಾಹಿತಿಗಳನ್ನು ಕೆನಡಾ ದೇಶಕ್ಕೆ ನೀಡಿದ್ದು ಅಮೆರಿಕಾ.

ಅಮೆರಿಕದಲ್ಲಿರುವ ಖಲಿಸ್ತಾನಿ ಬೆಂಬಲಿಗರನ್ನು ಎಫ್‌ಬಿಐ ಕರೆಸಿ ಕೆನಡಾದ ಘಟನೆ ನಿಮಗೆ ಎಚ್ಚರಿಕೆಯ ಘಂಟೆ ಎಂದು ಎಚ್ಚರಿಸಿ. ಈಗ ಜಪಾನ್ ಮೂಲಕ ಭಾರತಕ್ಕೆ ಬೆಂಬಲ ನೀಡುತ್ತಾ ಅಮೆರಿಕಾ ತನ್ನ ಇಬ್ಬಗೆಯ ನೀತಿಯನ್ನು ಪಾಲಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಭಾರತ ಮತ್ತು ರಷ್ಯಾ ನಡುವಿನ ಸಂಬಂಧವಾಗಿದ್ದು, ಭಾರತ ಅಮೆರಿಕಾ ಮತ್ತು ರಷ್ಯಾ ಜೊತೆಗೆ ಸಮನಾದ ಸಂಬಂಧ ಹೊಂದಿದ್ದರೂ ರಷ್ಯಾ ಜೊತೆಗಿನ ತನ್ನ ಸಂಬಂಧಕ್ಕೆ ಹೆಚ್ಚು ಬೆಲೆ ನೀಡುತ್ತಿದೆ. ಮತ್ತು ರಷ್ಯಾ ಎಲ್ಲಾ ಸಂದರ್ಭಗಳಲ್ಲಿ ಭಾರತಕ್ಕೆ ಬೆಂಬಲವಾಗಿ ನಿಂತಿದೆ.

ಅಮೆರಿಕ ಶೀತಲ ಸಮರದ ಸಮಯದಲ್ಲಿ ಪಾಕಿಸ್ತಾನಕ್ಕೆ ಬೆಂಬಲ ನೀಡುತ್ತಾ, ಬಾಂಗ್ಲಾದೇಶ ವಿಮೋಚನೆಯ ಸಮಯದಲ್ಲಿ ತನ್ನ ಯುದ್ಧ ನೌಕೆಗಳನ್ನು ಬಂಗಾಳ ಕೊಲ್ಲಿಗೆ ಕಳುಹಿಸಿ ಭಾರತವನ್ನು ಕಟ್ಟಿಹಾಕಲು ಪ್ರಯತ್ನಿಸಿತ್ತು. ಆಗ ರಷ್ಯಾ ಭಾರತಕ್ಕೆ ಬೆಂಬಲ ನೀಡಿತ್ತು. ಅಮೆರಿಕ ಕಾರ್ಗಿಲ್ ಯುದ್ಧದ ಸಮಯದಲ್ಲಿ ಜಿಪಿಎಸ್ ಮಾಹಿತಿಯನ್ನು ಭಾರತಕ್ಕೆ ಕೊಡಲು ನಿರಾಕರಿಸಿತ್ತು. ಇಂತಹ ಅಮೆರಿಕವನ್ನು ಸಂಪೂರ್ಣ ನಂಬಲು ಸಾಧ್ಯವಿಲ್ಲ. ಭಾರತ ಅಮೆರಿಕದ ಈ ಇಬ್ಬಗೆಯ ನೀತಿಯನ್ನು ತಿಳಿದಿದ್ದು, ರಷ್ಯಾದೊಡನೆ ಸಂಬಂಧ ಕೆಡದಂತೆ ತನ್ನ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಅಮೆರಿಕ ಎಂಬ ಗೋಸುಂಬೆಯ ಜೊತೆ ವ್ಯವಹರಿಸಬೇಕಾಗಿದೆ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಇಂಜಿನಿಯರಿಂಗ್ ಎರಡನೇ ಸುತ್ತಿನ ಫಲಿತಾಂಶ ಪ್ರಕಟಿಸಿ

ಮಾನ್ಯರೆ,

ಇಂಜಿನಿಯರಿಂಗ್ ಎರಡನೇ ಸುತ್ತಿನ ಫಲಿತಾಂಶವನ್ನು ಸೆ.23 ರಾತ್ರಿ 8 ಗಂಟೆಯ ನಂತರ ಪ್ರಕಟ ಮಾಡುತ್ತೇವೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿತ್ತು. ಆದರೆ ಕೆಇಎನವರು ಇದನ್ನು ಪ್ರಕಟಿಸಿ ಮೂರು ದಿನ ಕಳೆದರೂ ಇದುವರೆಗೂ ಫಲಿತಾಂಶ ಪ್ರಕಟವಾಗಿಲ್ಲ. ವಿದ್ಯಾರ್ಥಿಗಳು ದಿನಕ್ಕೆ ಸುಮಾರು 50 ರಿಂದ 100 ಬಾರಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟನ್ನು ಚೆಕ್ ಮಾಡುತ್ತಿದ್ದರೂ ಯಾವುದೇ ಫಲಿತಾಂಶ ಪ್ರಕಟವಾಗಿಲ್ಲ. ಫಲಿತಾಂಶ ಪ್ರಕಟ ಮಾಡುತ್ತೇವೆ. ಆಗಾಗ ನಮ್ಮ ವೆಬ್‌ಸೈಟ್ ಅನ್ನು ಚೆಕ್ ಮಾಡ್ತಾ ಇರಿ ಅನ್ನುವ ಸಲಹೆ ಸೂಚನೆಗಳನ್ನು ವಿದ್ಯಾರ್ಥಿಗಳಿಗೆ ಕೊಡುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಫಲಿತಾಂಶ ಪ್ರಕಟಣೆ ವಿಷಯದಲ್ಲಿ ಈ ರೀತಿ ಉದಾಸೀನ ವಿಳಂಬ ಧೋರಣೆ ಮಾಡುತ್ತಿರುವುದು ಸರಿಯಲ್ಲ. ಇದು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆ. ಪಿಯುಸಿ ಮುಗಿದು ಈಗಾಗಲೇ ಸುಮಾರು ತಿಂಗಳುಗಳೇ ಕಳೆದಿವೆ. ಪಿಯುಸಿ ಮುಗಿಸಿ ಅರ್ಹ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಸೇರುವ ತವಕದಲ್ಲಿದ್ದಾರೆ. ಅರ್ಥ ಮಾಡಿಕೊಳ್ಳಿ, ತುಂಬಾ ಮಕ್ಕಳು ಹಾಗೂ ಪೋಷಕರು ನೀವು ಪ್ರಕಟಿಸುವ ಫಲಿತಾಂಶಕ್ಕಾಗಿ ಹಗಲಿರುಳು ನಿಮ್ಮ ವೆಬ್‌ಸೈಟ್ ಅನ್ನು ಚೆಕ್ ಮಾಡುತ್ತಾ ಕಾಯುತ್ತಿದ್ದಾರೆ. ಒಂದು ವೇಳೆ ಫಲಿತಾಂಶ ಪ್ರಕಟಿಸಲು ತಾಂತ್ರಿಕ ದೋಷವಿದ್ದರೆ ಅದನ್ನಾದರೂ ವಿದ್ಯಾರ್ಥಿಗಳಿಗೆ ತಿಳಿಸಬಹುದಿತ್ತಲ್ಲವೇ? ಅದರ ಬದಲು ನೀವು ಇಂಥ ದಿನ ಪ್ರಕಟ ಮಾಡುತ್ತೇವೆ ಅಂತ ಮತ್ತೇ ಹೇಳಬಹುದಿತ್ತಲ್ಲವೇ? ಹೀಗೆ ಏನನ್ನು ಸಹ ಹೇಳದೆ ಇಂಜಿನಿಯರ್ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಭವಿಷ್ಯದಲ್ಲಿ ಹಾಗೂ ಪೋಷಕರ ತಾಳ್ಮೆ, ಆತಂಕದಲ್ಲಿ ತಾವುಗಳು ಆಟ ಆಡದೇ ಆದಷ್ಟು ಶೀಘ್ರವಾಗಿ ಫಲಿತಾಂಶ ಪ್ರಕಟ ಮಾಡಿ ಎಂದು ಕೋರುತ್ತೇವೆ.


–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ಏನ್ ಹೇಳೊದ್ ಜಿ.ಪಿ.ರಾಜರತ್ನಂರ ಕನ್ನಡ ಪ್ರೇಮಾನಾ...



ಗುಂಡ್ಲುಪಂಡಿತ ರಾಜರತ್ನಂ ಕನ್ನಡ ಸಾಹಿತ್ಯದಲ್ಲಿ ಮರೆಯಲಾಗದ ಮೇರು ಶಿಖರ ಹಾಗೂ ವಿಶಿಷ್ಟ ಛಾಪನ್ನು ಮೂಡಿಸಿದ ಸಾಹಿತಿ. ಇವರ ಬರಹಗಳು ಒಂದಕ್ಕಿಂತ ಒಂದು ರೂಪ–ಸ್ವರೂಪ–ವಿಶ್ವರೂಪದಲ್ಲಿ ವಿಭಿನ್ನವಾಗಿದ್ದು, ಗಹನವಾದ ವಿಚಾರಗಳನ್ನು ಒಳಗೊಂಡಂತಹ ಕವಿತೆಗಳಾಗಿವೆ. ಅದರಲ್ಲೂ ಮುಖ್ಯವಾಗಿ ರತ್ನ ಎಂಬ ಕುಡುಕನ ಪಾತ್ರದ ಮೂಲಕ ಕುಡುಕನಂತೆಯೇ ತೊದಲು ನುಡಿಗಳ ಮೂಲಕ ಪದಗಳನ್ನು ದುಡಿಸಿಕೊಂಡು ವಿಭಿನ್ನ ಬಗೆಯಲ್ಲಿ ಮಾತಾಡಿಸಿ ಕನ್ನಡಿಗರಿಗೆ ಹೊಸ ಮಾದರಿಯನ್ನು ಉಣಬಡಿಸಿದ್ದಾರೆ. ಅವರ ಕನ್ನಡ ಪದಗೊಳ್ ಎಂಬ ಕವಿತೆ ಕನ್ನಡ ಸಾರಸ್ವತ ಲೋಕದ ದಿಗ್ದರ್ಶನದ ವಿಶಿಷ್ಟವಾದ ಕವಿತೆ, ಕನ್ನಡ ಅಭಿಮಾನ–ಕನ್ನಡದ ಕೈಂಕರ್ಯ, ಕನ್ನಡದ ಸ್ವಾಭಿಮಾನಕ್ಕೆ ಧಕ್ಕೆಯಾದರೆ ಹೋರಾಡುವ ಕೆಚ್ಚೆದೆಯ ವೀರ ಕನ್ನಡಿಗನ ಭಾಷಾಭಿಮಾನ ಎದ್ದು ಕಾಣುತ್ತದೆ. 'ರತ್ನ' ಎಂಬ ಕುಡುಕನ ಮೂಲಕ ತಮ್ಮ ಕನ್ನಡ ಭಾಷೆಯ ಮೇಲಿನ ಒಲುಮೆಯನ್ನು ತೋರ್ಪಡಿಸಿದ್ದಾರೆ.

**ಯೆಂಡ ಯೆಡ್ತಿ ಕನ್ನಡ್ ಪದಗೊಳ್
ಅಂದ್ರೆ ರತ್ನಂಗ್ ಪ್ರಾಣ!
ಬುಂಡೇನ್ ಎತ್ತಿ ಕುಡದ್ಬುಟ್ಟಾಂದ್ರೆ
ತಕ್ಕೊ! ಪದಗೊಳ್ ಬಾಣ!**

ಯೆಂಡ, ಹೆಂಡತಿ, ಕನ್ನಡ ಪದಗಳು ಅಂದರೆ ರತ್ನನಿಗೆ ಪ್ರಾಣ ಎಂದು ರತ್ನನ ಪಾತ್ರದ ಪರಿಚಯ ಮಾಡಿಕೊಡಲಾಗಿದೆ. ರತ್ನ ಹೆಂಡದ ಬುಂಡೆಯನ್ನು ಎತ್ತಿ ಕುಡಿದರೆ ಅವನ ಬಾಯಿಂದ ಕನ್ನಡ ಪದಗಳು ಬಾಣದಂತೆ ಪುಂಕಾನುಪುಂಕವಾಗಿ ಹರಿದಾಡುವ ಬಗೆ ಮೆಚ್ಚತಕ್ಕದ್ದು ಎಂದಿರುವ ಕವಿಗಳು ಕನ್ನಡದ ಒಳತೋಟಿಗಳನ್ನು ಸಹ ಬಗೆದು ನೋಡುತ್ತಾರೆ. ಕುಡುಕನಾದರೂ ಕನ್ನಡ ಪದಗಳ ಮೇಲೆ ರತ್ನನಿಗಿರುವ ಪ್ರೇಮದ ಪರಿಯನ್ನು ಇಲ್ಲಿ ಗಮನಿಸಬಹುದು.

ಕನ್ನಡ ಭಾಷೆ ಎಂದರೆ ಮೂಗುಮುರಿಯುವಂತಹ ಜನರ ಮಧ್ಯೆ ರತ್ನ ವಿಭಿನ್ನವಾಗಿ ನಿಲ್ಲುತ್ತಾನೆ. ಕನ್ನಡದ ಮೇಲೆ ತನಗಿರುವ ಪ್ರೇಮವನ್ನು ಬಾಣಗಳ ರೂಪದಲ್ಲಿ ಒಂದರ ಮೇಲೊಂದರಂತೆ ಪ್ರಯೋಗಿಸುವ ರತ್ನ ಕನ್ನಡನಾಡಿನಲ್ಲಿಯೇ ಇದ್ದು ಈ ನೆಲ, ಭಾಷೆ, ನೀರನ್ನು ಉಪಯೋಗಿಸಿಕೊಂಡರೂ ನಮ್ಮ ಭಾಷೆಯ ಮೇಲೆ ನಿರ್ಲಕ್ಷ್ಯವಹಿಸುವವನ ಮುಂದೆ ವಿಭಿನ್ನನಾಗಿ ನಿಲ್ಲುತ್ತಾನೆ

**ಬಗವಂತ್ ಏನ್ರ ಬೂಮೀಗ್ ಇಳದ
ನನ್ ತಾಕ್ ಬಂದಾಂತ್ ಅನ್ನು;
ಪರ್ ಗಿರೀಕ್ಸೆ ಮಾಡ್ತಾನ್ ಔನು–
ಬಕ್ತನ್ ಮೇಲ್ ಔನ್ ಕಣ್ಣು!**

ಭಗವಂತ ಏನಾದರೂ ಭೂಮಿಗೆ ಇಳಿದು ನನ್ನ ಹತ್ತಿರ ಬಂದರೆ ಎಂದು ಪ್ರಶ್ನಿಸುವ ರತ್ನ, ಮುಂದೆ ಭಕ್ತನನ್ನು ಪರೀಕ್ಷೆ ಮಾಡಿ ನಿಜವಾದ ಭಕ್ತಿಯನ್ನು ಜಗತ್ತಿಗೆ ಪ್ರಕಟಿಸುವುದು ಭಗವಂತನ ಕೆಲಸವಾಗಿರುತ್ತದೆ ಎಂದು ತಿಳಿಸಿದ್ದಾನೆ.

ನಿಜ ತನ್ನ ಭಕ್ತನನ್ನು, ಅವನ ಭಕ್ತಿಯನ್ನು ಪರೀಕ್ಷಿಸಲು ಭಗವಂತನೇ ಭೂಮಿಗೆ ಮಾರುವೇಷದಲ್ಲಿ ಬಂದು ಅವರಿಗೆ ನಾನಾ ವಿಧವಾದ ಕಷ್ಟಗಳನ್ನು ನೀಡಿ ಆ ಪರೀಕ್ಷೆಯಲ್ಲಿ ಆ ಭಕ್ತ ಗೆದ್ದ ನಂತರ ತನ್ನ ನಿಜ ಸ್ವರೂಪವನ್ನು ತೋರಿ ಭಕ್ತನ ಭಕ್ತಿಯನ್ನು ಸಾರುವ ಅನೇಕ ಕಥೆಗಳನ್ನು ಹರಿಹರನ ರಗಳೆಗಳಲ್ಲಿ, ಅನೇಕ ಶಿವಭಕ್ತರ ಕಥೆಗಳಲ್ಲಿ ನಾವು ನೋಡಬಹುದು. ಭಕ್ತ ಪ್ರಹ್ಲಾದ, ಭಕ್ತ ಮಾರ್ಕಂಡೇಯ, ಕೋಳೂರು ಕೊಡಗೂಸು, ಭಕ್ತ ಕುಂಬಾರ ಹೀಗೆ ಅನೇಕ ಕಥೆಗಳಲ್ಲಿ ಭಕ್ತರನ್ನು ಪರೀಕ್ಷಿಸಲು ಭಗವಂತನೇ ಭೂಮಿಗೆ ಬರುವುದನ್ನು ಗಮನಿಸಬಹುದು. ಈ ಹಿನ್ನಲೆಯಲ್ಲಿಯೇ ರತ್ನ ಭಗವಂತ ಏನಾದರೂ ನನ್ನ ಹತ್ತಿರ ಬಂದರೆ, ಭಕ್ತರ ಮೇಲೆ ಅವನಿಗೆ ಯಾವಾಗಲೂ ಒಂದು ಕಣ್ಣು ಇರುತ್ತದೆ ಎಂಬುದನ್ನು ಹೇಳಿರಬಹುದು.

**'ಯೆಂಡ ಕುಡಿಯಾದ್ ಬುಟ್ ಬುಡ್ ರತ್ನ!
'ಅಂತ್ ಔನ್ ಏನಾರ್ ಅಂದ್ರೆ–
ಮೂಗ್ ಮೂರ್ ಚೂರಾಗ್ ಮುರಕ್ಕೋಂತೀನಿ
ದೇವರ್ ಮಾತ್ಗ್ ಅಡ್ಬಂದ್ರೆ!**

ಆಕಸ್ಮಿಕವಾಗಿ ದೇವರು ರತ್ನನ ಮುಂದೆ ಬಂದು ರತ್ನ ಯೆಂಡವನ್ನು ಕುಡಿಯಬೇಡ, ಬಿಟ್ಟು ಬಿಡು ಅಂದರೆ ಖಂಡಿತವಾಗಿ ಬಿಟ್ಟುಬಿಡುವೆ. ದೇವರ ಮಾತಿಗೆ ವಿರುದ್ಧವಾಗಿ ನಡೆದರೆ ಮೂಗನ್ನು ಮುರಿಸಿಕೊಳ್ಳುವೆ ಎಂದು ಹೇಳುತ್ತಾನೆ.

ತನಗಿಷ್ಟವಾದ ಯೆಂಡವನ್ನು ಬಿಡು ಎಂದು ಆ ಭಗವಂತ ಹೇಳಿದರೆ ಅದನ್ನು ಬಿಡಲು ಸಿದ್ಧನೆಂದು ಹೇಳುವ ರತ್ನನ ನಿಷ್ಠೆ ಮೆಚ್ಚುವಂತದ್ದು. ದೇವರ ಅಸ್ತಿತ್ವವನ್ನೇ ಪ್ರಶ್ನಿಸಿ, ತಾವೇ ಸಾಕ್ಷಾತ್ ದೇವೇಂದ್ರನಂತೆ ವರ್ತಿಸುವಂತಹ ಇಂದಿನ ಕೆಲವು ಅತೀ ಬುದ್ಧಿವಂತರಿಗೆ ರತ್ನನಿಗಿರುವ ಬುದ್ಧಿಯಲ್ಲಿ ಅಲ್ಪವಾದರೂ ಬಂದರೆ ಒಳ್ಳೆಯದು.

**'ಯೆಂಡ ಬುಟ್ಟೆ ಯೆಡ್ತೀನ್ ಬುಟ್ ಬುಡ್!'
ಅಂತ್ ಔನ್ ಏನಾರ್ ಅಂದ್ರೆ–
ಕಳದೋಯ್ತ್ ಅಂತ ಕುಣದಾಡ್ತೀನಿ
ದೊಡ್ಡ್ ಒಂದ್ ಕಾಟ! ತೊಂದ್ರೆ!**

ಹಾಸ್ಯವಾದರೂ ರತ್ನನ ಬದ್ಧತೆ ಇಷ್ಟವಾಗುತ್ತದೆ. ಭಗವಂತ ಏನಾದರೂ ಯೆಂಡ ನಾನು ಹೇಳಿದ್ದಕ್ಕೆ ಬಿಟ್ಟೆ, ಹೆಂಡತಿಯನ್ನು ಬಿಟ್ಟು ಬಿಡು ರತ್ನ ಎಂದು ಹೇಳಿದರೆ ಕಳೆದುಹೋಯಿತು ದೊಡ್ಡ ಕಾಟ ಎಂದು ಕುಣಿದು ಬೇಕಿದ್ದರೆ ಹೆಂಡತಿಯನ್ನು ಬಿಟ್ಟು ಬಿಡುವೆ ಎನ್ನುವ ರತ್ನ ಭಗವಂತನ ಮಾತನ್ನು ಪಾಲಿಸುವ ವಿಧೇಯನಾಗಿ ಕಂಡು ಬರುತ್ತಾನೆ.

ತನಗಿಷ್ಟವಾದ ಒಂದೊಂದನ್ನು ಭಗವಂತ ಬಿಡು ಎಂದು ಹೇಳಿದರೂ ಬಿಡಲು ತಾನು ಸಿದ್ಧನಾಗಿರುವನೆಂದು ಹೇಳುವ ರತ್ನ ಆ ಭಗವಂತನಿಗಿಂತ ತನ್ನ ಇಚ್ಛೆ ದೊಡ್ಡದಲ್ಲ ಎಂಬುದನ್ನು ತಿಳಿಸಿದಂತಿದೆ.

**'ಕನ್ನಡ ಪದಗೊಳ್ ಆಡೋದ್ನೆಲ್ಲ
ನಿಲ್ಲಿಸ್ ಬುಡಬೇಕ್ ರತ್ನ!'
ಅಂತ್ ಔನ್ ಅಂದ್ರೆ ದೇವ್ರ್ ಆದ್ರ್ ಏನು!
ಮಾಡ್ತೀನ್ ಔನ್ಗೆ ಖತ್ನ!**

ತನಗಿಷ್ಟವಾದ ಯೆಂಡವನ್ನು, ಹೆಂಡತಿಯನ್ನು ಭಗವಂತ ಹೇಳಿದ ಎಂಬ ಕಾರಣಕ್ಕೆ ಬಿಟ್ಟ ರತ್ನನನ್ನು ಕನ್ನಡ ಪದಗಳನ್ನು ಆಡೋದನ್ನು ನಿಲ್ಲಿಸಬೇಕು ಅಂತ ಹೇಳಿದರೆ ಅವನು ದೇವರಾದರೆ ನನಗೇನು ಅವನಿಗೊಂದು ಗತಿಯನ್ನು ಕಾಣಿಸುತ್ತೇನೆ ಎನ್ನುವ ಮೂಲಕ ತನಗೆ ಕನ್ನಡ ಭಾಷೆಯ ಮೇಲಿರುವ ಅಭಿಮಾನ ಎಷ್ಟರ ಮಟ್ಟಿಗಿದೆ ಎಂಬುದನ್ನು ತಿಳಿಸಿದಂತಿದೆ.

ಪ್ರಸ್ತುತ ದಿನಗಳಲ್ಲಿ ಹಣ, ಅಧಿಕಾರ, ಅಂತಸ್ತು, ಪದವಿ ಆಸೆಗೆ ಮಾತೃಭಾಷೆಯನ್ನು ಮರೆತು, ಕನ್ನಡತನವ ಕಡೆಗಣಿಸುವ ಜನರ ಮಧ್ಯೆ ನಿಜಕ್ಕೂ ರತ್ನ ಆದರ್ಶವ್ಯಕ್ತಿಯಾಗಿ ನಿಲ್ಲುತ್ತಾನೆ. ನಮ್ಮ ತಾಯಿ ಬಡವಳು ಹರಿದ ಸೀರೆಯನ್ನೇ ಹಾಕಿರಬಹುದು, ಪಕ್ಕದ ಮನೆಯ ಹೆಂಗಸು ಲಕ್ಷ ಬೆಲೆಬಾಳುವ ಸೀರೆಯನ್ನೇ ಹಾಕಿರಬಹುದು ಹಾಗೆಂದ ಮಾತ್ರಕ್ಕೆ ನಾವು ನಮ್ಮ ತಾಯಿಯನ್ನು ಅಮ್ಮ ಎನ್ನದೇ ಪಕ್ಕದ ಮನೆಯ ಹೆಂಗಸನ್ನು ಅಮ್ಮ ಎಂದು ಕರೆಯಲಾಗದು.ಮಾತೃಭಾಷೆಯ ಪ್ರೇಮ ಎಂದರೆ ಹೆತ್ತ ಅಮ್ಮನಂತೆ.ಇಂದು ಬೇರೆ ಬೇರೆ ಕಾರಣಗಳಿಗೆ ಕನ್ನಡ ಸುಭದ್ರ ಪರಿಸ್ಥಿತಿ ಇಲ್ಲದಿರಬಹುದು.ಅಷ್ಟಕ್ಕೆ ಮಾತ್ರ ಕನ್ನಡದ ಮೇಲೆ ನಮಗಿರುವ ಪ್ರೀತಿ, ಅಭಿಮಾನ ಕಳೆದು ಹೋಗಬಾರದು.ಏಕೆಂದರೆ ಎರಡೂವರೆ ಸಾವಿರ ವರ್ಷಗಳ ಇತಿಹಾಸವಿರುವ ಭಾಷೆಯನ್ನು ಗೌರವಿಸುವುದು, ಬಳಸುವುದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯವಾಗಿದೆ.ಈ ನಿಟ್ಟಿನಲ್ಲಿ ರತ್ನನ ಧೈರ್ಯ, ಅವನ ಭಾಷಾಭಿಮಾನ ನಿಜಕ್ಕೂ ಅನುಕರಣೀಯ.

**ಆಗ್ನೆ ಮಾಡೋ ಐಗೋಳ್ ಎಲ್ಲಾ
ದೇವ್ರೆ ಆಗ್ಲಿ ಎಲ್ಲ!
ಕನ್ನಡ್ ಸುದ್ದೀಗ್ ಏನ್ರ ಬಂದ್ರೆ
ಮಾನಾ ಉಳಸಾಕಿಲ್ಲ**

ಆಜ್ಞೆ ಮಾಡುವವರು ಯಾರೇ ಆಗಿರಲಿ ಅದು ದೇವರೆ ಆದರೂ ಕನ್ನಡದ ಸುದ್ದಿಗೆ ಬಂದರೆ ಅವರ ಮಾನವನ್ನು ಉಳಿಸೊದಿಲ್ಲ ಎನ್ನುವ ಮೂಲಕ ಕನ್ನಡದ ಸುದ್ದಿಗೆ ಯಾರೇ ಅಡ್ಡಬಂದರೂ ಅವರ ಮಾನವನ್ನು ಕಳೆಯುವ ದಿಟ್ಟತನವನ್ನು ರತ್ನ ತೋರ್ಪಡಿಸಿದ್ದಾರೆ.

ನಿಜವಾದ ಕನ್ನಡಿಗನಿಗೆ ಹೀಗಿರಬೇಕು ಈ ಬಗೆಯ ಕನ್ನಡ ಅಭಿಮಾನ. ಕನ್ನಡವನ್ನು ಮಾತಾಡಿದರೆ, ಕನ್ನಡದಲ್ಲಿ ಶುಭಾಶಯ ತಿಳಿಸಿದರೆ, ಕೀಳರಿಮೆ ಪಡುವಂತಹ ಜನರಿಗೆ ಮುಟ್ಟಿನೋಡಿಕೊಳ್ಳುವಂತಹ ಪ್ರತಿಕ್ರಿಯೆ ಇಲ್ಲಿಯ ರತ್ನನದು. ನಮ್ಮ ಭಾಷೆಯನ್ನಾಡಲು ಯಾವುದೇ ಬಗೆಯ ಮುಜುಗರವನ್ನು, ಚಿಂತೆಯನ್ನು ಪಡಬೇಕಾಗಿಲ್ಲ, ಮತ್ತೊಬ್ಬರು ಏನಂದು ಕೊಂಡಾರು ಎಂಬ ಯೋಚನೆಯು ನಮಗಿರಬೇಕಾಗಿಲ್ಲ. ಇದನ್ನು ಹೇಳುವಾಗ ಕೆಲ ವರ್ಷದ ಹಿಂದಿನ ಘಟನೆ ನೆನಪಾಗುತ್ತದೆ.

ಘಟನೆ: ಕನ್ನಡ ಮತ್ತು ಮಲಯಾಳಂ ಎರಡು ಭಾಷೆಯಲ್ಲಿ ತಯಾರಾಗಿದ್ದ 'ಶಿಕಾರಿ' ಎಂಬ ಸಿನಿಮಾದಲ್ಲಿ ನಟಿಸಿದ್ದ ಮಲೆಯಾಳಂ ಚಲನ 'ಚಿತ್ರರಂಗದ ಸ್ಟಾರ್ ನಟ ಮಮ್ಮುಟಿ ಕನ್ನಡದ ತಮ್ಮ ಪಾತ್ರಕ್ಕೆ ತಾವೇ ಧ್ವನಿ ನೀಡಿದ್ದರು. ಆ ಸಿನಿಮಾದ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರು ಇದರ ಬಗ್ಗೆ ಪ್ರಶ್ನಿಸಿದಾಗ ಮಮ್ಮುಟ್ಟಿ ನೀಡಿದ ಪ್ರತಿಕ್ರಿಯೆ– ಎರಡೂವರೆ ಸಾವಿರ ವರ್ಷಗಳ ಇತಿಹಾಸವಿರುವ ಭಾಷೆಗೆ ಗೌರವವನ್ನು ಕೊಡಬೇಕೆಂದು ಕನ್ನಡ ಕಲಿತು ತಮ್ಮ ಪಾತ್ರಕ್ಕೆ ತಾವೇ ಕನ್ನಡದಲ್ಲಿ ಧ್ವನಿ ನೀಡಿರುವುದಾಗಿ ಹೇಳಿದ್ದರು (2012ರಲ್ಲಿ) ನಮ್ಮ ಭಾಷೆಯ ಬಗ್ಗೆ ಪಕ್ಕದ ರಾಜ್ಯದ ನಟನಿಗೆ ಈ ಅಭಿಮಾನವಿದೆ ಎಂದ ಮೇಲೆ ನಮ್ಮವರಿಗೆ ಇನ್ನೂ ಎಷ್ಟರ ಮಟ್ಟಿಗೆ ಅಭಿಮಾನವಿರಬೇಕು ಎಂದು ಯೋಚಿಸಿ....

**ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ–
ಮೂಗ್ನಲ್ ಕನ್ನಡ್ ಪದವಾಡ್ತೀನಿ!
ನನ್ ಮನಸನ್ ನೀ ಕಾಣೆ!**

ರತ್ನ ಕನ್ನಡ ಮಾತನಾಡುವುದನ್ನು ತಪ್ಪಿಸಬೇಕೆಂದು ಏನಾದರೂ ನರಕಕ್ಕೆ ಕಳುಹಿಸಿ, ನಾಲಿಗೆಯನ್ನು ಸೀಳಿಸಿ, ಬಾಯಿಯನ್ನು ಹೊಲಿಸಿ ಹಾಕಿದ್ದರೂ ಕೂಡ ನಾನು ಮೂಗಿನಲ್ಲಿ ಕನ್ನಡ ಪದವನ್ನಾಡುತ್ತೇನೆ, ನನ್ನ ಮನಸ್ಸು ನಿನಗೆ ತಿಳಿದಿಲ್ಲ ಎನ್ನುವ ಮೂಲಕ ಏನೇ ಆದರೂ, ಎಂತಹ ಪರಿಸ್ಥಿತಿ ಬಂದರೂ ಕನ್ನಡ ಭಾಷೆಯನ್ನು ಬಿಡುವುದಿಲ್ಲವೆಂಬ ರತ್ನನ ಅಭಿಮಾನ ಎಂತಹ ನಿರಾಭಿಮಾನಿಯಲ್ಲಿಯೂ ಅಭಿಮಾನ ಮೂಡಿಸುವಂತದ್ದು.

**ಯೆಂಡ ಓಗ್ಲಿ! ಯೆಡ್ತಿ ಓಗ್ಲಿ!
ಎಲ್ಲಾ ಕೊಚ್ಕೊಂಡ್ ಓಗ್ಲಿ!
ಪರ್ಪಂಚ್ ಇರೋ ತನಕ ಮುಂದೆ
ಕನ್ನಡ್ ಪದಗೊಳ್ ನುಗ್ಲಿ!**

ಯೆಂಡ, ಹೆಂಡತಿ ಎಲ್ಲವೂ ಕೊಚ್ಚಿಕೊಂಡು ಹೋದರೂ ಚಿಂತೆಯಿಲ್ಲ, ಪ್ರಪಂಚ ಇರುವವರೆಗೂ ಕನ್ನಡ ಪದಗಳು ಹೀಗೆಯೇ ಮುನ್ನುಗ್ಗುತ್ತಿರಲಿ ಎನ್ನುವ ಮೂಲಕ ಕನ್ನಡ ಭಾಷೆ ಎಂದಿಗೂ ಚಿರಸ್ಥಾಯಿಯಾಗಿ ಉಳಿಯಬೇಕೆಂಬ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡ ಭಾಷೆಯ ಬಗ್ಗೆ ಪ್ರತಿಯೊಬ್ಬರಲ್ಲೂ ಅಭಿಮಾನವನ್ನುಂಟು ಮಾಡುವ ಕೆಲಸವನ್ನು ರಾಜರತ್ನಂ ಈ ಕವನದ ಮೂಲಕ ವ್ಯಕ್ತಪಡಿಸಿದ್ದಾರೆ. ರಾಜರತ್ನಂ ಅವರ ಈ ಕವನವನ್ನು ಅತ್ಯುತ್ತಮವಾಗಿ ರಾಜು ಅನಂತಸ್ವಾಮಿ ಅವರು ತಮ್ಮ ಗಾಯನದ ಮೂಲಕ ಕೇಳುಗರ ಕರ್ಣಗಳಿಗೆ ರಸದಾನಂದವನ್ನು ಉಣಬಡಿಸಿದ್ದಾರೆ. ಯುಟ್ಯೂಬ್ ಅಲ್ಲಿ ಸಿಗುತ್ತದೆ, ಒಮ್ಮೆ ಕೇಳಿ, ಪ್ರಸ್ತುತ ದಿನಗಳಲ್ಲಿ ಮರೆಯಾಗುತ್ತಿರುವ ಭಾಷಾಭಿಮಾನ ಕೊಂಚ ಮಟ್ಟಿಗಾದರೂ ಬದಲಾಗಬಹುದು. ಕನ್ನಡ ಕನ್ನಡ ಎಂದು ಬಾಯಿ ಬಡಿದುಕೊಂಡರೆ ಅಭಿಮಾನವಾಗಲೀ, ಕನ್ನಡದ ಉಳಿವುದಾಗಲೀ ಆಗದು ಕನ್ನಡವನ್ನು ಹೃದಯದಿಂದ ಅಪ್ಪಿಕೊಂಡಾಗ ಕನ್ನಡದ ಶ್ರೇಷ್ಠತೆ ಮತ್ತಷ್ಟು ಎತ್ತರ ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಅರ್ಥಪ್ರಧಾನ ಅನಂತ ಪದ್ಮನಾಭ ವ್ರತ



ಹಿಂದೂ ಧರ್ಮದಲ್ಲಿ ಅನಂತ ಪದ್ಮನಾಭ ವ್ರತ ಆಚರಣೆಗೆ ವಿಶೇಷ ಮಹತ್ವವಿದೆ. ಗಣೇಶ ಚತುರ್ಥಿಯ ಕೊನೆಯ ದಿನ ಅಂದರೆ ಗಣೇಶ ವಿಸರ್ಜನೆಯ ದಿನ ಅನಂತ ಪದ್ಮನಾಭ ವ್ರತವನ್ನು ಆಚರಿಸಲಾಗುತ್ತದೆ. ಈ ಬಾರಿ ಸೆಪ್ಟೆಂಬರ್ 28 ರಂದು ಅನಂತ ಪದ್ಮನಾಭ ವ್ರತ ಬಂದಿದೆ.

ಭಾದ್ರಪದ ಶುದ್ಧ ಚತುರ್ದಶಿಯಂದು ಅನಂತ ಪದ್ಮನಾಭ ವ್ರತವನ್ನು ಆಚರಿಸಲಾಗುತ್ತದೆ. ಮದುವೆಯಾದ ನವ ದಂಪತಿಗೆ ಈ ವ್ರತ ಆಚರಣೆ ಮಾಡಿದರೆ ಶುಭವಾಗುತ್ತದೆ. 14 ವರ್ಷಗಳು ಆಚರಣೆ ಮಾಡಿದ ನಂತರ ವ್ರತ ಮಾಡುವುದನ್ನು ನಿಲ್ಲಿಸಬಹುದು.

ಪೂಜಾಕ್ರಮ: ಸಾಮಾನ್ಯವಾಗಿ ಈ ಪೂಜೆಯನ್ನು ಬೆಳಗಿನ ವೇಳೆ ಮಾಡುವುದು ಅತ್ಯಂತ ಶ್ರೇಷ್ಠಕರ. ಸಾಧ್ಯವಾಗದೇ ಹೋದಲ್ಲಿ ಮಧ್ಯಾಹ್ನ ಮಾಡಬಹುದು. ಅನಂತರ ಸೂರ್ಯಾಸ್ತ ಆದ ಮೇಲೆ ಸಂಜೆ ವೇಳೆ ಮತ್ತೊಮ್ಮೆ ಷೋಡಶೋಪಚಾರ ಪೂಜೆಯನ್ನು ಮಾಡಬೇಕು. ಕೆಲವು ಕಡೆ ದಂಪತಿ ಪೂಜೆಯನ್ನು ನೆರವೇರಿಸುತ್ತಾರೆ. ಇನ್ನೂ ಕೆಲವು ಕಡೆ ಕೇವಲ ಪುರುಷರು ಮಾತ್ರ ಮಾಡುತ್ತಾರೆ. ಎರಡು ಕಲಶಗಳನ್ನು ಇಡುತ್ತಾರೆ. ಕೆಲವೆಡೆ ಪ್ರತಿ ದಂಪತಿ ಒಂದು ಕಲಶವನ್ನು ಇಟ್ಟು ಪೂಜಿಸುತ್ತಾರೆ. ಈ ಆಚರಣೆಯು ಬೇರೆ ಬೇರೆ ಭಾಗಗಳಿಗೆ ಭಿನ್ನವಾಗಿದೆ.

ಕಲಶಕ್ಕೆ ವಸ್ತ್ರವನ್ನು ಇಟ್ಟು ಏಳು ದರ್ಬೆಗಳಿಂದ ಅನಂತನನ್ನು ಅಂದರೆ ಸರ್ಪವನ್ನು ಹೆಣೆಯಬೇಕು. ಇದರ ಮುಖ್ಯ ಭಾಗವೆಂದರೆ ಮೊದಲು ತುಳಸಿ ಕಟ್ಟೆಯ ಬಳಿ ಯಮುನಾ ಪೂಜೆಯನ್ನು ಮಾಡಬೇಕು. ಆ ನೀರನ್ನು ಕಳಶಗಳಿಗೆ ಹಾಕಿ ಕೊಳ್ಳಬೇಕು. ಅನಂತರ ಅನಂತಪದ್ಮನಾಭ ಸ್ವಾಮಿಗೆ ಅವಲಕ್ಕಿಯನ್ನು ಅರ್ಪಿಸಿ ಪ್ರಸಾದವನ್ನಾಗಿ ಸ್ವೀಕರಿಸ ಬೇಕು. ಈ ಪೂಜೆಗೆ ಚಿನ್ನದ ಪ್ರತಿಮೆ ಬಲು ಶ್ರೇಷ್ಠ. ಸಾಧ್ಯವಾಗದೆ ಹೂದಲ್ಲಿ ಬೆಳ್ಳಿ ವಿಗ್ರಹವನ್ನು ಇರಿಸಿ. 14 ಗಂಟುಗಳ ದಾರವನ್ನು ಪೂಜಿಸಿ ಪುರುಷರು ಬಲಗೈಯಲ್ಲಿ, ಸ್ತ್ರೀಯರು ಕತ್ತಿನಲ್ಲಿ ಧರಿಸಬೇಕು.

ಯಾವುದೇ ಕಾರಣಕ್ಕೂ ಹಿಂದಿನ ವರ್ಷದ ಪೂಜೆಯಲ್ಲಿ ಕಟ್ಟಿದ್ದ ದಾರವನ್ನು ಕಳೆದುಕೊಳ್ಳಬಾರದು. ಒಂದು ವೇಳೆ ದಾರ ಕಳೆದು ಹೋದಲ್ಲಿ ವಾಸುದೇವ ಮಂತ್ರದ ಹೋಮವನ್ನು ಮಾಡಬೇಕು. ಅನಂತರ ಕೇಶವಾದಿ ನಾಮಗಳಿಂದ ಹೋಮವನ್ನು ಮಾಡಬೇಕು. ಇದಾದ ಮೇಲೆ ಮಾತ್ರ ಪೂಜೆ ಮಾಡುವ ಅಧಿಕಾರವೂ ಲಭಿಸುತ್ತದೆ. ಸಂಜೆ ಅನಂತಪದ್ಮನಾಭಸ್ವಾಮಿಯ ಕಥೆಯನ್ನು ಕೇಳಿದ ನಂತರ ಮಹಾಮಂಗಳಾರತಿಯನ್ನು ಮಾಡಿ ಪೂಜೆಯನ್ನು ಸಂಪೂರ್ಣಗೊಳಿಸಬೇಕು. ಪೂಜೆಯ ನಂತರ ಕಲಶದ ನೀರನ್ನು ಮಕ್ಕಳ ಮುಖಕ್ಕೆ ಪ್ರೋಕ್ಷಿಸಿದರೆ ಭಯ ಮತ್ತು ಅಂಧಕಾರ ನಿವಾರಣೆಯಾಗುವುದು ಎಂಬ ನಂಬಿಕೆ ಇದೆ.

ಹಿನ್ನೆಲೆ: ಕೃತಯುಗದ ಕಥೆ ಸುಮಂತನು ವಶಿಷ್ಠ ಗೋತ್ರದಲ್ಲಿ ಜನಿಸಿರುತ್ತಾನೆ. ಬೃಗುಮಹರ್ಷಿಗಳ ಮಗಳಾದ ದೀಕ್ಷಾದೇವಿಯನ್ನು ವಿವಾಹವಾಗುತ್ತಾನೆ. ಅವರಿಗೆ ಹೆಣ್ಣು ಮಗುವಿನ ಜನನವಾಗುತ್ತದೆ ಆ ಮಗುವಿಗೆ ಸುಶೀಲೆ ಎಂದು ನಾಮಕರಣ ಮಾಡುತ್ತಾರೆ.

ವಿಧಿಯ ಆಟದಿಂದ ಚಿಕ್ಕವಯಸ್ಸಿನಲ್ಲಿ ದೀಕ್ಷಾದೇವಿಯು ದೇಹ ತ್ಯಾಗ ಮಾಡುತ್ತಾಳೆ. ಆಗ ಕರ್ಕಶಿ ಎಂಬ ಸ್ತ್ರೀಯ ಜೊತೆ ಎರಡನೇ ವಿವಾಹವಾಗುತ್ತಾನೆ. ಆದರೆ ಈಕೆಗೆ ಎಲ್ಲಾ ರೀತಿಯ ದುರಾಚಾರಗಳು ಇರುತ್ತವೆ. ಇದನ್ನು ಲೆಕ್ಕಿಸದ ಮಗಳು ಸುಶೀಲೆ ತಂದೆಯ ನಿತ್ಯ ಪೂಜೆಗೆ ಸಹಕಾರ ನೀಡುತ್ತಾಳೆ. ಆಕೆಗೂ ಸಹ ದೇವರಲ್ಲಿ ಅಪಾರ ಭಕ್ತಿ ಇರುತ್ತದೆ. ದಿನ ಕಳೆದಂತೆ ಸುಮಂತನು, ಕೌಂಡಿಲ್ಯ ಎಂಬ ವರನಿಗೆ ಮಗಳನ್ನು ಕೊಟ್ಟು ವಿವಾಹ ಮಾಡುತ್ತಾನೆ.

ಆಗ ಸುಶೀಲೆಯು ಪತಿಯ ಸಹಕಾರದಿಂದ ಶ್ರೀ ಅನಂತನ ಪೂಜೆಯನ್ನು ಮಾಡುತ್ತಾಳೆ. ಬರು ಬರುತ್ತಾ ಅವರ ಬಡತನ ತೊಲಗಿ ಪತಿಯ ಆಶ್ರಮವು ಅಷ್ಟೈಶ್ವರ್ಯಗಳಿಂದ ತುಂಬುತ್ತದೆ. ಪತಿಯು ಒಮ್ಮೆ ಸುಶೀಲೆಯ ಕೈಯ್ಯಲ್ಲಿದ್ದ ಅನಂತನ ದಾರವನ್ನು ನೋಡುತ್ತಾನೆ. ಯಾರನ್ನು ವಶ ಮಾಡಿಕೊಳ್ಳಲು ಇದನ್ನು ಕಟ್ಟಿಕೊಂಡಿರುವೆ ಎಂದು ಕೇಳುತ್ತಾನೆ. ಸಾಲದೆಂಬಂತೆ ಆ ದಾರವನ್ನು ತೆಗೆದುಕೊಂಡು ಬೆಂಕಿಯಲ್ಲಿ ಹಾಕಿಬಿಡುತ್ತಾನೆ. ಕೂಡಲೇ ಸುಶೀಲೆಯು ಸುಡುತ್ತಿದ್ದ ದಾರವನ್ನು ಹಾಲಿ ನಲ್ಲಿ ನೆನೆಸಿ ಇಡುತ್ತಾಳೆ. ಇದಾದ ಸ್ವಲ್ಪ ದಿನದಲ್ಲೇ ಕೌಂಡಿಲ್ಯನು ತನ್ನೆಲ್ಲ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುತ್ತಾನೆ.

ಇದರಿಂದ ಪಾಠ ಕಲಿತ ಕೌಂಡಿಲ್ಯನು ಭಗವಂತನಾದ ಅನಂತಪದ್ಮನಾಭ ಸ್ವಾಮಿಯನ್ನು ಅರಸುತ್ತಾ ಹೊರಡುತ್ತಾನೆ. ದಾರಿಯಲ್ಲಿ ಕಂಡ ಪ್ರಾಣಿ ಪಕ್ಷಿಗಳು ನದಿ ನೀರನ್ನು ಸಹ ಅನಂತಪದ್ಮನಾಭ ಸ್ವಾಮಿಯ ಬಗ್ಗೆ ಕೇಳುತ್ತಾನೆ. ಆದರೆ ಯಾರಿಂದಲೂ ನಿರೀಕ್ಷಿಸಿದ ಉತ್ತರ ಬರುವುದಿಲ್ಲ. ಬಹುವಾಗಿ ನೊಂದ ಕೌಂಡಿಲ್ಯನು ಪ್ರಜ್ಞಾಹೀನ ನಾಗಿ ಬಿದ್ದುಬಿಡುತ್ತಾನೆ. ಈ ಸಮಯದಲ್ಲಿ ಕನಿಕರ ತೋರಿ, ಸ್ವಯಂ ಅನಂತಪದ್ಮನಾಭಸ್ವಾಮಿಯೇ ಅಲ್ಲಿ ಪ್ರತ್ಯಕ್ಷನಾಗಿ ತನ್ನ ಅರಮನೆಗೆ ಕರೆದುಕೊಂಡು ಹೋಗುತ್ತಾನೆ.

ಅನಂತರ ತನ್ನ ವಿಶ್ವರೂಪವನ್ನು ತೋರಿಸುತ್ತಾನೆ. ಇದರಿಂದ ಕೌಂಡಿಲ್ಯನಿಗೆ ಜ್ಞಾನೋದಯವಾಗುತ್ತದೆ. ಕೌಂಡಿಲ್ಯನು ಪರಮಾತ್ಮನನ್ನು ವಿವಿಧ ರೀತಿಯಲ್ಲೇ ಸ್ತುತಿಸುತ್ತಾನೆ. ಆಗ ಅನಂತಪದ್ಮನಾಭ ಸ್ವಾಮಿಯು ಮೂರು ವರಗಳನ್ನು ಬೇಡುವಂತೆ ಹೇಳುತ್ತಾನೆ. ಕೊನೆಗೆ ವರಗಳ ಸಹಾಯದಿಂದ ಕಳೆದುಕೊಂಡ ಎಲ್ಲವನ್ನು ಮರಳಿ ಪಡೆಯುತ್ತಾನೆ. ಅನಂತ ಪದ್ಮನಾಭಸ್ವಾಮಿಯು ದಾರಿಯಲ್ಲಿ ಕಂಡ ಮಾವಿನ ಮರವು ಮಾನವನಾಗಿದ್ದು, ತನ್ನಲ್ಲಿದ್ದ ವಿದ್ಯೆಯನ್ನು ಯಾರಿಗೂ ಕಲಿಸಿರುವುದಿಲ್ಲ. ಆದ್ದರಿಂದ ಯಾರಿಗೂ ಪ್ರಯೋಜನವಿಲ್ಲದ ಮಾವಿನ ಮರವಾಗಿರುತ್ತಾನೆ. ಧನಿಕನಾಗಿದ್ದರೂ ತನ್ನಲ್ಲಿರುವ ಹಣದಿಂದ ತಾನೂ ತಿನ್ನದೆ ಬೇರೆಯವರಿಗೆ ಸಹಾಯವನ್ನು ಮಾಡದೆ ಇರುತ್ತಾನೆ. ಹಾಗಾಗಿ ಮತ್ತೊಬ್ಬ ಹಸುವಾಗಿ ಹುಲ್ಲನ್ನು ತಿನ್ನಲಾರದೆ ನಿಂತಿರುತ್ತದೆ. ಕೊನೆಯದಾಗಿ ಆ ಕತ್ತೆಯು ಸಹ ಮಾನವನೇ ಆಗಿದ್ದನು ಅವನು ಪ್ರಯೋಜನಕ್ಕೆ ಬಾರದ ಜಾಗಗಳನ್ನು ದಾನ ನೀಡುವುದರಿಂದ ಕತ್ತೆಯಾಗಿ ಜನಿಸಿದ ಎಂದು ಹೇಳುತ್ತಾನೆ.

ಇದೆಲ್ಲದರ ಅರ್ಥವು ಒಂದೇ, ಕಲಿಯುಗದಲ್ಲಿ ಮಾನವರಾಗಿ ಜನಿಸಿದ ನಾವು ನಮ್ಮ ವಿದ್ಯೆಯನ್ನು ಬೇರೆಯವರಿಗೆ ದಾನ ಮಾಡಬೇಕು. ಹಾಗೆಯೇ ನಮ್ಮಲ್ಲಿರುವ ಹಣದಿಂದ ಜನಸೇವೆಯನ್ನು ಮಾಡಬೇಕು. ಇದಲ್ಲದೆ ದಾನ ಮಾಡುವುದಾದರೆ ಒಳ್ಳೆಯ ಪದಾರ್ಥಗಳನ್ನೇ ದಾನ ಮಾಡಬೇಕು. ಇದರಿಂದ ಮಾತ್ರ ಮನುಷ್ಯನಿಗೆ ಮುಕ್ತಿ ಸಾಧ್ಯ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸೆ.29, 30 ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ



ಮೈಸೂರು, ಸೆ.27– 2023–24ನೇ ಸಾಲಿನ ಮೈಸೂರು ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟವನ್ನು ಸೆ.29 ಮತ್ತು 30 ರಂದು ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲೆಯ 9 ತಾಲೂಕುಗಳಲ್ಲಿ ನಡೆದ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದ ವೈಯಕ್ತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಹಾಗೂ ಗುಂಪು ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದವರು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಮೈಸೂರು ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹರಿರುವ ಕ್ರೀಡಾಪಟುಗಳು ಸೆ.29 ರಂದು ಬೆಳಗ್ಗೆ 9 ಗಂಟೆಗೆ ಕ್ರೀಡಾಕೂಟ ನಡೆಯುವ ಸ್ಥಳಗಳಲ್ಲಿ ಕ್ರೀಡಾ ಸಂಘಟಕರಲ್ಲಿ ವರದಿ ಮಾಡಿಕೊಳ್ಳುವುದು.

ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಮಾತ್ರ ಪ್ರಯಾಣ ಭತ್ಯೆ ನೀಡಲಾಗುವುದು. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಹಾಯಕ ನಿರ್ದೇಶಕರ ಕಚೇರಿ ದೂ.ಸಂ: 0821–2564179, ಹಾಕಿ ತರಬೇತುದಾರ ಸುಂದರೇಶ್ ದೂ. 9844487796, ಅಥ್ಲೆಟಿಕ್ ತರಬೇತುದಾರ ರಾಮಸ್ವಾಮಿ ದೂ.ಸಂ:9449300330, ಜಿಮ್ನಾಸ್ಟಿಕ್ ತರಬೇತುದಾರ ಬಾಲು ದೂ.ಸಂ: 9731 934937, ದ್ವಿ.ದ.ಸ ಸಹಾಯಕರಾದ ಕಾವ್ಯ ದೂ.ಸಂ: 9620158757 ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಪ್ರಣವಾನಂದ ಸ್ವಾಮೀಜಿ ವಿರುದ್ಧ ಹೇಳಿಕೆ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಮೈಸೂರು, ಸೆ.27 (ಜಿಎ) – ಡಾ.ಪ್ರಣವಾನಂದ ಸ್ವಾಮೀಜಿ ವಿರುದ್ಧ ಕರ್ನಾಟಕ ಈಡಿಗರ ಸಂಘದ ಅಧ್ಯಕ್ಷ ತಿಮ್ಮೇಗೌಡರು ನೀಡಿರುವ ಹೇಳಿಕೆ ಖಂಡಿಸಿ ಕರ್ನಾಟಕ ರಾಷ್ಟ್ರೀಯ ಈಡಿಗ ಮಹಾ ಮಂಡಳಿ ವತಿಯಿಂದ ನಗರದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ತಿಮ್ಮೇಗೌಡರು ಸೆ.20ರಂದು ಬೆಂಗಳೂರಿನ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಣವಾನಂದ ಸ್ವಾಮೀಜಿ ನಮ್ಮ ಸಮಾಜದ ಸ್ವಾಮೀಜಿಗಳಲ್ಲ. ಅವರು ಸಮಾಜದ ಅವಿದ್ಯಾವಂತರನ್ನು ದಾರಿ ತಪ್ಪಿಸುತ್ತಿದ್ದು, ನಮ್ಮ ಸಮಾಜಕ್ಕೂ ಅವರಿಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ಸಮಾಜದ ಮುಖಂಡರಾಗಿ ಅವರು ಈ ರೀತಿ ಹೇಳಿಕೆ ನೀಡುವುದು ಸರಿಯಲ್ಲ. ಅವರು ಕೂಡಲೇ ತಮ್ಮ ಹೇಳಿಕೆ ಹಿಂಪಡೆದು ಸ್ವಾಮೀಜಿಯ ಬಳಿ ಕ್ಷಮೆ ಕೋರಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರವಿ ಕುಂಬಾರಕೊಪ್ಪಲು, ರವಿಕುಮಾರ್.ಕೆ.ಎಂ, ಶಿವರಾಜ್‌ಕುಮಾರ್, ಮಂಜುನಾಥ್, ಶಿವಣ್ಣ, ಅಪ್ಪು, ವೆಂಕಟೇಶ್, ಸುರೇಶ್, ಮನೋಜ್, ಜಗದೀಶ್, ಚಂದ್ರ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಸೆ.30ರಂದು ಗ್ರಾಮ ಸ್ವರಾಜ್ಯ ಅಭಿಯಾನ; ನೂತನ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸನ್ಮಾನ

ಮೈಸೂರು,ಸೆ.27(ಎಂಟಿವೈ)– ಮೈಸೂರಿನ ಪುರಭವನದಲ್ಲಿ ಸೆ.30ರಂದು 10.30ಕ್ಕೆ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟದ ವತಿಯಿಂದ ಗ್ರಾಮ ಸ್ವರಾಜ್ಯ ಅಭಿಯಾನ ಹಾಗೂ ನೂತನ ಗ್ರಾಪಂ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ನಾಗರಾಜ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಪಂಗಳು ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಪಂಚಾಯತ್‌ರಾಜ್ ನಿಯಮದಲ್ಲಿ ತಿಳಿಸಿದ್ದರೂ ಅದು ಇಂದಿಗೂ ಸಮರ್ಪಕವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಅಲ್ಲದೇ ಗಾಂಧೀಜಿ ಅವರ ಆಶಯ ಇಟ್ಟುಕೊಂಡು ಈ ನಿಯಮ ರಚಿಸಲಾಗಿದೆ. ಆದರೆ, ಕಾಯ್ದೆ ಜಾರಿಗೊಂಡು ಹಲವು ವರ್ಷ ಕಳೆದರೂ ಅವರ ಆಶಯಗಳು ಸಂಪೂರ್ಣವಾಗಿ ಈಡೇರಿಲ್ಲ. ಬೆಂಗಳೂರಲ್ಲಿ ಕೇಂದ್ರೀಕರಣಗೊಂಡಿರುವ ಆಡಳಿತವನ್ನು ಗ್ರಾಪಂಗಳಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಹೋರಾಟ ನಡೆಸುತ್ತಾ ಬಂದಿದ್ದೇವೆ. ಈ ನಿಟ್ಟಿನಲ್ಲಿ ಸರ್ಕಾರದ ಕಣ್ತೆರೆಸುವ ಉದ್ದೇಶದಿಂದ ಈ ಅಭಿಯಾನ ಆಯೋಜಿಸಲಾಗಿದೆ ಎಂದರು. ಕರ್ನಾಟಕ ರಾಜ್ಯ ಗ್ರಾ.ಪಂ ಸದಸ್ಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಉಪಾಧ್ಯಕ್ಷೆ ಬೃಂದಾ ಕೃಷ್ಣೇಗೌಡ ಹಾಗೂ ರಾಜ್ಯ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ರಾಜ್ಯ ಸಹ ಕಾರ್ಯದರ್ಶಿ ನಿಶಾಂತ್ ಚಂದಗಾಲು, ಸಲಹೆಗಾರ ರಾಜಾ ಹುಣಸೂರು, ಗುರುಮೂರ್ತಿ, ಮಹದೇವ ಇದ್ದರು.

ಸ್ವಚ್ಛ ಭಾರತ ಅಭಿಯಾನ ಗ್ರಾಮೀಣ ಪ್ರದೇಶದಲ್ಲೂ ಪರಿಣಾಮಕಾರಿಯಾಗಿಸಲು

ಗ್ರಾ.ಪಂ ಅಧ್ಯಕ್ಷರು, ಪಿಡಿಓಗಳಿಗೆ ಕಾರ್ಯಾಗಾರ

ಮೈಸೂರು,ಸೆ.27(ಎಂಟಿವೈ)– ಸ್ವಚ್ಛ ಭಾರತ್ ಅಭಿಯಾನವನ್ನು ಗ್ರಾಮೀಣ ಪ್ರದೇಶದಲ್ಲೂ ಪರಿಣಾಮಕಾರಿಯಾಗಿ ನಡೆಸುವ ನಿಟ್ಟಿನಲ್ಲಿ ಮೈಸೂರಿನ ಕಲಾಮಂದಿರದಲ್ಲಿ ಗ್ರಾ.ಪಂ ಪಿಡಿಓ ಹಾಗೂ ಅಧ್ಯಕ್ಷರಿಗಾಗಿ ಆಯೋಜಿಸಿದ್ದ ಒಂದು ದಿನದ ತರಬೇತಿ ಕಾರ್ಯಾಗಾರದಲ್ಲಿ ಜಿಲ್ಲೆಯ ವಿವಿಧ ಅತ್ಯುತ್ತಮ ಗ್ರಾ.ಪಂ.ಗಳಿಗೆ ಸ್ವಚ್ಛ ಸರ್ವೇಕ್ಷಣ ಗ್ರಾಮೀಣ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಯಿತು.

ಮೈಸೂರು ಜಿ.ಪಂ ಹಾಗೂ ಸ್ವಚ್ಛ ಸರ್ವೇಕ್ಷಣಾ ಶಾಖೆ ವತಿಯಿಂದ ಬುಧವಾರ ಆಯೋಜಿಸಿದ್ದ ಸ್ವಚ್ಛ ಸರ್ವೇಕ್ಷಣಾ ಗ್ರಾಮೀಣ–2023 ಪ್ರಶಸ್ತಿ ಪ್ರದಾನ, ಸ್ವಚ್ಛತಾ ಹೀ ಸೇವಾ ಜಾಗೃತಿ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಸ್ವಚ್ಛ ಸರ್ವೇಕ್ಷಣಾ ಅಭಿಯಾನವನ್ನು ಗ್ರಾಮೀಣ ಪ್ರದೇಶದಲ್ಲೂ ಪರಿಣಾಮಕಾರಿಯಾಗಿ ನಡೆಸಬೇಕು. ಈ ಅಭಿಯಾನ ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಸಹಕಾರ ಅಗತ್ಯ. ಈ ಹಿನ್ನೆಲೆಯಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹೆಚ್ಚಾಗಿ ಆಯೋಜಿಸಬೇಕು. ಒಂದೆರಡು ಬಾರಿ ಕಸ ಎಸೆಯುವವರನ್ನು ಗುರುತಿಸಿ ತಿಳುವಳಿಕೆ ನೀಡಬೇಕು ಎಂದರು.

ತರಬೇತಿ ಕಾರ್ಯಾಗಾರ: ಘನತ್ಯಾಜ್ಯ ನಿರ್ವಹಣೆಯಲ್ಲಿ ವೆಲ್ಲೂರು ಮಾದರಿಯನ್ನು ರೂಪಿಸಿರುವ ಭಾರತ ಸರ್ಕಾರದ ಘನ ಮತ್ತು ದ್ರವ ತ್ಯಾಜ್ಯ ಸಂಪನ್ಮೂಲ ನಿರ್ವಹಣೆ ಯೋಜನಾ ನಿರ್ದೇಶಕ ವೆಲ್ಲೂರು ಶ್ರೀನಿವಾಸ್ ಅವರು ಘನತ್ಯಾಜ್ಯ ನಿರ್ವಹಣೆಯ ಕುರಿತು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಿಡಿಒಗಳಿಗೆ ತರಬೇತಿ ನೀಡಿದರು. ಈ ವೇಳೆ ಉಡುಪಿ ಜಿಲ್ಲೆಯ ವಂಡ್ಸೆ ಗ್ರಾಮ ಪಂಚಾಯಿತಿಯನ್ನು ಪೈಲಟ್ ಪ್ರಾಜೆಕ್ಟ್ ಆಯ್ಕೆ ಮಾಡಿಕೊಂಡು ಘನ ತ್ಯಾಜ್ಯ ನಿರ್ವಹಣೆ ಮೂಲಕ ಲಕ್ಷಾಂತರ ರೂ. ಆದಾಯ ಗಳಿಸುತ್ತಿರುವ ಉದಾಹರಣೆಯೊಂದಿಗೆ ಮಾತನಾಡಿದ ಅವರು, ಉತ್ಪತ್ತಿಯಾಗುವ ಕಸವನ್ನು ಏನೂ ಮಾಡಲು ಸಾಧ್ಯವಿಲ್ಲ ಎಂದು ನಾವು ನಂಬಿದ್ದೇವೆ. ಕಸ ನೋಡಿದಾಗ ನಮಗೆ ಕಿರಿಕಿರಿಯಾಗುತ್ತದೆ. ಕಸಕ್ಕೆ ಒಂದು ಕಳಂಕವಿದ್ದು, ಅದರ ಬಗೆಗಿನ ನಮ್ಮ ಮನೋಭಾವವು ಬದಲಾದರೆ ಕಸವೂ ರಸವಾಗುತ್ತದೆ. ಚಿನ್ನದ ಬೆಲೆಯನ್ನು (ಗೋಲ್ಡ್ ಗಾರ್ಬೆಜ್) ತರುತ್ತದೆ. ಕಸವನ್ನು ಸರಿಯಾಗಿ ನಿರ್ವಹಣೆ ಮಾಡದ ಕಾರಣ ಶೇ.60ರಷ್ಟು ಸಾವುಗಳಿಗೆ ಕಾರಣವಾಗಿದೆ. ನಾವು ಎಸೆದ ಕಸದಲ್ಲಿ ನಮಗೆ ಕಚ್ಚುವ ಸೊಳ್ಳೆ ಸಂತಾನೋತ್ಪತ್ತಿ ಮಾಡುತ್ತಿದೆ ಎಂದು ನಾವು ಎಂದಿಗೂ ಆಲೋಚಿಸಿಲ್ಲ. ಸಮರ್ಪಕವಾದ ರೀತಿಯಲ್ಲಿ ಕಸವನ್ನು ವಿಂಗಡಿಸಿ ಸದ್ಬಳಕೆ ಮಾಡಿದರೆ ಸಾಕಷ್ಟು ಲಾಭವಿದೆ ಎಂದು ತಿಳಿಸಿದರು.

ಜಿಪಂ ಸಿಇಒ ಕೆ.ಎಂ.ಗಾಯತ್ರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಘನತ್ಯಾಜ್ಯ ನಿರ್ವಹಣೆಗೆ ಸಮುದಾಯದ ಸಹಭಾಗಿತ್ವ ಬಳಸಿಕೊಳ್ಳಬೇಕು. ಮನೆ ಮನೆಗೆ ತೆರಳಿ ಕಸ ಸಂಗ್ರಹಿಸಬೇಕು. ದ್ರವ ತ್ಯಾಜ್ಯ ನಿರ್ವಹಣೆ, ಬ್ಲಾಕ್ ವಾಟರ್ ಮ್ಯಾನೇಜ್‌ಮೆಂಟ್ ಸಮರ್ಪಕ ರೀತಿಯಲ್ಲಿ ಜಾರಿಗೊಳಿಸಬೇಕು. ನರೇಗಾ ಮೂಲಕ ಉದ್ಯೋಗ ಕೊಡಿ. ಪ್ರತಿ ಗ್ರಾಮವನ್ನು ಶುಚಿಯಾಗಿಡಲು ಕಾರ್ಯೋನ್ಮುಖರಾಗಬೇಕು ಎಂದರು.

ಚಾಲನ ಪರವಾನಗಿ ವಿತರಣೆ: ಜಿಲ್ಲಾ ಪಂಚಾಯಿತಿ ವತಿಯಿಂದ ಚಾಲನೆ ತರಬೇತಿ ಪಡೆದ ಕಾವ್ಯ ಎಂ, ಕಾವ್ಯ ಕೆ.ಎಸ್, ಸೌಜನ್ಯ, ರೇಣುಕಾ, ತುಳಸಿ, ಪವಿತ್ರ ಮತ್ತು ವಿಜಿ ಅವರಿಗೆ ಚಾಲನಾ ಪರವಾನಗಿ (ಡಿಜಿಟಲ್ ಕಾರ್ಡ್) ವಿತರಣೆ ಮಾಡಲಾಯಿತು.

ವಿವಿಧ ಗ್ರಾ.ಪಂಗಳಿಗೆ ಸ್ವಚ್ಛ ಸರ್ವೇಕ್ಷಣಾ ಗ್ರಾಮೀಣ ಪ್ರಶಸ್ತಿ



ಮೈಸೂರಿನ ಕಲಾಮಂದಿರದಲ್ಲಿ ಗ್ರಾ.ಪಂ ಪಿಡಿಓ ಹಾಗೂ ಅಧ್ಯಕ್ಷರಿಗಾಗಿ ಬುಧವಾರ ಆಯೋಜಿಸಿದ್ದ ತರಬೇತಿ ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಉದ್ಘಾಟಿಸಿದರು.

ಸ್ವಚ್ಛ ಭಾರತ್ ಮಿಷನ್ ಯೋಜನೆಯ ಸ್ವಚ್ಛ ಸರ್ವೇಕ್ಷಣಾ ಗ್ರಾಮೀಣ–2023 ಸಮೀಕ್ಷೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಹುಣಸೂರು ತಾಲೂಕಿನ ಗಾವಡಗೆರೆ, ಬಿಳಿಕೆರೆ, ಬನ್ನಿಕುಪ್ಪೆ, ತಿ.ನರಸೀಪುರ ತಾಲೂಕಿನ ಬೀಡನಹಳ್ಳಿ, ಗರ್ಗೇಶ್ವರಿ, ಮೈಸೂರು ತಾಲೂಕಿನ ಇಲವಾಲ, ನಾಗವಾಲ, ಸರಗೂರು ತಾಲೂಕಿನ ಇಟ್ನ, ಎಚ್.ಡಿ. ಕೋಟೆ ತಾಲೂಕಿನ ನಾಗನಹಳ್ಳಿ, ನಂಜನಗೂಡು ತಾಲೂಕಿನ ಹೊರಳವಾಡಿ ಗ್ರಾಪಂಗಳ ಅಧ್ಯಕ್ಷರು, ಪಿಡಿಓ ಅವರನ್ನು ಸನ್ಮಾನಿಸಲಾಯಿತು.

ಗ್ರಂಥ ಮಿತ್ರಗೆ ಚಾಲನೆ: ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳ ಕಲಿಕೆಯನ್ನು ಉತ್ತೇಜಿಸುವ ಗ್ರಂಥ ಮಿತ್ರ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯಿತಿ ಸಿಇಒ ಕೆ.ಎಂ.ಗಾಯತ್ರಿ ಚಾಲನೆ ನೀಡಿದರು.

ಈ ಕಾರ್ಯಕ್ರಮ ಕುರಿತು ಮಾಹಿತಿ ನೀಡಿದ ಗಣೇಶ್ ಹೆಗಡೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 8 ವರ್ಷಗಳ ಹಿಂದೆ ಆಕಾಂಕ್ಷ ಸಂಸ್ಥೆಯಡಿ ಗ್ರಂಥಮಿತ್ರ ಯೋಜನೆಯಡಿ ಕಾರ್ಯಕ್ರಮ ರೂಪಿಸಿದೆವು. ಇದು ಯಶಸ್ವಿಯಾಗಿ ನಡೆದಿದೆ. ಸಾವಿರಾರು ಮಕ್ಕಳಲ್ಲಿ ಸ್ಫೂರ್ತಿ ಬಂದಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಚೇತರಿಕೆ ಕಂಡಿದ್ದಾರೆ ಎಂದು ವಿವರಿಸಿದರು.

ಮೈಸೂರಿನ ಅಮೃತ ವಿದ್ಯಾಪೀಠಂ ಸ್ವಯಂ ಸೇವಕರಿಂದ ಮೈಸೂರು ಜಿಲ್ಲೆಯಲ್ಲಿ ಪ್ರತಿ ಶನಿವಾರ ಕಲಿಕೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಜಿಪಂ ಉಪ ಕಾರ್ಯದರ್ಶಿ ಕೃಷ್ಣಂರಾಜು, ಜಿಪಂ ಸಹಾಯಕ ಕಾರ್ಯದರ್ಶಿ ಕುಲದೀಪ್, ಸಹಾಯಕ ಯೋಜನಾಧಿಕಾರಿ ಸುಬ್ರಮಣ್ಯ ಶರ್ಮ, ಆಡಳಿತ ಶಾಖೆ ಅಧೀಕ್ಷಕ ಮಹದೇವಸ್ವಾಮಿ, ಸ್ವಚ್ಛ ಭಾರತ ಶಾಖೆಯಿಂದ ಐಇಸಿ, ಎಸ್‌ಡಬ್ಲುಎಂ, ಎಸ್‌ಎಲ್‌ಡಬ್ಲ್ಯೂಎಂ ಹಾಗೂ ಹೆಚ್‌ಆರ್‌ಡಿ ಕನ್ಸಲ್ಟೆಂಟ್ ಪಾಲ್ಗೊಂಡಿದ್ದರು.





ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ನವಚೇತನ ಜನಸೇವಾ ಟ್ರಸ್ಟ್‌ನ ಅಧ್ಯಕ್ಷ ಹಾಗೂ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ವಿಷಕಂಠೇಗೌಡ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹಾಗೂ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಅವರ ಅಭಿಮಾನಿಗಳು ಉಪಸ್ಥಿತರಿದ್ದರು.

ನಾಳೆಯಿಂದ ಆಯೋಮಾತ್ಸವ; ನೃತ್ಯ, ನಾಟಕಗಳ ಉತ್ಸವ



ಮೈಸೂರು,ಸೆ.27(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಆಯಾಮ ಅಕಾಡೆಮಿ ಆಫ್ ಲೈನ್ ಆರ್ಟ್ಸ್ ವತಿಯಿಂದ ಸೆ.29ರಿಂದ ಮೂರು ದಿನಗಳ 'ಆಯೋಮಾತ್ಸವ' ನೃತ್ಯ–ನಾಟಕಗಳ ಉತ್ಸವ ಆಯೋಜಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕಿ ಡಾ.ಎಸ್.ವಿ. ಶಾಂಭವಿ ಸ್ವಾಮಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.29ರಂದು ಸಂಜೆ 5 ಗಂಟೆಗೆ ನಡೆಯುವ ಪುಸ್ತಕ ಪ್ರದರ್ಶನದ ಉದ್ಘಾಟನೆಯನ್ನು ಹಿರಿಯ ರಂಗ ನಿರ್ದೇಶಕ ಕೆ.ಶಿವಲಿಂಗಯ್ಯ ನೆರವೇರಿಸುವರು. ಚಿತ್ರಕಲಾ ಪ್ರದರ್ಶನಕ್ಕೆ ರಂಗಾಯಣದ ಜಂಟಿ ನಿರ್ದೇಶಕಿ ನಿರ್ಮಲಾ ಮಠಪತಿ ಚಾಲನೆ ನೀಡಲಿದ್ದಾರೆ. ಸಂಜೆ 6ಕ್ಕೆ ನಡೆಯುವ ಆಯಾಮೋತ್ಸವವನ್ನು ಡಾ. ಗಂಗೂಬಾಯಿ ಹಾನಗಲ್ ಸಂಗೀತ ವಿವಿ ಉಪಕುಲಪತಿ ಪ್ರೊ.ನಾಗೇಶ್ ವಿ. ಬೆಟ್ಟಕೋಟೆ ಉದ್ಘಾಟಿಸಲಿದ್ದು, ಹಿರಿಯ ನೃತ್ಯ ಕಲಾವಿದೆ ಡಾ.ವಸುಂಧರಾ ದೊರೆಸ್ವಾಮಿ ಪಾಲ್ಗೊಳ್ಳುವುದಾಗಿ ಹೇಳಿದರು. ಸೆ.30ರಂದು ಬೆಳಗ್ಗೆ 9.30ಕ್ಕೆ ನಡೆಯುವ ವಿಚಾರ ಸಂಕಿರಣದಲ್ಲಿ ನಾಟ್ಯ ವಿದ್ಯಾರ್ಥಿಗಳು ಮತ್ತು ಶಾಸ್ತ್ರದ ಅಧ್ಯಯನ ಕುರಿತು ಹಿರಿಯ ನೃತ್ಯ ಕಲಾವಿದೆ ಡಾ.ತುಳಸಿ ರಾಮಚಂದ್ರ ಹಾಗೂ ಪ್ರೊ.ನಾಗೇಶ್ ಬೆಟ್ಟಕೋಟೆ ವಿಷಯ ಮಂಡಿಸಲಿದ್ದು, ಹಿರಿಯ ರಂಗಕರ್ಮಿ ಪ್ರೊ.ಎಚ್.ಎಸ್. ಉಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಅ.1ರಂದು ನಡೆಯುವ ನಾಟ್ಯ ಪ್ರದರ್ಶಕರು ಮತ್ತು ರಂಗ ಸಂಯೋಜನೆಯ ತಿಳುವಳಿಕೆ ವಿಚಾರ ಕುರಿತು ಹಿರಿಯ ನೃತ್ಯ ಕಲಾವಿದೆ ಡಾ. ವಸುಂಧರಾ ದೊರೆಸ್ವಾಮಿ ಹಾಗೂ ಹಿರಿಯ ರಂಗ ನಿರ್ದೇಶಕ ಮೈಮ್ ರಮೇಶ್ ವಿಷಯ ಮಂಡಿಸುವರು. ಹಿರಿಯ ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ ಅಧ್ಯಕ್ಷತೆ ವಹಿಸುವುದಾಗಿ ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಚಿತ್ರನಟ ಬಲರಾಜುವಾಡಿ, ಡಾ.ಗಾಯಿತ್ರಿ, ರಂಗ ಕಲಾವಿದ ಸತೀಶ್ ಪೊನ್ನಚ್ಚ ಉಪಸ್ಥಿತರಿದ್ದರು.

ಅರಣ್ಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಹಿಂದಿನ ಕಾರ್ಯದರ್ಶಿಯಿಂದ ವಂಚನೆ ಆರೋಪ

ಮೈಸೂರು,ಸೆ.27(ಎಂಟಿವೈ)– ಮೈಸೂರು ಜಿಲ್ಲಾ ಅರಣ್ಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಹಿಂದಿನ ಕಾರ್ಯದರ್ಶಿ ಮಹದೇವಸ್ವಾಮಿ ಹಾಗೂ ಶಾಂಭವಿ ಡೆವಲಪರ್ಸ್, ಸಂಘಕ್ಕೆ 2 ಕೋಟಿ ರೂ. ಗೂ ಹೆಚ್ಚು ವಂಚನೆ ಮಾಡಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಎಸ್.ಶೇಖರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಸಂಘದ ಸದಸ್ಯರಲ್ಲಿ ಕೆಲವರು ಸಂಘದಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ ಆರೋಪಿಸಿದ್ದರು. ಅವ್ಯವಹಾರದಲ್ಲಿ ಈಗಿನ ಆಡಳಿತ ಮಂಡಳಿ ಸದಸ್ಯರು ಭಾಗಿಯಾಗಿಲ್ಲ. ಆದರೆ, ಈ ಹಿಂದೆ ಸಂಘದ ಕಾರ್ಯದರ್ಶಿಯಾಗಿದ್ದವರು ಡೆವಲಪರ್ಸ್ ಸಂಸ್ಥೆಯೊಂದಿಗೆ ಸೇರಿ ಎರಡು ಕೋಟಿ ರೂ.ಗಿಂತಲೂ ಹೆಚ್ಚಿನ ಮೊತ್ತವನ್ನು ವಂಚಿಸಿದ್ದಾರೆ. ಈ ಸಂಬಂಧ ಹಣ ವಸೂಲಿಗೆ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗಿದೆ. ಸಂಘದ ಹಾಲಿ ಆಡಳಿತ ಮಂಡಳಿಯಿಂದ ಯಾವ ಅಕ್ರಮವೂ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು.

ಮಹದೇವಸಾಮಿ ಅವರು ಸಂಘದ ಬ್ಯಾಂಕ್ ಖಾತೆಯ ಪಾಸ್ ಪುಸ್ತಕವನ್ನೂ ಫೋರ್ಜರಿ ಮಾಡಿದ್ದು, 2016–17ನೇ ಸಾಲಿನಿಂದ 2021–22 ನೇ ಸಾಲಿನವರೆಗೆ ಆಡಿಟ್ ಮಾಡಿಸಿದ್ದಾರೆ. ಇದರಲ್ಲೂ ಮಹದೇವಸ್ವಾಮಿ ಸಂಘದ ಆಡಳಿತ ಮಂಡಳಿ ಹಾಗೂ ಸದಸ್ಯರಿಗೆ ದಾರಿ ತಪ್ಪಿಸುವ ಪ್ರಯತ್ನ ಮಾಡಿದ್ದಾರೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಸಂಘದಲ್ಲಿ ಒಟ್ಟು 647 ಸದಸ್ಯರಿದ್ದಾರೆ. ಇವರಲ್ಲಿ 440 ಸದಸ್ಯರು, ನಿವೇಶನ ಮುಂಗಡವಾಗಿ ಒಟ್ಟು 3,61, 60,326 ರೂ. ಗಳನ್ನು ಪಾವತಿಸಿರುವರು. ಸಂಘದ ಸದಸ್ಯರಿಗೆ ನಿವೇಶನ ಕಲ್ಪಿಸಲು ಒಟ್ಟು 32.27 ಎಕರೆ ಜಮೀನು ಸಂಘ ಹಾಗೂ ಸಂಘದ ಸದಸ್ಯರ ಹೆಸರಿನಲ್ಲಿ ಖರೀದಿಸಿದ್ದು, ಕೆಲವೊಂದು ಜಮೀನುಗಳಿಗೆ ಕಂದಾಯ ದಾಖಲೆಗಳು ಸರಿಯಾಗಿ ಇಲ್ಲದೇ ಇರುವುದರಿಂದ ಪೋಡಿ ಮತ್ತು ದುರಸ್ತಿಪಡಿಸಿ ಅಭಿವೃದ್ಧಿಪಡಿಸಿ ನಿವೇಶನ ಹಂಚಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವ ಸಂಬಂಧ ಆಡಳಿತ ಮಂಡಳಿಯಿಂದ ಕ್ರಮ ವಹಿಸಲಾಗುತ್ತಿದೆ.

ಶನಿಮಹಾಶಾಂತಿ, ಮಹಾಸುದರ್ಶನ ಹೋಮ

ಮೈಸೂರು: ಇಲ್ಲಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಸೆ.29ರ ಶುಕ್ರವಾರ ಬೆಳಗ್ಗೆ 9.30ಕ್ಕೆ ಮಕರ, ಕುಂಭ, ಮೀನ, ಕರ್ಕಾಟಕ, ತುಲಾ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಭಾದನಿವಾರಕ ಸುದರ್ಶನ ಹೋಮ, ಆರೋಗ್ಯಕ್ಕೆ, ಮೃತ್ಯುಂಜಯ ಹೋಮ, ಧನಪ್ರಾಪ್ತಿಗಾಗಿ ಕುಬೇರ ಲಕ್ಷ್ಮಿ ಹೋಮ, ಶ್ರೀ ಸತ್ಯನಾರಾಯಣ ಪೂಜೆಯನ್ನು ಏರ್ಪಡಿಸಲಾಗಿದೆ. ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ (ಜಾತಕ ವಿಮರ್ಶಕರು) ಮೊ. ಸಂ. 98451 83392, 98451 83399 ಸಂಪರ್ಕಿಸಬಹುದು.

ಗಿನ್ನಿಸ್ ವಿಶ್ವ ದಾಖಲೆ; ಕಣ್ಣು ಮುಚ್ಚಿ ಚೆಸ್ ಜೋಡಿಸಿದ 10 ವರ್ಷದ ಪುನೀತಾಮಲರ್

ನವದೆಹಲಿ: ಮಲೇಷಿಯಾದ 10 ವರ್ಷದ ಚೆಸ್ ಪಟು ಪುನೀತಾ ಮಲರ್ ರಾಜಶೇಖರ್ ಕಣ್ಣು ಮುಚ್ಚಿ ಚೆಸ್ ಜೋಡಿಸಿ ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸಿದ್ದಾಳೆ.



ಕೇವಲ 45.72 ಸೆಕೆಂಡ್‌ಗಳಲ್ಲಿ ಚೆಸ್ ಬೋರ್ಡ್ ಅನ್ನು ಯಶಸ್ವಿಯಾಗಿ ಜೋಡಿಸಿ ಮುಂದಿನ ಹಂತಕ್ಕೆ ಆಟವನ್ನು ಕೊಂಡೊಯ್ದು ಗಮನ ಸೆಳೆದಿದ್ದಾಳೆ ಪುನೀತಾಮಲರ್.

ಈ ಮೂಲಕ Quickest blind-folded chess set arrangement ಗಾಗಿ ಪ್ರತಿಷ್ಠಿತ ಗಿನ್ನಿಸ್ ವಿಶ್ವ ದಾಖಲೆಯನ್ನು ಗಳಿಸಿದ್ದಾಳೆ. ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್ ಜೊತೆ ಮಾತನಾಡಿದ ಈಕೆ, 'ನನ್ನ ತಂದೆಯೇ ನನ್ನ ತರಬೇತುದಾರರು. ನಾವು ಪ್ರತೀದಿನ ಒಟ್ಟಿಗೇ ಆಡುತ್ತೇವೆ. ಅಲ್ಲದೆ, ಅಸಾಧಾರಣ ಸಾಧಕರ ಕುರಿತು ಸಾಕ್ಷ್ಯಚಿತ್ರವನ್ನು ವೀಕ್ಷಿಸುತ್ತಿರುವಾಗ ನನಗೂ ವಿಶ್ವ ದಾಖಲೆಗಾಗಿ ಪ್ರಯತ್ನಿಸಬೇಕು ಎಂಬ ಆಲೋಚನೆ ಬಂದಿತು' ಎಂದಿದ್ದಾಳೆ.

ತಮ್ಮ ಮಿತಿಗಳನ್ನು ಮೀರಿ ಮತ್ತು ನಂಬಲು ಆಗದಂಥ ಸಾಧನೆಗಳನ್ನು ಮಾಡಿದ ಸಾಧಕರು ನನಗೆ ನಿಜಕ್ಕೂ ಸ್ಫೂರ್ತಿ ಕೊಡುತ್ತಾರೆ. ಈಗಾಗಲೇ ಕಿಡ್ಸ್ ಗಾಟ್ ಟ್ಯಾಲೆಂಟ್‌ನಂತಹ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಇನ್ನೂ ಹೆಚ್ಚಿನ ಸಾಧನೆ ಮಾಡಲು ಬಯಸುತ್ತೇನೆ ಎಂದಿದ್ದಾಳೆ ಪುನೀತಾಮಲರ್.

ಕಲಾದೇವಿ ಬೊಂಬೆ ಸಂಗ್ರಹಾಲಯ ಉದ್ಘಾಟನೆ; ದಕ್ಷಿಣ ಭಾರತದ ಪ್ರಪ್ರಥಮ ಸಂಗ್ರಹಾಲಯವೆಂಬ ಹಿರಿಮೆ

ಕಣ್ಣು ಕೋರೈಸುತ್ತಿದೆ ಮನಮೋಹಕ ಜಂಬೂಸವಾರಿ ನೋಟ

ಬೊಂಬೆಗಳ ಲೋಕದಲ್ಲಿ ಅನಾವರಣಗೊಂಡ ವಿಜಯದಶಮಿ ಮೆರವಣಿಗೆ

ಮೈಸೂರು,ಸೆ.27(ಪಿಎಂ)– ಮನಮೋಹಕ ಮೈಸೂರು ದಸರಾ ಜಂಬೂಸವಾರಿಯ ವೈಭವದ ನೋಟ ಸೇರಿದಂತೆ ದೇಶ ಮತ್ತು ನಾಡಿನ ವೈವಿಧ್ಯಮಯ ಆಚರಣೆ, ಪರಂಪರೆಯು ಬೊಂಬೆ ಲೋಕದಲ್ಲಿ ಅನಾವರಣಗೊಳ್ಳುವ ಮೂಲಕ ನೋಡುಗರ ಕಣ್ಣು ಕೋರೈಸುತ್ತಿವೆ.

ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ವತಿಯಿಂದ ಇಂತಹ ಮನಸೂರೆಗೊಳ್ಳುವ 'ಕಲಾದೇವಿ ಬೊಂಬೆ ಸಂಗ್ರಹಾಲಯ' ಸ್ಥಾಪಿಸಿದ್ದು, ಇದು ದಕ್ಷಿಣ ಭಾರತದ ಪ್ರಪ್ರಥಮ ಬೊಂಬೆ ಸಂಗ್ರಹಾಲಯ ಎಂಬ ಹಿರಿಮೆಗೆ ಭಾಜನವಾಗಿದೆ. ಮೈಸೂರು ಮೃಗಾಲಯದ ಎದುರಿನ ಕರಕುಶಲ ಕಲಾಕೃತಿಗಳ ಮಳಿಗೆ 'ರಾಮ್‌ಸನ್ಸ್ ಹ್ಯಾಂಡಿಕ್ರಾಫ್ಟ್ಸ್ ಸೇಲ್ಸ್ ಎಂಪೋರಿಯಮ್'ನ ನೆಲ ಮಾಳಿಗೆಯಲ್ಲಿ ಈ ಸಂಗ್ರಹಾಲಯ ಆರಂಭಗೊಂಡಿದೆ.

1970ರಲ್ಲಿ ಡಿ.ರಾಮ್‌ಸಿಂಗ್ ಅವರಿಂದ ಪ್ರಾರಂಭವಾದ 'ರಾಮ್‌ಸನ್ಸ್ ಹ್ಯಾಂಡಿಕ್ರಾಫ್ಟ್ಸ್ ಸೇಲ್ಸ್ ಎಂಪೋರಿಯಮ್'ನ 50ನೇ ವಾರ್ಷಿಕೋತ್ಸವದ ಪ್ರಯುಕ್ತ ಹಾಗೂ ಡಿ.ರಾಮ್‌ಸಿಂಗ್ ಅವರ ಪತ್ನಿ ಆರ್. ಕಲಾದೇವಿ ಅವರ ಸ್ಮರಣಾರ್ಥ 'ಕಲಾದೇವಿ ಬೊಂಬೆ ಸಂಗ್ರಹಾಲಯ' ಸ್ಥಾಪಿಸಲಾಗಿದೆ.

1939ರ ದಸರಾ ಜಂಬೂಸವಾರಿಯ ಪ್ರತಿರೂಪ ಬೊಂಬೆಗಳ ಮೂಲಕ ಇಲ್ಲಿ ಅನಾವರಣಗೊಂಡಿದ್ದು, ಆ ಮೂಲಕ ಈ ಚಿತ್ರಣವು ಇಲ್ಲಿನ ಪ್ರಮುಖ ಆಕರ್ಷಣೆಯಾಗಿದೆ. ಅಂದಿನ ರಾಜ ಪರಂಪರೆಯಲ್ಲಿ ನಡೆದ ಜಂಬೂಸವಾರಿಯನ್ನು ಅರಮನೆಯಲ್ಲಿ ಹಿನ್ನೆಲೆಯೊಂದಿಗೆ ಯಥಾವತ್ತಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.


ಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್ ಅವರ ಸೃಷ್ಟಿಯಾದ ಕಾರ್ಟೂನ್ 'ಕಾಮನ್ ಮ್ಯಾನ್' ಬೊಂಬೆಯೂ ಇಲ್ಲಿ ಆಕರ್ಷಿಸುತ್ತಿದೆ. ಅಲ್ಲದೆ, ಬಣ್ಣಿಸಲಾಗದಷ್ಟು ಬಗೆಬಗೆಯ ಬೊಂಬೆಗಳು ನೋಡುಗರಲ್ಲಿ ಬೆರಗು ಮೂಡಿಸುತ್ತಿವೆ.

ವಿವಿಧ ಆಕೃತಿಗಳ ಗಣೇಶನ ಬೊಂಬೆಗಳು, ಹಿಂದೂ ಪರಂಪರೆಯಲ್ಲಿರುವ ತಿಲಕದ ವೈವಿಧ್ಯತೆಯನ್ನೂ ಇಲ್ಲಿ ಬೊಂಬೆ ಮುಖವಾಡಗಳು ಬಿಂಬಿಸುತ್ತಿವೆ. ರಾಮಯಾಣದ ಸನ್ನಿವೇಶಗಳು, ಕೃಷ್ಣ ಹಾಗೂ ನಂದಗೋಕುಲ ದೃಶ್ಯ ಕಣ್ಣಿಗೆ ಕಟ್ಟುವ ಬೊಂಬೆಗಳು, ಭಾರತದ ವಿವಿಧ ಭಾಗಗಳ ಪಾರಂಪರಿಕ ವಸ್ತ್ರಧಾರಿಯ ಬೊಂಬೆಗಳು, ಮಹಿಷಾಸೂರ, ಚಾಮುಂಡೇಶ್ವರಿ ಸೇರಿದಂತೆ ನಾನಾ ಬೊಂಬೆಗಳು ಮನಸೂರೆಗೊಳ್ಳುತ್ತಿವೆ.



ಮೈಸೂರು ಮೃಗಾಲಯದ ಎದುರು ಕಲಾದೇವಿ ಬೊಂಬೆ ಸಂಗ್ರಹಾಲಯವನ್ನು ಬುಧವಾರ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಉದ್ಘಾಟಿಸಿ, 1939ರ ದಸರಾ ಜಂಬೂ ಸವಾರಿ ಪ್ರತಿಕೃತಿಯ ಬೊಂಬೆಗಳ ಜೋಡಣೆ ವೀಕ್ಷಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಬುಧವಾರ 'ಕಲಾದೇವಿ ಬೊಂಬೆ ಸಂಗ್ರಹಾಲಯ' ಉದ್ಘಾಟಿಸಿದರು. ಬಳಿಕ ಸಂಗ್ರಹಾಲಯದ ಪಕ್ಕದ ಆವರಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ಕಲೆಗೆ ಪ್ರೋತ್ಸಾಹ ನೀಡುತ್ತಿರುವುದು ನೋಡಿ ಸಂತಸ ಉಂಟಾಯಿತು. ನಮ್ಮ ನೆಲದ ಪ್ರಾಚೀನ ಪರಂಪರೆ, ಸಂಸ್ಕೃತಿ ಮತ್ತು ವೈಭವವನ್ನು ಇಲ್ಲಿ ಬೊಂಬೆಗಳ ಮೂಲಕ ಕಣ್ಣಿಗೆ ಕಟ್ಟಿಕೊಡಲಾಗಿದೆ. ಆ ಮೂಲಕ ನಮ್ಮ ಮಕ್ಕಳಿಗೆ ನಮ್ಮ ಪರಂಪರೆಯ ಗತವೈಭವ ಪರಿಚಯಿಸುವ ಸುಲಭ ಮತ್ತು ಪರಿಣಾಮಕಾರಿ ಮಾರ್ಗವನ್ನು ಇಲ್ಲಿ ಕಂಡುಕೊಳ್ಳಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಸಂಗ್ರಹಾಲಯದಲ್ಲಿರುವ ಆರ್.ಕೆ.ಲಕ್ಷ್ಮಣ್ ಅವರ ವ್ಯಂಗ್ಯಚಿತ್ರವಾದ ಕಾಮನ್ ಮ್ಯಾನ್ ಪ್ರತಿರೂಪ.

ನವರಾತ್ರಿಯ ಸಂದರ್ಭದಲ್ಲಿ ಕೆಲವು ಕಡೆಗಳಲ್ಲಿ ಇಡೀ ಮನೆಯನ್ನೇ ಬೊಂಬೆಗಳ ಅಲಂಕಾರಕ್ಕೆ ಸೀಮಿತಗೊಳಿಸುವುದಿದೆ. ಹೀಗೆ ರಾಮಾಯಣ, ಮಹಾಭಾರತ, ವಿವಿಧ ಕ್ಷೇತ್ರಗಳ ವರ್ಣಿಸುವ ಬೊಂಬೆ ಪ್ರದರ್ಶನಗಳನ್ನು ಕಾಣುವುದು ಅದ್ಭುತವೇ ಸರಿ. ಈ ಬೊಂಬೆಗಳನ್ನು ಜೋಡಿಸುವ ಕಲೆಯೂ ದೊಡ್ಡ ಕಲೆಯಾಗಿದೆ. ಬದುಕನ್ನೇ ಕಲೆಯಾಗಿ ಹೇಗೆ ನಾವು ಸ್ವೀಕರಿಸಬೇಕೆಂಬ ಪಾಠವನ್ನು ಬೊಂಬೆ ಪ್ರದರ್ಶನದ ಕಲೆ ಮೂಲಕ ಪ್ರತಿಷ್ಠಾನ ಸಮಾಜಕ್ಕೆ ನೀಡುತ್ತಿದೆ. ಕೃಷ್ಣನ ಬಾಲಲೀಲೆಗಳನ್ನು ಅನಾವರಣಗೊಳಿಸುವ ಅನೇಕ ಬೊಂಬೆಗಳನ್ನೂ ಇಲ್ಲಿ ಕಾಣಬಹುದು ಎಂದು ಹರ್ಷ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಹಿರಿಯ ಕಲಾವಿದ ಜಿ.ಎಲ್.ಎನ್.ಸಿಂಹ ಹಾಗೂ ಅವರ ಪ್ರೇಮ ಸಿಂಹ ಅವರನ್ನು ಪೇಜಾವರ ಶ್ರೀಗಳು ಗೌರವಿಸಿ, ಆಶೀರ್ವದಿಸಿದರು. ಪೇಜಾವರ ಶ್ರೀಗಳ ಚಾತುರ್ಮಾಸ್ಯ ಸಮಿತಿ ಪ್ರಮುಖರಾದ ವಾಸುದೇವ ಭಟ್, ಪ್ರತಿಷ್ಠಾನದ ಅಧ್ಯಕ್ಷ ಆರ್.ಅಜಯ್‌ಕುಮಾರ್ ಸಿಂಗ್, ಟ್ರಸ್ಟಿ ಆರ್.ರಾಜೇಶ್‌ಕುಮಾರ್‌ಸಿಂಗ್, ಕಾರ್ಯದರ್ಶಿ ಆರ್.ಜಿ.ಸಿಂಗ್, ಸಂಗ್ರಹಾಲಯದ ಮೇಲ್ವಿಚಾರಕ ರಘು ಧರ್ಮೇಂದ್ರ, ಸಂಗ್ರಹಾಲಯದ ವಿನ್ಯಾಸಕಿ ವಿದ್ಯಾ ಮತ್ತಿತರರು ಹಾಜರಿದ್ದರು.

> “ಕಲಾದೇವಿ ಬೊಂಬೆ ಸಂಗ್ರಹಾಲಯದಲ್ಲಿ ಇನ್ನು ಅನೇಕ ಪರಿಕಲ್ಪನೆಯಡಿ ಬೊಂಬೆಗಳ ಜೋಡಣೆ ಮಾಡಲಾಗುವುದು. 18 ವರ್ಷಗಳಿಂದ ದಸರಾ ವೇಳೆ ಬೊಂಬೆ ಪ್ರದರ್ಶನ ಆಯೋಜಿಸಲಾಗುತ್ತಿದ್ದು, ಈ ವೇಳೆ ಸಿದ್ಧಪಡಿಸಿದ ಬೊಂಬೆಗಳನ್ನು ಸದರಿ ಸಂಗ್ರಹಾಲಯದಲ್ಲಿ ಜೋಡಣೆ ಮಾಡಲಾಗಿದೆ. ನಮ್ಮ ಮಳಿಗೆ ಕಾರ್ಯಾಚರಣೆಯಲ್ಲಿರುವ ದಿನಗಳಲ್ಲಿ ಬೆಳಗ್ಗೆ 10ರಿಂದ ರಾತ್ರಿ 7ರವರೆಗೆ ಸಾರ್ವಜನಿಕರು ಉಚಿತವಾಗಿ ಕಲಾದೇವಿ ಬೊಂಬೆ ಸಂಗ್ರಹಾಲಯಕ್ಕೆ ಭೇಟಿ ನೀಡಿ, ವೀಕ್ಷಿಸಬಹುದು. **–ಆರ್.ಜಿ.ಸಿಂಗ್**



ಮೈಸೂರು ಮಿತ್ರ ಗುರುವಾರ 28 ಸೆಪ್ಟೆಂಬರ್ 2023

ಕಾವೇರಿ ಹೋರಾಟಕ್ಕೆ ನಂಜಾವಧೂತ ಶ್ರೀಗಳು ಬೆಂಬಲ

ರೈತರ ವಿಚಾರದಲ್ಲಿ ರಾಜ್ಯ ಸರ್ಕಾರ ದಿಟ್ಟತನ ಪ್ರದರ್ಶಿಸಲು ಸಲಹೆ



ಮಂಡ್ಯ, ಸೆ.27– ಕಾವೇರಿ ನದಿ ನೀರು ವಿಚಾರವಾಗಿ ಸಂಕಷ್ಟದ ಸಂದಿಗ್ಧ ಸಮಯದಲ್ಲಿ ರೈತರು ಮತ್ತು ನಾಡಿನ ಜನರ ಹಿತ ಕಾಯಲು ರಾಜ್ಯ ಸರ್ಕಾರ ಹಿಂಜರಿಕೆ ತೊರೆದು ದಿಟ್ಟತನ ಪ್ರದರ್ಶಿಸ ಬೇಕೆಂದು ತುಮಕೂರಿನ ಸ್ಪಟಿಕಪುರಿ ಮಠದ ಶ್ರೀ ನಂಜಾವಧೂತ ಸ್ವಾಮೀಜಿ ಹೇಳಿದರು.

ಕಾವೇರಿ ಹೋರಾಟ ಬೆಂಬಲಿಸಿ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿಯ ಧರಣಿ ಸ್ಥಳದವರೆಗೆ ಪಾದ ಯಾತ್ರೆ ನಡೆಸಿ ಬಳಿಕ ಧರಣಿನಿರತರನ್ನು ದ್ದೇಶಿಸಿ ಮಾತನಾಡಿದ ಅವರು, ಕಾವೇರಿ ನದಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕೆ ನಿರಂತರ ಅನ್ಯಾಯ ಆಗುತ್ತಿದೆ. ಹಾಗಾಗಿ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಡಬೇಕಾಗಿದ್ದು, ರಾಜಕೀಯವಾಗಿ ನಷ್ಟ ಆಗಲಿದೆ ಎಂಬ ಹಿಂಜರಿಕೆ ಮನೋಭಾವ ಬೇಡ. ನಿಮ್ಮ ದೃಢ ನಿರ್ಧಾರದಿಂದ ರಾಜಕೀಯ ನಷ್ಟ ಆದರೆ ನಾಡಿನ ಜನತೆ ಅದನ್ನೂ ಭರಿಸಿ ಕೊಡಲಿದ್ದಾರೆ. ಜನತೆ ಯಾರ ಋಣ ದಲ್ಲಿಯೂ ಇರುವುದಿಲ್ಲ, ಇದನ್ನ ಮನ ಗಂಡು ದೃಢ ನಿಲುವು ಕೈಗೊಳ್ಳಬೇಕೆಂದು ಸಲಹೆ ನೀಡಿದರು.

ಬಂಗಾರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಸುಗ್ರೀವಾಜ್ಞೆ ಮೂಲಕ ನಾಡಿನ ಹಿತಕ್ಕೆ ಮುಂದಾಗಿದ್ದರು. ಅವರನ್ನು ಕೋರ್ಟ್ ಜೈಲಿಗೆ ಹಾಕಲಿಲ್ಲ. ಹಾಗಾಗಿ ಯಾವುದಕ್ಕೂ ಹೆದರಬಾರದು. ಭಯಬೇಡ ರೈತರ ಹಿತರಕ್ಷಣೆಯೇ ಮುಖ್ಯವಾಗಿದ್ದು, ಸರ್ಕಾರ ಇಡುವ ದಿಟ್ಟ ಹೆಜ್ಜೆ ಮುಂದಿನ ದಿನಗಳಲ್ಲಿ ಕಾನೂನಾಗಿ ಪರಿವರ್ತನೆ ಆಗಲಿದೆ. ನಿಮ್ಮ ಹಿಂಜರಿಕೆ ಕೋಟ್ಯಂತರ ಜನರ ಬದುಕು ಮತ್ತು ಭಾವನೆಯನ್ನು ತ್ಯಜಿಸ ಗೊಳಿಸಲಿದೆ. ಎಂತಹ ಸನ್ನಿವೇಶದಲ್ಲೂ ರಾಜಕೀಯ ಪಕ್ಷಗಳೊಂದಿಗೆ ನಾಡಿನ ಜನತೆ ನಿಲ್ಲಲಿದ್ದಾರೆ ಎಂದು ತಿಳಿಸಿದರು.

ಜನತೆ ಅಧಿಕಾರ ಕೊಟ್ಟಿರುವುದು ಜನಸಾಮಾನ್ಯರ ಹಿತ ಕಾಪಾಡಲು ಎಂಬುದನ್ನ ರಾಜಕೀಯ ಮುಖಂಡರು ಮರೆಯಬಾರದು. ರಾಜಕೀಯ ಮಾಡುವ ಸಂದರ್ಭ ಇದಲ್ಲ. ಸಂಕಷ್ಟದ ಸಮಯದಲ್ಲಿ ರಾಜಕೀಯ ಪಕ್ಷಗಳು ರಾಜಕೀಯ ಇಚ್ಛಾ ಶಕ್ತಿ ಮತ್ತು ಸಮಗ್ರತೆ ಪ್ರದರ್ಶಿಸಬೇಕು. ಕಾವೇರಿ ವಿಚಾರವಾಗಿ ಪಕ್ಷಗಳ ನಿಲುವು ರೈತ ಪರವಾಗಿರಬೇಕು, ಒಗ್ಗಟ್ಟು ಇಲ್ಲದಿದ್ದರೆ ನ್ಯಾಯ ಪಡೆಯಲು ಆಗದು ಈಗಲೇ ಎಚ್ಚೆತ್ತುಕೊಳ್ಳಬೇಕೆಂದು ಹೇಳಿದರು.

ಮಳೆ ಬಿದ್ದಾಗ ತಮಿಳುನಾಡಿಗೆ ಸಾಕಷ್ಟು ನೀರು ಹರಿದಿದೆ. ನೀರು ಇದ್ದಾಗ ಕೊಡಲ್ಲ ಅನ್ನಲು ನಾವೇನು ಕ್ರೂರಿಗಳಲ್ಲ, ಹಂಚಿ ತಿನ್ನುವ ನೆಲದಲ್ಲಿ ಹುಟ್ಟಿದ್ದೇವೆ, ಸ್ವಲ್ಪ ಪ್ರಮಾಣದಲ್ಲಿ ಜಲಾಶಯಗಳಿಗೆ ನೀರು ಹರಿದು ಬರುತ್ತಿದೆ ಎಂದೇಳಿ ನೆರೆ ರಾಜ್ಯಕ್ಕೆ ನೀರು ಹರಿಸುತ್ತಿದ್ದರೆ ಇಲ್ಲಿನ ರೈತರ ಮತ್ತು ಜನರ ಗತಿ ಏನು, ಮತ್ತೆ ಮಳೆ ಬರುವ ಮುನ್ಸೂಚನೆ ಇಲ್ಲ, ಈಗಾಗಲೇ ಕೆಆರ್‌ಎಸ್ 96 ಅಡಿಗೆ ಕುಸಿದಿದೆ. ಕೋಟ್ಯಂತರ ಜನರಿಗೆ ಕುಡಿಯುವ ನೀರು ಒದಗಿಸಬೇಕಾ ಗಿದೆ ಸರ್ಕಾರ ಮುನ್ನೆಚ್ಚರಿಕೆ ವಹಿಸದಿದ್ದರೆ ಮುಂದಿನ ವರ್ಷದ ಮುಂಗಾರು ಆರಂಭ ವಾಗುವರೆಗೂ ಸಂಕಷ್ಟದ ದಿನಗಳು ಎದು ರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ರಾಜ್ಯದ 28 ಸಂಸದರು ಕರ್ನಾಟಕಕ್ಕೆ ನಿರಂತರ ಅನ್ಯಾಯವಾಗುತ್ತಿದ್ದರೂ ಸಂಸತ್ತಿ ನೊಳಗೆ ಹೋರಾಟ ಮಾಡದಿರುವುದು ಸರಿಯಲ್ಲ. ಈಗಲಾದರೂ ಸಂಸತ್ತಿನ ಎದುರು ಹೋರಾಟ ಮಾಡುವ ಮೂಲಕ ಕೇಂದ್ರ ಸರ್ಕಾರಕ್ಕೆ ಬಿಸಿ ಮುಟ್ಟಿಸಬೇಕು. ಇಂತಹದೇ ಸಂಕಷ್ಟದ ಸನ್ನಿವೇಶದಲ್ಲಿ ಮಾಜಿ ಪ್ರಧಾನಿ ದೇವೇಗೌಡರು ಗಾಂಧಿ ಪ್ರತಿಮೆ ಎದುರು ಧರಣಿ ಕುಳಿತಾಗ ಅಂದಿನ ಪ್ರಧಾನಿ ಮಧ್ಯಪ್ರವೇಶ ಮಾಡಿದ್ದರು. ಇದನ್ನು ಸಂಸತ್ ಸದಸ್ಯರು ಅರಿಯಬೇಕಾಗಿದೆ ಎಂದರು.

ಕಾವೇರಿ ಪ್ರಾಧಿಕಾರ, ಸಮಿತಿ ಮತ್ತು ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಂಡಿಸಲಿಲ್ಲ ಎಂಬುದು ನಾಡಿನ ಜನರ ಮನಸ್ಸಿನಲ್ಲಿದೆ. ರೈತರಿಗಿಂತ ತಜ್ಞರು ಬೇಕೆ ಅವರ ಜೊತೆ ವಕೀಲರು ಬೆರೆತು ನೆಲದ ಸಮಸ್ಯೆ ಹರಿಯುವಂತೆ ಮಾಡಬೇಕು. ವಾಸ್ತವ ಪರಿಸ್ಥಿತಿ ವಕೀಲರಿಗೆ ಅರ್ಥ ಆಗದಿದ್ದರೆ ಅವರಿಗೆ ಸಮರ್ಥವಾದ ಮಂಡಿಸಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಅತ್ಯಂತ ಸಂಕಷ್ಟದ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಬೇಕು, ಕರ್ನಾಟಕಕ್ಕೆ ನೀರಿನ ವಿಚಾರದಲ್ಲಿ ಆಗುತ್ತಿರುವ ನಿರಂತರ ದಬ್ಬಾಳಿಕೆ ತಪ್ಪಿಸಿ ನ್ಯಾಯ ಯುತ ಪರಿಹಾರಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದ ಅವರು, ಕನ್ನಡ ನಾಡಿಗೆ ವರುಣ ಕೃಪೆ ತೋರಲಿ ಸಂಕಷ್ಟದ ಸಮಯ ದೂರವಾಗಲಿ ಎಂದು ಆಶಿಸಿದರು. ಕಿರಗೋಡು ಶಾಖಾ ಮಠದ ಶಿವಾನಂದಸ್ವಾಮೀಜಿ, ಕನ್ನಡಪರ ಸಂಘಟನೆಗಳ ಮುಖಂಡರಾದ ರೂಪೇಶ್ ರಾಜಣ್ಣ ರಮೇಶ್‌ಗೌಡ, ರಾಮ್ ಪ್ರಸಾದ್, ಗೋವಿಂದೇಗೌಡ, ರಾಜ ಶೇಖರ್, ವೆಂಕಟೇಶ್ ಇತರರಿದ್ದರು.

ಕಿವಿ ಮೇಲೆ ಹೂವು ಇಟ್ಟುಕೊಂಡು ಹಿತರಕ್ಷಣಾ ಸಮಿತಿ ಧರಣಿ

ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ಪ್ರತಿನಿತ್ಯ ಮೂರು ಸಾವಿರ ಕ್ಯೂಸೆಕ್ ನೀರು ಬಿಡಲು ಆದೇಶಿಸಿರುವ ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಹಾಗೂ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ ಸದಸ್ಯರು ಕಿವಿ ಮೇಲೆ ಹೂವು ಇಟ್ಟುಕೊಂಡು ಕುಡಿಕೆ ಪ್ರದರ್ಶನ ಮಾಡಿ ಧರಣಿ ಮುಂದುವರೆಸಿದರು.

ಬುಧವಾರ ನಗರದ ಸರ್‌ಎಂವಿ ಪ್ರತಿಮೆ ಎದುರು ನಿರಂತರ ಧರಣಿ 26ನೇ ದಿನವೂ ಮುಂದುವರೆಸಿದ್ದು, ರಾಜ್ಯ ಸರ್ಕಾರ ಮಡಿಕೆ ನೀರು ಬಿಟ್ಟು ಕುಡಿಕೆ ನೀರು ಇರಿಸಿದೆ ಅಲ್ಲದೆ ರೈತರ ಮತ್ತು ಕನ್ನಡಿಗರ ಕಿವಿ ಮೇಲೆ ಹೂವು ಇಟ್ಟಿದೆ. ಕಾವೇರಿ ನದಿ ನೀರಿನ ವಿಚಾರದಲ್ಲಿ ಸಮಿತಿ ಮತ್ತು ಪ್ರಾಧಿಕಾರದ ಎದುರು ರಾಜ್ಯ ಸರ್ಕಾರ ವಾಸ್ತವಂಶ ಸಮರ್ಥವಾಗಿ ಮಂಡಿಸಿಲ್ಲ. ರೈತರ ಹಿತ ಕಾಪಾಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು.

ರಾಜ್ಯ ಸರ್ಕಾರ ರೈತರ ಕಾಪಾಡುವ ಹೊಣೆಗಾರಿಕೆ ಯನ್ನು ನಿಭಾಯಿಸಿಲ್ಲ. ಸರ್ಕಾರದ ವೈಫಲ್ಯತೆಯಿಂದ ಕಾವೇರಿ ಕೊಳ್ಳದ ರೈತರು ಮತ್ತು ಜನತೆ ಸಂಕಷ್ಟಕ್ಕೆ ಸಿಲುಕಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಸಂಕಷ್ಟ ಎದುರಿಸಬೇಕಾಗಿದೆ. ಸಂಕಷ್ಟದ ಪರಿಸ್ಥಿತಿಯಲ್ಲಿ ಮಳೆ ಸುರಿದು ಪ್ರಕೃತಿ ಕೈ ಹಿಡಿಯಬೇಕು ಇಲ್ಲವೇ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಪರಿಹಾರ ರೂಪಿಸಬೇಕು ಇದನ್ನು ಹೊರತು ಪಡಿಸಿ ಮತ್ಯಾವ ನಿರ್ಧಾರದಿಂದ ಸಂಕಟದಿಂದ ಪಾರಾಗಲು ಸಾಧ್ಯವಿಲ್ಲ ಎಂದು ಹೇಳಿದರು.

ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ರಾಜ್ಯ ಸರ್ಕಾರ ಮುಂದಾಗಬೇಕು, ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಲು ಎಲ್ಲಾ ರೀತಿಯ ಕಾರ್ಯತಂತ್ರ ರೂಪಿಸಬೇಕು ಎಂದು ಒತ್ತಾಯಿಸಿದರು. ಮಧ್ಯಾಹ್ನದ ನಂತರ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸಿದ ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಹಿತರಕ್ಷಣಾ ಸಮಿತಿಯ ಜಿ.ಬಿ ಶಿವಕುಮಾರ್, ಸುನಂದಾ ಜಯರಾಂ, ಕೆ ಬೋರಯ್ಯ, ಅಂಬುಜಮ್ಮ, ಇಂಡುವಾಳು ಚಂದ್ರಶೇಖರ್, ಬೋರಾಪುರ ಶಂಕರೇಗೌಡ, ಬೋರಲಿಂಗೇಗೌಡ, ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ, ಪಿಇಟಿ ಅಧ್ಯಕ್ಷ ವಿಜಯಾನಂದ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ನೀರಿಲ್ಲ, ಗಾಂಜಾ ಬೆಳೆಯಲು ಅವಕಾಶ ನೀಡಿ, ಇಲ್ಲ ದಯಾಮರಣ ಕೊಡಿ

ಮೈಮೇಲೆ ಸಗಣಿ ಸುರಿದುಕೊಂಡು ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ



ಮಂಡ್ಯ, ಸೆ.27– ಕೃಷ್ಣರಾಜ ಸಾಗರ ಜಲಾಶಯ ದಿಂದ ತಮಿಳುನಾಡಿಗೆ ನೀರು ಹರಿಸಿ ಅಣೆಕಟ್ಟೆ ಬರಿದಾಗಿರುವುದರಿಂದ ರೈತರು ಬೆಳೆ ಬೆಳೆಯಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಗಾಂಜಾ ಬೆಳೆಯಲು ಅವಕಾಶ ಕಲ್ಪಿಸಬೇಕು ಇಲ್ಲವೇ ದಯಾ ಮರಣ ಕಲ್ಪಿಸಬೇಕೆಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಮೈ ಮೇಲೆ ಸಗಣಿ ಸುರಿದುಕೊಂಡು ನಗರದ ಡಿಸಿ ಕಚೇರಿ ಎದುರು ವಿನೂತನ ಪ್ರತಿಭಟನೆ ನಡೆಸಿದರು.

ಬುಧವಾರ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಬಿಜೆಪಿ ಕಾರ್ಯಕರ್ತ ಶಿವಕುಮಾರ ಆರಾಧ್ಯ ಎಂಬಾತ ಮೈ ಮೇಲೆ ಸಗಣಿ ನೀರು ಸುರಿದುಕೊಂಡು ಪ್ರತಿಭಟಿಸಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗೆ ಮನವಿ ರವಾನಿಸಿದರು.

ಕೆ.ಆರ್.ಎಸ್ ಜಲಾಶಯದ ಕಾವೇರಿ ನೀರನ್ನು ಸಂಪೂರ್ಣವಾಗಿ ತಮಿಳುನಾಡಿಗೆ ಹರಿಯಲು ಬಿಟ್ಟಿರುವು ದರಿಂದ ಈಗಾಗಲೇ ಜಲಾಶಯಗಳು ಬರಿದಾಗಿದೆ ಇಂಥ ಸನ್ನಿವೇಶದಲ್ಲಿ ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಪ್ರತಿನಿತ್ಯ ಮೂರು ಸಾವಿರ ಕ್ಯೂಸೆಕ್ ನೀರು ಬಿಡಲು ಸೂಚಿಸಿದೆ. ರೈತರಿಗೆ ಭತ್ತ, ರಾಗಿ, ಕಬ್ಬು ಬೆಳೆಯಲು ನೀರಿಲ್ಲದ ಕಾರಣ ಗಾಂಜಾ ಬೆಳೆಯಲು ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಗಾಂಜಾ ಬೆಳೆ ಬೆಳೆಯಲು ಕಾವೇರಿ ನೀರಿನ ಅವಶ್ಯಕತೆಯಿಲ್ಲ. ಮನೆಯ ತಿಪ್ಪೆಯ ಗುಂಡಿ ಸ್ನಾನ, ಪಾತ್ರೆ ತೊಳೆದ ನೀರು, ಸಸಿಯ ಕುಂಡಗಳಲ್ಲಿನ ನೀರು, ಹಿತ್ತಲಿನ ಕೀರೆಮಡಿ ಮತ್ತು ಕೈತೋಟದಲ್ಲಿ ಗಾಂಜಾ ಬೆಳೆ ಬೆಳೆಯಲು ಸಾಧ್ಯವಿದೆ. ಇದರಿಂದ ಸಂಕಷ್ಟ ಕಾಲದಲ್ಲಿ ರೈತರ ಬದುಕು ಮುನ್ನಡಲಿದೆ ಎಂದು ವ್ಯಂಗ್ಯವಾಡಿದರು. ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ಯೋಗೇಶ್, ನಂಜುಂಡಸ್ವಾಮಿ, ಹೊಸಹಳ್ಳಿ ಶಿವು, ಎಚ್.ಕೆ.ಮಂಜುನಾಥ್, ಬಿ.ಟಿ. ಶಿವಲಿಂಗಯ್ಯ, ಶಿವಣ್ಣ ಇತರರಿದ್ದರು.

ರಾಸುಗಳೊಂದಿಗೆ ರೈತರ ಪ್ರತಿಭಟನೆ



ಶ್ರೀರಂಗಪಟ್ಟಣ: ಕಾವೇರಿ ನಿರ್ವಹಣಾ ಪ್ರಾಧಿಕಾರ ಹಾಗೂ ಸುಪ್ರೀಂಕೋರ್ಟ್ ತೀರ್ಮಾನದಂತೆ ಪ್ರತಿನಿತ್ಯ 3 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಆದೇ ಶಿಸಿರುವುದನ್ನು ಖಂಡಿಸಿ ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿ ರಾಸು ಗಳೊಂದಿಗೆ ಪ್ರತಿಭಟನೆ ನಡೆಸಿದರು.

ಭೂಮಿತಾಯಿ ಹೋರಾಟ ಸಮಿತಿ ವತಿಯಿಂದ ಪಟ್ಟಣದ ಕುವೆಂಪು ವೃತ್ತದ ಬಳಿ ರಾಸುಗಳೊಂದಿಗೆ ಜಮಾಯಿಸಿದ ನೂರಾರು ರೈತರು, ಮೊದಲು ಇಲ್ಲಿನ ಜನ–ಜಾನುವಾರುಗಳಿಗೆ ಕುಡಿಯಲು ನೀರು ಕೊಡಿ ನಂತರ ತಮಿಳು ನಾಡಿಗೆ ನೀರು ಹರಿಸಿ ಎಂದು ರಾಸುಗ ಳೊಂದಿಗೆ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಸರ್ಕಾರದ ನಿರ್ಧಾರ ತಮಿಳುನಾಡಿನ ಓಲೈಕೆಯ ತಂತ್ರವಾಗಿದ್ದು, ಕಾವೇರಿ ನಿರ್ವಹಣಾ ಮಂಡಳಿ ಪ್ರಾಧಿಕಾರದ ಮೂಲಕ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರ ಅಣೆಕಟ್ಟೆಯಲ್ಲಿ ನೀರು ಬರಿದಾಗುವ ಮುನ್ನ ಎಚ್ಚೆತ್ತು ಕೊಳ್ಳಬೇಕು. ಇಲ್ಲಿನ ಮಳೆಯ ಪ್ರಮಾಣ ಹಾಗೂ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹದ ಪ್ರಮಾಣದ ಆದಾರದ ಮೇಲೆ ಕಾನೂನು ಹೋರಾಟಕ್ಕೆ ಮುಂದಾ ಗಬೇಕು ಎಂದು ಆಗ್ರಹಿಸಿದರು.


ಕಾವೇರಿ ವಿಚಾರದಲ್ಲಿ ಬಿಜೆಪಿ–ಜೆಡಿಎಸ್ ಸ್ವಾರ್ಥ ರಾಜಕಾರಣ ಬಿಡಬೇಕು: ಚಿದಂಬರ್

ಮಂಡ್ಯ,ಸೆ.27– ಕಾವೇರಿ ವಿಚಾರವಾಗಿ ರಾಜ್ಯವು ಹೋರಾಟದ ಮನೆಯಾಗಿದ್ದು, ಬಿಜೆಪಿ– ಜೆಡಿಎಸ್ ಪಕ್ಷಗಳು ಕಾವೇರಿ ವಿಚಾರವನ್ನಿಟ್ಟುಕೊಂಡು ಸ್ವಾರ್ಥ ರಾಜಕಾರಣ ಮಾಡುತ್ತಿವೆ ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಕಿಡಿಕಾರಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ತಮಿಳುನಾಡು ಸಂಸದರು ಕೇಂದ್ರದ ಮೇಲೆ ಒತ್ತಡ ತಂದು ಕಾವೇರಿ ನೀರು ಬಿಡಿಸಿಕೊಳ್ಳಲು ಯಶಸ್ವಿಯಾಗುತ್ತಿದ್ದಾರೆ. ಆದರೆ ನಮ್ಮ ರಾಜ್ಯದ 27 ಸಂಸದರು ಸಂಸತ್ತಿನಲ್ಲಿ ಇಲಿ ಮನೆಯೊಳಗೆ ಹುಲಿಯಂತೆ ವರ್ತಿಸುತ್ತಿದ್ದಾರೆ. ದೆಹಲಿಯಲ್ಲಿ ಹೋರಾಟ ಮಾಡುವುದನ್ನು ಬಿಟ್ಟು ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಮಂಡ್ಯಗೆ ಬಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದು, ಇದು ಜನರಿಗೆ ಅರ್ಥ ವಾಗುತ್ತಿದೆ ಎಂದಿದ್ದಾರೆ. ಮುತ್ಸದ್ದಿ ರಾಜಕಾರಣಿ ಹೆಚ್.ಡಿ. ದೇವೇಗೌಡರು ಕಾವೇರಿ ವಿಚಾರದಲ್ಲಿ ಈಗ ಧನಿ ಎತ್ತುತ್ತಿದ್ದಾರೆ. ಅವರು ಸಿಎಂ ಹಾಗೂ ಪ್ರಧಾನಿಯಾಗಿದ್ದಾಗ ಕಾವೇರಿ ವಿಚಾರದಲ್ಲಿ ಸಂಕಷ್ಟ ಸೂತ್ರ ರಚಿಸಬಹುದಿತ್ತು. ಆದರೆ ಇಂದು ಕಾಂಗ್ರೆಸ್ ಪಕ್ಷವನ್ನು ಟೀಕಿಸುತ್ತಾರೆ. ಅವರ ಪುತ್ರ ಹೆಚ್.ಡಿ.ಕುಮಾರಸ್ವಾಮಿ ಕಾಂಗ್ರೆಸ್ ಸರ್ಕಾರ ತಮಿಳುನಾಡು ಸಿಎಂ ಸ್ಟಾಲಿನ್ ಜೊತೆಗೆ ಶಾಮೀಲಾಗಿದೆ ಎಂದು ಟೀಕಿಸುತ್ತಾರೆ. ಕಾಂಗ್ರೆಸ್ ಹಾಗೂ ಇನ್ನಿತರ ಪಕ್ಷಗಳೊಟ್ಟಿಗೆ ರಚನೆಯಾಗಿರುವ ಇಂಡಿಯಾ ಮೈತ್ರಿ ಕೂಟ ಒಂದು ಪಕ್ಷದ ವೇದಿಕೆ ಅಲ್ಲ ಅದು 25 ಪಕ್ಷಗಳ ಒಕ್ಕೂಟ ಎಂದು ಹೇಳಿದ್ದಾರೆ.

ಮೃಗಾಲಯ ಕೋಟ್ಯಾಂತರ ರೂ. ಖರ್ಚು ಮಾಡಿ ನಿರ್ಮಿಸಿರುವ ಸಬ್ ವೇ ನಿರರ್ಥಕ

- ರಸ್ತೆ ದಾಟಲು ಪ್ರವಾಸಿಗರ ಪರದಾಟ; ರಸ್ತೆಯಲ್ಲಿ ಜನಜಂಗುಳಿ
- ಮನೆ ಮನೆ ಮುಂದೆ ವಾಹನ ನಿಲುಗಡೆಯಿಂದ ನಿವಾಸಿಗಳಿಗೆ ತೀವ್ರ ಕಿರಿಕಿರಿ
- ಪೊಲೀಸ್ ಆಯುಕ್ತರಲ್ಲಿ ಮನವಿ ಮಾಡಿದ ಮಾಜಿ ಮೇಯರ್ ಸಂದೇಶ್ ಸ್ವಾಮಿ





ಮೈಸೂರು, ಸೆ.27(ಜಿಎ)– ಮೈಸೂರು ಮೃಗಾಲಯದ ಸುತ್ತ ಮುತ್ತಲ ನಿವಾಸಿಗಳಿಗೆ ವಾಹನಗಳಿಂದ ಆಗುತ್ತಿರುವ ತೀವ್ರ ಕಿರಿಕಿರಿ ತಪ್ಪಿಸಲು ಮೃಗಾಲಯದ ಮುಂದಿನ ರಸ್ತೆಗೆ ವಿಭಜಕ ಅಳವಡಿಸುವುದರ ಜೊತೆಗೆ ಸಬ್ ವೇಯನ್ನು ಸಾರ್ವಜನಿಕ ಸೇವೆಗೆ ಮುಕ್ತಗೊಳಿಸುವಂತೆ ಪೊಲೀಸ್ ಆಯುಕ್ತರಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ. ಸುಮಾರು 3.5 ಕೋಟಿ ರೂ.ಗೂ ಅಧಿಕ ವೆಚ್ಚದಲ್ಲಿ ಮೃಗಾಲಯ ಮತ್ತು ವಾಹನ ನಿಲ್ದಾಣಕ್ಕೂ ಅಂಡರ್ ಪಾಸ್ ಸಬ್ ವೇ ನಿರ್ಮಿಸಿ ಎರಡು ವರ್ಷಗಳಾಗುತ್ತಿದ್ದರೂ ಅದನ್ನು ಸೇವೆಗೆ ಮುಕ್ತಗೊಳಿಸಿಲ್ಲ. ಜನರಿಗೆ ತೊಂದರೆ ಕೊಡುವುದಕ್ಕೊ, ವಾಹನ ಚಾಲಕರು, ಸವಾರರಿಗೆ ಕಿರುಕುಳ ನೀಡುವುದಕ್ಕೊ ಅಥವಾ ಯಾರಿಗೋ ಅನುಕೂಲ ಮಾಡುವುದಕ್ಕೊ ಮೃಗಾಲಯದ ಅಧಿಕಾರಿಗಳು ಅಂಡರ್ ಪಾಸ್ ಆರಂಭಿಸದೇ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಆದ್ದರಿಂದ ತಾವು ಮೃಗಾಲಯ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ ರಸ್ತೆ ವಿಭಜಕ ನಿರ್ಮಾಣ ಮತ್ತು ಸಬ್ ವೇ ಚಾಲನೆ ಗೊಳಿಸಬೇಕೆಂದು ಪೊಲೀಸ್ ಆಯುಕ್ತರಲ್ಲಿ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.

ಮೈಸೂರಿನ ಇಂದಿರಾ ನಗರದಲ್ಲಿ ವಸ್ತು ಪ್ರದರ್ಶನ, ಮೃಗಾಲಯ ಹಾಗೂ ಮಾಲ್ ಆಫ್ ಮೈಸೂರು ಹೊಂದಿಕೊಂಡಂತೆ ಇರುವುದರಿಂದ ಅಧಿಕ ವಾಹನ ಸಂಚಾರ ವಿದ್ದು, ಇಲ್ಲಿನ ಮನೆಗಳ ಮುಂದೆಯೇ ವಾಹನಗಳನ್ನು ನಿಲ್ಲಿಸುವವರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಇಲ್ಲಿನ ನಿವಾಸಿಗಳು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ವಾಹನಗಳನ್ನು ಮನೆಗಳ ಮುಂದೆ ನಿಲ್ಲಿಸುವಾಗ ಮತ್ತು ಹೋಗುವಾಗ ಕರ್ಕಶ ಹಾರ್ನ್‌ಗಳಿಂದ ನಿವಾಸಿಗಳಿಗೆ ತೀವ್ರ ಕಿರಿಕಿರಿ ಉಂಟಾಗಿ, ನೆಮ್ಮದಿ ಇಲ್ಲವಾಗಿದೆ. ಅದರಲ್ಲೂ ವೃದ್ಧರು ಮತ್ತು ಅನಾರೋಗ್ಯ ಪೀಡಿತರಿಗೆ ತೀವ್ರ ಅನಾನುಕೂಲವಾಗುತ್ತಿದೆ. ಆದ್ದರಿಂದ ತಾವು ಖುದ್ದು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಸೂಕ್ತ ಕ್ರಮ ವಹಿಸಬೇಕೆಂದು ಮನವಿ ಮಾಡಿದ್ದಾರೆ.

ಮೃಗಾಲಯದ ವಾಹನ ನಿಲ್ದಾಣ ಕಿರುದಾಗಿದ್ದು, ಅಲ್ಲದೆ ಆ ಭಾಗದಲ್ಲಿ ನಾನಾ ರೀತಿಯ ವಾಣಿಜ್ಯ ಮಳಿಗೆಗಳಿವೆ. ಇದರಿಂದಾಗಿ ಇಲ್ಲಿ ನಿಲುಗಡೆಗೆ ಸ್ಥಳಾವಕಾಶ ವಿಲ್ಲದೆ ಬಡಾವಣೆಯ ಮನೆಗಳ ಮುಂದೆ ವಾಹನಗಳ ದಟ್ಟಣೆ ಹೆಚ್ಚಾಗಿದೆ. ಅಲ್ಲೆ ಉಗಿಯುವುದು, ಧೂಮಪಾನ ಮಾಡುವುದು, ಜೋರಾಗಿ ಕಿರುಚುವುದು ಇಂತಹ ಕಿರಿಕಿರಿಗಳಿಂದಲೂ ನಿವಾಸಿಗಳು ಮನೆ ಖಾಲಿ ಮಾಡಿ ಬೇರೆಡೆಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮೃಗಾಲಯ ಮುಂಭಾಗದಲ್ಲಿ ಪ್ರವಾಸಿಗರು ರಸ್ತೆ ದಾಟುವ ಸಂದರ್ಭದಲ್ಲಿ ವಾಹನಗಳು ಸರಾಗವಾಗಿ ಚಲಿಸಲು ಆಗದೆ, ಸಂಚಾರ ದಟ್ಟಣೆ ಉಂಟಾಗುತ್ತದೆ ವಾಹನಗಳ ಪಾರ್ಕಿಂಗ್ ನಿಲ್ದಾಣದ ಕಡೆಗೆ ತಿರುವು ತೆಗೆದುಕೊಳ್ಳಲು ಸಮಸ್ಯೆಯಿದ್ದು, ರಸ್ತೆ ವಿಭಜಕ ನಿರ್ಮಿಸಿದರೆ ಸುಗಮ ವಾಹನ ಸಂಚಾರಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದ್ದಾರೆ.

ಒಂದನೇ ಪುಟದಿಂದ

ರೈತರ ಬಾಳಲ್ಲಿ ಕಾಂಗ್ರೆಸ್ ಸರ್ಕಾರ ಚೆಲ್ಲಾಟ

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿಗಳು ಇಂಡಿಯಾ ಕೂಟಕ್ಕೆ ಡಿಎಂಕೆ ಓಲೈಸಿಕೊಳ್ಳಲು ಇಲ್ಲಿನ ಕಾಂಗ್ರೆಸ್ ಸರ್ಕಾರ ರೈತರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದೆ. ನಮಗೆ ಕುಡಿಯಲು ನೀರಿಗೆ ತೊಂದರೆ ಇರುವ ಸಂದರ್ಭದಲ್ಲಿ ರಾಜಾರೋಷವಾಗಿ ತಮಿಳುನಾಡಿಗೆ ನೀರು ಹರಿಸಿ ಮುಂದಿನ ದಿನಗಳಲ್ಲಿ ಕಾವೇರಿ ಜಲಾನಯನ ಭಾಗದ ಜನರ ಜೀವನವನ್ನು ಬೀದಿ ಪಾಲು ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಕಾವೇರಿ ನೀರಿನ ವಿಷಯದಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವೈಫಲ್ಯ ಕಂಡಿದೆ. ನಮ್ಮ ಜನರಿಗೆ ದ್ರೋಹ ಬಗೆದು ತಮಿಳುನಾಡಿಗೆ ನೀರು ಹರಿಸುತ್ತಿದೆ.

ಸ್ಟಾಲಿನ್ ಓಲೈಕೆಗಾಗಿ ನ್ಯಾಯಾಲಯಗಳಲ್ಲಿ ಸಮರ್ಪಕ ಹೋರಾಟ ನಡೆಸಲು ಅಗತ್ಯ ದಾಖಲೆಗಳನ್ನು ಒದಗಿಸಲು ಸರ್ಕಾರ ವಿಫಲವಾಗಿದೆ. ಸಂಬಂಧಪಟ್ಟ ಪ್ರಾಧಿಕಾರಗಳ ಮುಂದೆ ನಮ್ಮ ಅಧಿಕಾರಿಗಳು ಖುದ್ದು ಹಾಜರಾಗದೆ, ವರ್ಚುವಲ್ ಮೂಲಕ ಸಭೆಗೆ ಹಾಜರಾಗುತ್ತಿರುವುದೇ ಇದಕ್ಕೆ ಸಾಕ್ಷಿ. ಇದೇ ತಮಿಳುನಾಡಿನ ಅಧಿಕಾರಿಗಳು ತಮ್ಮ ರಾಜ್ಯದ ಪರ ಯಾವ ರೀತಿ ವಕಾಲತ್ತು ವಹಿಸುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು. ರಾಜ್ಯದ ಜನರು ಬೀದಿಗಿಳಿದು ಹೋರಾಡುತ್ತಿದ್ದು, ಬಿಜೆಪಿ– ಜೆಡಿಎಸ್ ಇದಕ್ಕೆ ಎಲ್ಲ ರೀತಿಯ ಬೆಂಬಲ ಕೊಡುತ್ತದೆ ಎಂದು ಪ್ರಕಟಿಸಿದರು. ಈಗಲಾದರೂ ಇದನ್ನು ಸರಿಪಡಿಸಿ. ಇಲ್ಲವಾದರೆ ಕಾನೂನು– ಸುವ್ಯವಸ್ಥೆ ಹದಗೆಡಲಿದೆ. ಅದಕ್ಕೆ ರಾಜ್ಯ ಸರ್ಕಾರವೇ ಹೊಣೆ ಎಂದು ಎಚ್ಚರಿಸಿದರು.

ಸ್ಟಾಲಿನ್, ಸೋನಿಯಾ ಗಾಂಧಿ ಜೊತೆ ಮಾತನಾಡಲು ಸಿದ್ರಾಮಣ್ಣ, ಡಿ.ಕೆ.ಶಿವ ಕುಮಾರರಿಗೆ ಧೈರ್ಯವಿಲ್ಲ. ಅವರ ಭಯದಿಂದ ನೀರು ಬಿಡುತ್ತಿದ್ದಾರೆ ಎಂದು ದೂರಿದರು. ನೀರಿನ ಹಕ್ಕಿಗಾಗಿ, ರಾಜ್ಯ ಸರ್ಕಾರದ ನಿಲುವನ್ನು ಖಂಡಿಸಿ ಎಲ್ಲ ಜನಪ್ರತಿನಿಧಿಗಳು ಈ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದೇವೆ. ನೀರು ಉಳಿಸುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ತಿಳಿಸಿದರು.

ನಾಡಿಗೆ ದ್ರೋಹ ಬಗೆಯುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ. ನಮ್ಮ ನಾಡಿನ ರೈತರ ಕುರಿತು ಈ ಸರ್ಕಾರ ನಿರ್ಲಕ್ಷ್ಯ ತೋರಿದೆ. ಸರ್ಕಾರ ಕಾವೇರಿ ವಿಚಾರದಲ್ಲಿ ನಿರಂತರವಾಗಿ ಎಡವಿದೆ. ಇದು ಖಂಡನೀಯ ಎಂದು ತಿಳಿಸಿದರು. ಹಿಂದಿನ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್ ಮೆಟ್ಟಿಲೇರುವ ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರದ ನಮ್ಮ ತೀರ್ಮಾನದಿಂದ ಕರ್ನಾಟಕಕ್ಕೆ ಹೆಚ್ಚು ನೀರು ಲಭಿಸಿದೆ ಎಂದು ತಿಳಿಸಿದರು.

ನಾಳೆ ಕರ್ನಾಟಕ ಬಂದ್

18 ದಿನಗಳ ಕಾಲ ತಮಿಳುನಾಡಿಗೆ 3,000 ಕ್ಯೂಸೆಕ್ ನೀರು ಬಿಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ರಾಜ್ಯಕ್ಕೆ ಮತ್ತೊಮ್ಮೆ ಆದೇಶ ನೀಡಿರು ವುದರಿಂದ ಪ್ರತಿಭಟನೆಯು ಬೆಂಗಳೂರು ಮತ್ತು ಕರ್ನಾಟಕದ ಹಲವು ಭಾಗಗಳಲ್ಲಿ ಸಾಮಾನ್ಯ ಜೀವನದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಈ ಆದೇಶ ವನ್ನು ಕರ್ನಾಟಕ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಂದ್ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ವಾಟಾಳ್ ನಾಗರಾಜ್ ನೇತೃತ್ವದ ಕನ್ನಡ ಪರ ಸಂಘಟನೆಗಳು ನಗರದಾದ್ಯಂತ ವಿವಿಧ ಹೋಟೆಲ್‌ಗಳು ಮತ್ತು ಮಾಲ್‌ಗಳಿಗೆ ಭೇಟಿ ನೀಡಿ ಸೆ.29ರಂದು ಮುಚ್ಚುವಂತೆ ಮನವಿ ಮಾಡಿವೆ.

ಅಧಿಕಾರಕ್ಕೆ ನಮ್ಮನ್ನು ಬಳಸಿಕೊಂಡು ಈಗ ನಮ್ಮ ಕೈಬಿಟ್ಟಿದ್ದಾರೆ...

ಮಾಜಿ ಮೇಯರ್ ನಾರಾಯಣರ ವಿರುದ್ಧ ಮಹಿಳಾ ಪೌರ ಕಾರ್ಮಿಕರ ಆರೋಪ



ಮೈಸೂರು,ಸೆ.27(ಎಂಟಿವೈ)– ಇದುವರೆಗೆ ತಾವು ರಾಜಕೀಯವಾಗಿ ಬೆಳೆಯಲು ಪೌರಕಾರ್ಮಿಕರನ್ನು ಬಳಸಿಕೊಂಡ ಮಾಜಿ ಮೇಯರ್ ನಾರಾಯಣ ಅವರು, ಖಾಯಂ ಪೌರಕಾರ್ಮಿಕರ ನೇಮಕಾತಿ ಹೋರಾಟ ಮಾಡದೇ ನಿರ್ಲಕ್ಷಿಸಿದ್ದಾರೆ ಎಂದು ಮೈಸೂರು ನಗರಪಾಲಿಕೆ ಖಾಯಂ ಹಾಗೂ ಗುತ್ತಿಗೆ ಪೌರ ಕಾರ್ಮಿಕರ ಮಹಾಸಂಘದ ಮಹಿಳಾ ಪೌರಕಾರ್ಮಿಕರು ದೂರಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಿಳಾ ಪೌರಕಾರ್ಮಿಕರಾದ ಮಹದೇವಮ್ಮ, ಮಾಜಿ ಮೇಯರ್ ನಾರಾಯಣ ಅವರು ಈ ಹಿಂದೆ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಲು ಖಾಯಂಗೊಳಿಸುತ್ತೇನೆ ಎಂದು ಆಸೆ ತೋರಿಸಿ ತಮ್ಮ ರಾಜಕೀಯ ಸಮಾವೇಶಗಳಿಗೆ ಪೌರ ಕಾರ್ಮಿಕರನ್ನು ಬಳಸಿಕೊಂಡರು. ನಂತರ ನಮ್ಮ ಸಮಸ್ಯೆಗೆ ಸ್ಪಂದಿಸದೆ ಈಗ ಮತ್ತೆ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಲಾಬಿ ನಡೆಸುತ್ತಾ ಮತ್ತೆ ಅದೇ ಮಾತುಗಳನ್ನು ಆಡುತ್ತಿದ್ದಾರೆ ಎಂದು ದೂರಿದರು.

ಐಪಿಡಿ ಸಾಲಪ್ಪ ವರದಿ ಪ್ರಕಾರ 500 ಮಂದಿಗೆ ಒಬ್ಬ ಪೌರಕಾರ್ಮಿಕರಿರಬೇಕು. ಇತ್ತೀಚಿನ ದಿನಗಳಲ್ಲಿ ಎಲ್ಲಾ ಪೌರಕಾರ್ಮಿಕರಿಂದಲೂ ಖಾಯಂ ನೌಕರರಂತೆ ಕೆಲಸ ಮಾಡಿಸಲಾಗುತ್ತಿದೆ. ಆದರೆ, ಇಂದಿಗೂ ಗುತ್ತಿಗೆ ಪದ್ಧತಿಯಲ್ಲಿ ಸಾಕಷ್ಟು ಜನ ಕೆಲಸ ಮಾಡುತ್ತಿರುವುದಕ್ಕೆ ನಾರಾಯಣ ಅವರೇ ನೇರ ಹೊಣೆ ಎಂದು ದೂರಿದರು.

ನಗರದ ಸ್ವಚ್ಛತಾ ಕಾರ್ಯ ನಿರ್ವಹಿಸಲು ನಗರ ಪಾಲಿಕೆಗೆ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ 1,474. ಇದರಲ್ಲಿ ಪ್ರಸ್ತುತ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿರುವವರಲ್ಲಿ ಖಾಯಂ ಪೌರಕಾರ್ಮಿಕರು 532 ಮಂದಿ ಮಾತ್ರ ನೇರ ಪಾವತಿ ಕಾರ್ಮಿಕರು 818 ಮತ್ತು ಗುತ್ತಿಗೆ ಆಧಾರದ ಮೇಲೆ 753 ಪೌರ ಕಾರ್ಮಿಕರು ಸ್ವಚ್ಛತಾ ಕೆಲಸ ಮಾಡುತ್ತಿದ್ದಾರೆ ಎಂದರು.

ನಾರಾಯಣ ಅವರು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿದ್ದಾಗ ಈ ಸಮಸ್ಯೆ ಬಗ್ಗೆ ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಿಕೊಡುವಲ್ಲಿ ವಿಫಲರಾದರು. ಹೀಗಾಗಿ ಎಲ್ಲಾ ಪೌರಕಾರ್ಮಿಕರು ಜಾಗೃತರಾಗಬೇಕು. ಇಂತಹ ಸುಳ್ಳು ಆಶ್ವಾಸನೆಗೆ ಮರುಳಾಗದೆ ನೇರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಈ ಹಿಂದಿನ ಸರ್ಕಾರದ ಆದೇಶದ ಅನ್ವಯ 2ನೇ ಹಂತದ ನೇಮಕಾತಿ ಪ್ರಕ್ರಿಯೆಯಲ್ಲಿ ಮತ್ತೆ 364 ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳುವಂತೆ, ನಮ್ಮ ಕಷ್ಟ ಕಾರ್ಪಣ್ಯಕ್ಕೆ ಸ್ಪಂದಿಸುವಂತೆ ಮನವಿ ಮಾಡುವುದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಹಿಳಾ ಪೌರ ಕಾರ್ಮಿಕರಾದ ದೇವಮ್ಮ, ಕಮಲಮ್ಮ, ಗೀತಾ, ಗಂಗಮ್ಮ ಇದ್ದರು.

ಮೈಸೂರು ವಿಮಾನ ನಿಲ್ದಾಣ ಉನ್ನತೀಕರಣಕ್ಕೆ ರಾಜ್ಯ ಸರ್ಕಾರದಿಂದ 3ನೇ ಹಂತದಲ್ಲಿ 75 ಕೋಟಿ ಬಿಡುಗಡೆ

ಮೈಸೂರು, ಸೆ.27(ಪಿಎಂ)– ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣ ಮತ್ತು ರನ್‌ವೇ ವಿಸ್ತರಣೆಗೆ ಅಗತ್ಯವಿರುವ ಭೂಸ್ವಾದೀನಕ್ಕಾಗಿ ರಾಜ್ಯ ಸರ್ಕಾರ 3ನೇ ಹಂತದಲ್ಲಿ 75 ಕೋಟಿ ರೂ. ಅನುದಾನವನ್ನು ಕೆಐಎಡಿಬಿಗೆ ಬಿಡುಗಡೆ ಮಾಡಿದ್ದು, ಭೂಸ್ವಾಧೀನ ಪ್ರಕ್ರಿಯೆಯನ್ನು ತುರ್ತಾಗಿ ಕೈಗೊಳ್ಳಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ಕಾಮಗಾರಿಯನ್ನು ತ್ವರಿತವಾಗಿ ಪ್ರಾರಂಭಿಸುವ ಸಲುವಾಗಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕೆಂಬ ತಮ್ಮ ಕೋರಿಕೆ ಮೇರೆಗೆ 3ನೇ ಹಂತದ ಅನುದಾನ ಬಿಡುಗಡೆಯಾಗಿದೆ ಎಂದು ಅವರು ತಿಳಿಸಿದ್ದಾರೆ. ಸದರಿ ಉದ್ದೇಶಕ್ಕಾಗಿ ಈ ಹಿಂದೆಯೇ ರಾಜ್ಯ ಸರ್ಕಾರದಿಂದ 319,13,90,625 ರೂ.ಗಳು ಮಾಂಜೂರಾಗಿತ್ತು ಅದರಂತೆ ಈಗಾಗಲೇ 1ನೇ ಹಂತದಲ್ಲಿ 50 ಕೋಟಿ ಹಾಗೂ 2ನೇ ಹಂತದಲ್ಲಿ 100 ಕೋಟಿ ಕೆಐಎಡಿಬಿಗೆ ಬಿಡುಗಡೆಯಾಗಿತ್ತು. ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

'ಯೂನಿಟಿ ಮಾಲ್' ನಿರ್ಮಾಣ ಕುರಿತ ಸಭೆ: ಮೈಸೂರು ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಕೇಂದ್ರ ಸರ್ಕಾರದ 193 ಕೋಟಿ ಅನುದಾನದಲ್ಲಿ 'ಯೂನಿಟಿ ಮಾಲ್' ನಿರ್ಮಿಸುವ ಹಾಗೂ ಕೇಂದ್ರ ಸರ್ಕಾರದ 'ಸ್ವದೇಶಿ ದರ್ಶನ್' ಯೋಜನೆಯಡಿ 80 ಕೋಟಿ ರೂ. ಅನುದಾನದಲ್ಲಿ ವಸ್ತು ಪ್ರದರ್ಶನ ಮೈದಾನದಲ್ಲಿ ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸುವ ಸಂಬಂಧ ಬುಧವಾರ ಸಂಸದ ಪ್ರತಾಪ್ ಸಿಂಹ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.



ಸದರಿ ಮೈದಾನದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಕಚೇರಿಯಲ್ಲಿ ಸಂಸದರು ಸಭೆ ನಡೆಸಿದರು. 'ಒಂದು ಜಿಲ್ಲೆ ಒಂದು ಉತ್ಪನ್ನ' ಕಾರ್ಯಕ್ರಮದಡಿ ವಿವಿಧ ಕುಶಲಕರ್ಮಿಗಳು ಹಾಗೂ ದೇಶಾದ್ಯಂತ ಜಿಐ ಟ್ಯಾಗ್ ಪಡೆದಿರುವ ಉತ್ಪನ್ನಗಳ ಮಾರಾಟಕ್ಕಾಗಿ ಇಲ್ಲಿ 77 ಮಳಿಗೆಗಳನ್ನು ಒಂದೇ ಸೂರಿನಡಿ ನಿರ್ಮಿಸಲು ಯೋಜನೆ ರೂಪಿಸಲಾಗಿದೆ.

ಅಲ್ಲದೆ, ಕೇಂದ್ರ ಸರ್ಕಾರದ 'ಸ್ವದೇಶಿ ದರ್ಶನ್' ಯೋಜನೆಯಡಿ 80 ಕೋಟಿ ರೂ. ಅನುದಾನದಡಿ ವಸ್ತು ಪ್ರದರ್ಶನ ಮೈದಾನದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿರ್ದೇಶಕ ವಿಜಯ ಮಹಾಂತೇಶ್, ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಂಟಿ ನಿರ್ದೇಶಕ ದಿನೇಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು ಎಂದು ಸಂಸದರ ಕಚೇರಿ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ

ಗುರುವಾರ 28 ಸೆಪ್ಟೆಂಬರ್ 2023

ಅ.8ಕ್ಕೆ ಎಂಆರ್‌ಸಿ ವಾರ್ಷಿಕ ಸಭೆ

ಮೈಸೂರು, ಸೆ.27– ಮೈಸೂರು ರೇಸ್ ಕ್ಲಬ್ 55ನೇ ವಾರ್ಷಿಕ ಮಹಾಸಭೆಯನ್ನು ಸೆ.29 (ಶುಕ್ರವಾರ)ರಂದು ಕರೆದಿದ್ದು, ಅಂದು ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಅ.8ಕ್ಕೆ ಮುಂದೂಡಲಾಗಿದೆ ಎಂದು ಎಂಆರ್‌ಸಿ ಪ್ರಕಟಣೆ ತಿಳಿಸಿದೆ.

ಅಂತಾರಾಷ್ಟ್ರೀಯ ಭರತನಾಟ್ಯ ಪ್ರದರ್ಶನದಲ್ಲಿ ಮೈಸೂರಿನ ಪ್ರತಿಭೆ



ಮೈಸೂರು, ಸೆ. 27– ಇತ್ತೀಚೆಗೆ ಇಂಡೋ-ಥಾಯ್ ಸಾಂಸ್ಕೃತಿಕ ವಿಶ್ವಸಂಸ್ಕೃತಿ ಉತ್ಸವದ ಅಂಗವಾಗಿ ನಡೆದ ಅಂತಾರಾಷ್ಟ್ರೀಯ ಭರತನಾಟ್ಯ ಪ್ರದರ್ಶನದಲ್ಲಿ ಮೈಸೂರಿನ ಚಾಮುಂಡಿಪುರಂನ ಸೌಮ್ಯ ನೃತ್ಯ ಶಾಲೆಯ ವಿದ್ಯಾರ್ಥಿ ಎಂ.ಪಿ. ಮಹಾಲಕ್ಷ್ಮಿ ಪ್ರದರ್ಶನ ನೀಡಿ ಎಲ್ಲರ ಗಮನ ಸೆಳೆದರು. ಮಹಾಲಕ್ಷ್ಮಿ ಅವರು ಮೂಲತಃ ಕೆ. ಸಿ.ಲೇಔಟ್‌ನ ಪ್ರಶಾಂತ್ ಹಾಗೂ ಪರಿಮಳ ದಂಪತಿ ಪುತ್ರಿ ಬಾಲ್ಯದಿಂದಲೂ ಭರತನಾಟ್ಯದಲ್ಲಿ ಆಸಕ್ತಿಯಿದ್ದು, ಚಾಮುಂಡಿಪುರಂನಲ್ಲಿರುವ ಸೌಮ್ಯ ನೃತ್ಯ ಶಾಲೆಯಲ್ಲಿ ಸತತ 10 ವರ್ಷಗಳಿಂದ ನೃತ್ಯಾಭ್ಯಾಸ ಹಾಗೂ ಸಂಗೀತಾಭ್ಯಾಸವನ್ನು ಮಾಡುತ್ತಿದ್ದಾರೆ. ಮೈಸೂರಿನ ಅರಿವು ಶಾಲೆಯ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದಾರೆ. ಥೈಲ್ಯಾಂಡ್‌ನ ಭರತನಾಟ್ಯ ಅಸೋಸಿಯೇಶನ್ ವತಿಯಿಂದ ಸನ್ಮಾನಿಸಿದ್ದಾರೆ.

ದಕ್ಷ ಪದವಿಪೂರ್ವ ಕಾಲೇಜಿಗೆ ಬಹುಮಾನ



ಮೈಸೂರು, ಸೆ. 27– ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ ಕಾಲೇಜು) ಹಾಗೂ ಮೈಸೂರಿನ ದಕ್ಷ ಪದವಿ ಪೂರ್ವ ಕಾಲೇಜುಗಳ ಸಂಯುಕ್ತ ಆಶ್ರಯದಲ್ಲಿ ದಕ್ಷ ಪದವಿ ಪೂರ್ವ ಕಾಲೇಜಿನ ಮೈದಾನದಲ್ಲಿ ತಾಲೂಕು ಮಟ್ಟದ ಬಾಲಕಿಯರ ಥ್ರೋಬಾಲ್ ಹಾಗೂ ವಾಲಿಬಾಲ್ ಪಂದ್ಯಾವಳಿಗಳು ಜರುಗಿದವು. ದಕ್ಷ ಕಾಲೇಜಿನ ಅಧ್ಯಕ್ಷ ಜಯಚಂದ್ರ ಪಿ.ರಾಜು ಪಂದ್ಯಾವಳಿ ಉದ್ಘಾಟಿಸಿ ಕ್ರೀಡಾಪಟುಗಳಿಗೆ ಶುಭ ಹಾರೈಸಿದರು. ಈ ವೇಳೆ ದಕ್ಷ ಪಿಯು ಕಾಲೇಜಿನ ಪ್ರಾಂಶುಪಾಲ ಮೋಹನ್, ದಕ್ಷ ಯುಜಿ ಕಾಲೇಜಿನ ಪ್ರಾಂಶುಪಾಲರಾದ ಡಾ. ರಮ್ಯಾ ಆರ್, ದಕ್ಷ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಶಶಿರಾಜ್ ಹಾಗೂ ಇತರೆ ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕರು ಭಾಗವಹಿಸಿದ್ದರು.

ಪಂದ್ಯಾವಳಿಯಲ್ಲಿ ತಾಲೂಕಿನ 46 ಕಾಲೇಜುಗಳ ಥ್ರೋಬಾಲ್ ತಂಡಗಳು ಹಾಗೂ 18 ವಾಲಿಬಾಲ್ ತಂಡಗಳು ಭಾಗವಹಿಸಿದ್ದವು. ವಾಲಿಬಾಲ್‌ನಲ್ಲಿ ಟೆರಿಷಿಯನ್ ಕಾಲೇಜು ತಂಡ, ಥ್ರೋಬಾಲ್‌ನಲ್ಲಿ ಜೆಎಸ್‌ಎಸ್ ಸರಸ್ವತಿಪುರಂ ಕಾಲೇಜು ತಂಡಗಳು ಚಾಂಪಿಯನ್ ಆಗಿ ಹೊರಹೊಮ್ಮಿದವು.

ವಾಲಿಬಾಲ್: ಟೆರಿಷಿಯನ್ ಪದವಿ ಪೂರ್ವ ಕಾಲೇಜು ತಂಡ (ಪ್ರ), ವಿಜಯ ವಿಠಲ ಪದವಿ ಪೂರ್ವ ಕಾಲೇಜು ತಂಡ (ದ್ವಿ).

ಥ್ರೋಬಾಲ್: ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ತಂಡ (ಪ್ರ), ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜು ತಂಡ (ದ್ವಿ). ಕಾಲೇಜು ಆವರಣದಲ್ಲಿ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ದಕ್ಷ ಕಾಲೇಜಿನ ಅಧ್ಯಕ್ಷ ಜಯಚಂದ್ರ ರಾಜು ಪಿ. ಅವರು ವಿಜೇತ ತಂಡಗಳ ಕ್ರೀಡಾಪಟುಗಳಿಗೆ ಟ್ರೋಫಿ, ಪದಕ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು.

ಪರಿಸರ ಪ್ರವಾಸೋದ್ಯಮ ಪಾತ್ರ ಪ್ರಮುಖ



ಮೈಸೂರು, ಸೆ. 27– ಯುವ ಜನತೆಗೆ ಪರಿಸರದ ಕುರಿತು ಅರಿವು ಮೂಡಿಸುವಲ್ಲಿ ಪರಿಸರ ಪ್ರವಾಸೋದ್ಯಮದ ಕೊಡುಗೆ ಮಹತ್ವದ್ದಾಗಿದೆ ಎಂದು ಕಾಂಗ್ರೆಸ್ ಮುಖಂಡ ಶುಶ್ರುತ್‌ಗೌಡ ಅಭಿಪ್ರಾಯಪಟ್ಟರು.

ಕೃಷ್ಣರಾಜ ಯುವ ಬಳಗದವರು ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ, ಮೃಗಾಲಯದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರವಾಸಿಗರಿಗೆ ಮೈಸೂರು ಪಾಕ್ ಹಾಗೂ ಗುಲಾಬಿ ವಿತರಿಸಿ ಶುಭ ಹಾರೈಸಿದ ನಂತರ ಮಾತನಾಡಿದ ಅವರು, ಪ್ರವಾಸ ಮಾಡುವುದರಿಂದ ದೇಹ ಮತ್ತು ಮನಸ್ಸಿಗೆ ನವೋಲ್ಲಾಸ ಹೆಚ್ಚುತ್ತದೆ. ಪ್ರವಾಸೋದ್ಯಮ ಇಂದು ಬೃಹತ್ ಉದ್ಯಮವಾಗಿ ಬೆಳೆದಿದ್ದು, ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯೂ ದಿನೇ ದಿನೇ ಹೆಚ್ಚಾಗುತ್ತಿದೆ. ಪ್ರವಾಸ ಬದುಕಿನ ಜಂಜಾಟಗಳ ನಡುವೆ ತುಸು ವಿರಾಮವಾಗಿಸಲು ಮನಸು ಮಾನಸಿಕವಾಗಿ ಸಜ್ಜಾಗುತ್ತದೆ ಎಂದರು. ದೇಶ ಸುತ್ತು ಕೋಶ ಓದು ಮಾತಿನಂತೆ ಪ್ರವಾಸ ಮಾಡುವುದರಿಂದ ಜ್ಞಾನ ವೃದ್ಧಿಯಾಗುತ್ತದೆ, ವಿಶಾಲವಾಗಿ ಯೋಚಿಸುವ ದೃಷ್ಟಿಕೋನ ಬೆಳೆಯುತ್ತದೆ ಎಂದು ಹೇಳಿದರು.

ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಜಿ ರಾಘವೇಂದ್ರ, ಕೃಷ್ಣರಾಜ ಯುವ ಬಳಗದ ಅಧ್ಯಕ್ಷ ನವೀನ್ ಕೆಂಪಿ, ಮಹದೇವ, ವರುಣಮಹದೇವ್ರು, ರವಿಚಂದ್ರ ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಚುಟುಕು ಸಾಹಿತ್ಯ ಪರಿಷತ್ತಿನಿಂದ ಕವಿಗೋಷ್ಠಿ



ಮೈಸೂರು, ಸೆ. 27–ಮೈಸೂರಿನ ಅಭಿರುಚಿ ಬಳಗ, ಎನ್.ವಿ. ರಮೇಶ್ ಕಲಾ ಬಳಗ, ಆಸಕ್ತಿ ಪ್ರಕಾಶನ ಹಾಗೂ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗದ ವತಿಯಿಂದ ಕವಿಗೋಷ್ಠಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕನ್ನಡ ಹಾಗೂ ಇಂಗ್ಲೀಷ್ ಭಾಷೆಯ ಹಿರಿಯ ಕವಿ ಇಂದಿರಾ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕವನವನ್ನು ಬರೆಯುವ ಕವಿಗಳು ಆಸಕ್ತ ಪ್ರೇಕ್ಷಕರೆದುರು ಚೆನ್ನಾಗಿ ಪ್ರಸ್ತುತಪಡಿಸಿದಾಗ ಆ ಕವಿತೆಗೆ ವಿಶೇಷ ಅರ್ಥ ಬರುತ್ತದೆ ಎಂದರು.

ಅಭಿರುಚಿ ಬಳಗದ ಅಧ್ಯಕ್ಷ ಎನ್.ವಿ. ರಮೇಶ್ ಮಾತನಾಡಿ, ತಮ್ಮ ಸಂಸ್ಥೆಯಿಂದ ಇದುವರೆಗೆ 117 ಮನೆ ಮನೆ ಕವಿಗೋಷ್ಠಿ ಕಾರ್ಯಕ್ರಮಗಳ ಮೂಲಕ ಹೊಸ ಹಾಗೂ ಯುವಕವಿಗಳಿಂದ ಕವನ ವಾಚನ, ಉಪನ್ಯಾಸ, ಪುಸ್ತಕ ಬಿಡುಗಡೆ ಮಾಡುತ್ತಾ ಬಂದಿದ್ದು, 26ರಂದು ಹವ್ಯಾಸಿ ಕಲಾವಿದರಿಂದ ನಾಟಕ ಮಾಡಿಸಿದ್ದೇವೆ. ಬರುವ ದಿನಗಳಲ್ಲಿ ಆಸಕ್ತ ಯುವಜನರಿಗೆ ಕಥೆ–ಕವನ–ರೂಪಕ–ನಾಟಕ ಇವುಗಳ ರಚನೆ ಹಾಗೂ ಪ್ರದರ್ಶನಗಳ ಬಗ್ಗೆ ಕಾರ್ಯಾಗಾರಗಳ ಮೂಲಕ ತರಬೇತಿ ಕೊಡುವ ಉದ್ದೇಶವಿದೆ ಎಂದರು.

ಲತಾಮೋಹನ್ ಅವರ ನಗೆಚಟಾಕಿ ನಂತರ ನಡೆದ ಕವಿಗೋಷ್ಠಿಯಲ್ಲಿ ಹಿರಿಯ ಕವಿಗಳಾದ ಗಜಾನನ ಹೆಗಡೆ, ಪದ್ಮಿನಿ ಹೆಗಡೆ, ಪ್ರಭಾ ಶಾಸ್ತ್ರಿ ಹಾಗೂ 12 ಕಿರಿಯ ಕವಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ರಾಜೇಂದ್ರ ಪ್ರಸಾದ್, ಪುಟ್ಟಸ್ವಾಮಿ ಹಾಗೂ ಸಾಂಬಮೂರ್ತಿ ಜಾನಪದ ಹಾಗೂ ಭಕ್ತಿಗೀತೆಗಳನ್ನು ಹಾಡಿದರು. ವೇದಿಕೆಯಲ್ಲಿ ಸುಶೀಲಾ, ಉಮಾ ಉಪಸ್ಥಿತರಿದ್ದರು. ಡಾ.ಪರಮೇಶ್ ಉತ್ತನಹಳ್ಳಿ ಕಾರ್ಯಕ್ರಮದ ನಿರೂಪಣೆ ಮಾಡಿದರು.

ದುರ್ಬಲ ಗುಲ್‌ಮೊಹರ್ ಮರ ತೆರವುಗೊಳಿಸಿ ಮಹಾಗನಿ ಸಸಿಗಳನ್ನು ನೆಟ್ಟ ನಗರಪಾಲಿಕೆ

ಅಪಾಯ ತಪ್ಪಿಸಲು ಕ್ರಮ ಎಂದ ನಗರಪಾಲಿಕೆ, ಸಾರ್ವಜನಿಕರಿಂದ ಮೆಚ್ಚುಗೆ

ಮೈಸೂರು, ಸೆ.27(ಜಿಎ)–ದುರ್ಬಲವಾಗಿದ್ದ ಗುಲ್‌ಮೊಹರ್ ಮರಗಳನ್ನು ತೆರವುಗೊಳಿಸಿದ್ದ ಮೈಸೂರು ಮಹಾನಗರ ಪಾಲಿಕೆ ಅದೇ ಸ್ಥಳದಲ್ಲಿ ಮೂರು ಪಟ್ಟು ಸಸಿಗಳನ್ನು ನೆಡುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಇತ್ತೀಚೆಗೆ ಮೈಸೂರು ನಗರ ಪಾಲಿಕೆಯ ತೋಟಗಾರಿಕಾ ಇಲಾಖೆಯು ನಗರದ ಚೆಲುವಾಂಬ ಪಾರ್ಕ್ ಬಳಿಯ ವಿವೇಕಾನಂದ ರಸ್ತೆಯಲ್ಲಿರುವ ಆರು ಗುಲ್‌ಮೊಹರ್ ಮರಗಳನ್ನು ದುರ್ಬಲಗೊಂಡಿದ್ದರಿಂದ ಕತ್ತರಿಸಿದ್ದರು. ಹತ್ತು ದಿನಗಳ ನಂತರ ಹಸಿರು ಹೊದಿಕೆಯನ್ನು ಮರುಪೂರಣಗೊಳಿಸುವತ್ತ ಸಕಾರಾತ್ಮಕ ಹೆಜ್ಜೆ ಇಡಲಾಗಿದ್ದು, ಅದರಂತೆ ಬುಧವಾರ ಬೆಳಗ್ಗೆ ಅದೇ ಸ್ಥಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಹಾಗನಿ ಜಾತಿಯ 18 ಸಸಿಗಳನ್ನು ನೆಡಲಾಯಿತು.

ಗುಲ್‌ಮೊಹರ್ ಮರಗಳು ಭಾರಿ ಮಳೆ ಮತ್ತು ಗಾಳಿಗೆ ಬುಡ ಸಮೇತ ಬೀಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಈ ಹಿಂದೆ ಮೈಸೂರು ನಗರದಲ್ಲಿ ಸಸಿಗಳನ್ನು ನೆಡಲು ಮತ್ತು ಹಸಿರನ್ನು ಹೆಚ್ಚಿಸಲು ಸಾಕಷ್ಟು ಆಸಕ್ತಿ ತೋರಿಸದೆ ಮರ ಕಡಿಯಲು ಮುಂದಾಗಿದ್ದಕ್ಕಾಗಿ ಮೈಸೂರು ನಗರ ಪಾಲಿಕೆ ಸಾರ್ವಜನಿಕ ಟೀಕೆಗಳನ್ನು ಎದುರಿಸಿತ್ತು. ಇದೀಗ ಮಹಾಗನಿ ಸಸಿಗಳನ್ನು ನೆಡಲಾಗಿದ್ದು, ಇದು ನಗರದ ಹಸಿರನ್ನು ಪುನರುಜ್ಜೀವನಗೊಳಿಸುವ ಬದ್ಧತೆಯನ್ನು ಪ್ರತಿನಿಧಿಸುತ್ತದೆ ಮತ್ತು ಮರಗಳನ್ನು ಕಡಿಯುವ ಬಗ್ಗೆ ಕಾಳಜಿಯನ್ನು ನಿವಾರಿಸುತ್ತದೆ. ಪಾಲಿಕೆ ಆಯುಕ್ತ ಆಶಾದ್-ಉರ್-ರಹಮಾನ್ ಷರೀಫ್ ಅವರು ಅರಣ್ಯ ಇಲಾಖೆಯ ಅನುಮತಿ ಪಡೆದು ದುರ್ಬಲಗೊಂಡ ಗುಲ್‌ಮೊಹರ್ ಮರಗಳನ್ನು ತೆಗೆದುಹಾಕಲಾಯಿತು ಎಂದು ತಿಳಿಸಿದ್ದರು.

ಹವಾಮಾನ ಪರಿಸ್ಥಿತಿಗಳಲ್ಲಿ ದುರ್ಬಲವಾದ ಬೇರುಗಳು ಅಪಾಯವನ್ನುಂಟುಮಾಡುವ ಸಂದರ್ಭಗಳಲ್ಲಿ ಮರಗಳನ್ನು ಕತ್ತರಿಸುವುದಕ್ಕೆ ಆದ್ಯತೆ ನೀಡಲಾಗುತ್ತದೆ ಎಂದ ಅವರು, ಪಾಲಿಕೆ ವಿಧಾನವೆಂದರೆ ನೆಡಲಾದ ಸಸಿಗಳ ಸಂಖ್ಯೆಯು ತೆಗೆದ ಮರಗಳ ಸಂಖ್ಯೆಯನ್ನು ಮೀರಿದೆ ಎಂದು ಖಚಿತಪಡಿಸಿಕೊಳ್ಳುವುದು, ಇದು ಹಸಿರು ಮತ್ತು ಹೆಚ್ಚು ಸುಸ್ಥಿರ ನಗರ ಪರಿಸರಕ್ಕೆ ಕೊಡುಗೆ ನೀಡುತ್ತದೆ ಎಂದರು. ಈ ವೇಳೆ ಪಾಲಿಕೆ ಸದಸ್ಯ ರವೀಂದ್ರ, ಯಾದವಗಿರಿ ನಿವಾಸಿಗಳ ಸಂಘದ ಸಂಚಾಲಕ ಎಸ್.ಕೆ. ದಿನೇಶ್, ಸಂಘದ ಅಧ್ಯಕ್ಷ ಕಿರಣ್ ಬೋಳಾರ್, ಪರಿಸರ ಹೋರಾಟಗಾರ್ತಿ ಬಾನು ಮೋಹನ್, ಎಂಜಿಪಿ ಭಾಮಿ ವಿ.ಶೆಣೈ ಮತ್ತಿತರರು ಉಪಸ್ಥಿತರಿದ್ದರು.



ರಾಮಕೃಷ್ಣ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಶ್ರಮದಾನ



ಮೈಸೂರು, ಸೆ. 27– ಸದಾ ಸೇವಾ ಕಾರ್ಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಮೈಸೂರಿನ ಶ್ರೀ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (RIMSE)ಯಲ್ಲಿ ಶ್ರಮದಾನ ಸೇವೆ ನಡೆಯಿತು.

RIMSE ಸಂಸ್ಥೆಯ ಮುಖ್ಯಸ್ಥರಾದ ಸ್ವಾಮಿ ಮಹಾಮೇಧಾನಂದಜೀ ಉಪಸ್ಥಿತಿಯಲ್ಲಿ ಶ್ರೀ ವೆಂಕಟಾಚಲ ಅವಧೂತ ಗುರು ಮಹಾರಾಜರ ಆಶೀರ್ವಾದದೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಮೊದಲಿಗೆ ಬೇಸಿಕ್ ಯೋಗ ಕಾರ್ಯಕ್ರಮ ನಡೆಯಿತು. ನಂತರ ಶ್ರಮದಾನ ಆರಂಭಗೊಂಡಿತು. ಆಶ್ರಮದ ಆವರಣದಲ್ಲಿ ಬೆಳೆದಿದ್ದ ಗಿಡ–ಗಂಟಿಗಳನ್ನು ತೆಗೆದು, ಗಿಡಗಳಿಗೆ ಪಾತಿ ಮಾಡಿ ನೀರು ಹಾಕಲಾಯಿತು. ನಂತರ ಇಡೀ ಆವರಣವನ್ನು ಸ್ವಚ್ಛಗೊಳಿಸುವ ಮೂಲಕ ಶ್ರಮದಾನ ಮಾಡಲಾಯಿತು. ಗುರುಗಳು ಮತ್ತು ಶ್ರೀಗಳು ಪ್ರವಚನ ನೀಡಿ ಸ್ವಚ್ಛತಾ ಕಾರ್ಯಕ್ರಮದ ಬಗ್ಗೆ ತಿಳಿಸಿದರು. ಅರ್ಜುನ ಅವಧೂತರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ದೇಶಭಕ್ತ ಭಗತ್‌ಸಿಂಗ್‌ರ 116ನೇ ಜಯಂತ್ಯುತ್ಸವ: ಇಂದು ಜೈ ಹಿಂದ್ ಕಾರ್ಯಕ್ರಮ

ಮೈಸೂರು, ಸೆ. 27– ಯುವ ಭಾರತ್ ಸಂಘಟನೆ ವತಿಯಿಂದ ಕ್ರಾಂತಿಕಾರಿ ಮಹಾನ್ ದೇಶಭಕ್ತ ಭಗತ್‌ಸಿಂಗ್ 116ನೇ ಜಯಂತ್ಯುತ್ಸವ ಅಂಗವಾಗಿ ಜೈ ಹಿಂದ್ ಕಾರ್ಯಕ್ರಮವನ್ನು ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ನಾಳೆ (ಸೆ.28) ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಯುವ ಭಾರತ್ ಸಂಘಟನೆಯ ಸಂಚಾಲಕ ಶರತ್ ಭಂಡಾರಿ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್. ಶ್ರೀವತ್ಸ, ಮೇಯರ್ ಶಿವಕುಮಾರ್, ಮಾಜಿ ಶಾಸಕ ಎಲ್.ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ನಗರ ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ನಗರ ಬಿಜೆಪಿ ಹಿಂದುಳಿದ ವರ್ಗದ ಮೋರ್ಚಾದ ಅಧ್ಯಕ್ಷ ಜೋಗಿ ಮಂಜು, ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾನಂದೀಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ ಹಾಗೂ ಇನ್ನಿತರರು ಉಪಸ್ಥಿತರಿರುವರು.

ಮಕ್ಕಳಿಗೆ ನೇತ್ರ ತಪಾಸಣಾ ಶಿಬಿರ

ಮೈಸೂರು, ಸೆ. 27–ಕಣ್ಣಿನ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಮಕ್ಕಳ ಕಲಿಕಾ ಫಲಿತಾಂಶಗಳನ್ನು ಸುಧಾರಿಸುವ ಉದ್ದೇಶದಿಂದ ಕರ್ನಾಟಕದಲ್ಲಿ 14 ವರ್ಷದ ಒಳಗಿನ ಮಕ್ಕಳಿಗೆ ನೇತ್ರ ತಪಾಸಣೆ ಶಿಬಿರ ಹಮ್ಮಿಕೊಳ್ಳುವುದಾಗಿ ಟೈಟನ್ ಐ+ ತಿಳಿಸಿದೆ.

ರಾಜ್ಯದ ಬೆಂಗಳೂರು ಮತ್ತು ಮಂಗಳೂರು ನಗರಗಳ 500ಕ್ಕೂ ಹೆಚ್ಚು ವಿದ್ಯಾರ್ಥಿಗಳ ನೇತ್ರ ತಪಾಸಣೆ ನಡೆಸಲು ಕಂಪನಿಯು ನಿರ್ಧರಿಸಿದೆ. ಕರ್ನಾಟಕ ನೇತ್ರ ತಪಾಸಣೆ ಕಾರ್ಯಕ್ರಮವು ಅಖಿಲ ಭಾರತ ಕಣ್ಣಿನ ತಪಾಸಣೆ ಅಭಿಯಾನದ ಭಾಗವಾಗಿದ್ದು, ಇದು ದೇಶದ 300ಕ್ಕೂ ಹೆಚ್ಚು ನಗರಗಳಲ್ಲಿನ 11,000ಕ್ಕೂ ಹೆಚ್ಚು ಶಾಲೆಗಳನ್ನು ತಲುಪುವ ಗುರಿ ಹೊಂದಿದೆ.

ಮಕ್ಕಳಲ್ಲಿ ಸಮೀಪದೃಷ್ಟಿ ಸಮಸ್ಯೆಯು ಅದರಲ್ಲೂ ವಿಶೇಷವಾಗಿ ಕೋವಿಡ್–19 ನಂತರದ ದಿನಗಳಲ್ಲಿ ಕಂಪ್ಯೂಟರ್ ಮತ್ತು ಮೊಬೈಲ್ ಬಳಕೆ ಹೆಚ್ಚಳದ ಪರಿಣಾಮವಾಗಿ ಅಧಿಕ ಪ್ರಮಾಣದಲ್ಲಿ ಕಂಡುಬರುತ್ತಿದೆ. ಚಿಣ್ಣರಲ್ಲಿ ಕಂಡುಬರುವ ಸಮೀಪದೃಷ್ಟಿ ಸಮಸ್ಯೆಯನ್ನು ಆರಂಭದಲ್ಲಿಯೇ ಪತ್ತೆಹಚ್ಚುವುದು ಕಂಪನಿಯ ಉದ್ದೇಶವಾಗಿದೆ.

ಇದರ ಜೊತೆಗೆ, ಟೈಟನ್ ಐಕೇರ್ ವಿಭಾಗವು 14 ವರ್ಷದ ಒಳಗಿನ ಮಕ್ಕಳಿಗಾಗಿ 'ಟೈಟನ್ ಐ+ ಡ್ರಾಷ್ ಸ್ಪರ್ಧೆ 2023' ಸಹ ಪ್ರಾರಂಭಿಸಿದೆ. ಈ ಸ್ಪರ್ಧೆಯಲ್ಲಿ ಮಕ್ಕಳು ಚಿತ್ರಕಲೆ, ಗಾಯನ, ನೃತ್ಯ, ಇಂದ್ರಜಾಲ ಮುಂತಾದ ಕ್ಷೇತ್ರಗಳಲ್ಲಿನ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶವಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು 1,00,000 ರೂ. ಮೌಲ್ಯದ ಅದ್ಭುತ ಬಹುಮಾನಗಳನ್ನು ಗೆಲ್ಲಬಹುದು. ಸ್ಪರ್ಧೆಯು ಸೆ. 24ರಂದು ಪ್ರಾರಂಭವಾಗಿದ್ದು, ಅ. 15 ರವರೆಗೆ ನಡೆಯಲಿದೆ.

ಮೈಸೂರು ನಾಡಹಬ್ಬ ದಸರಾ ಪ್ರಯುಕ್ತ ಸಾಂಸ್ಕೃತಿಕ ಉತ್ಸವ

ಮೈಸೂರು, ಸೆ. 27– ಮೈಸೂರಿನ ವಿಶ್ವಚೇತನ ಬಳಗದ ವತಿಯಿಂದ ವಿಶ್ವವಿಖ್ಯಾತ ಮೈಸೂರು ದಸರಾ ಪ್ರಯುಕ್ತ ದಸರಾ ಕವಿಗೋಷ್ಠಿಯನ್ನು ಆಯೋಜಿಸಲಾಗಿದೆ. ಇದರ ಜೊತೆಗೆ ಗಾಯನ ತಂಡಗಳು, ಪ್ರಶಸ್ತಿ ಪ್ರದಾನ, ನೃತ್ಯ, ಭರತನಾಟ್ಯ, ಕಿರುನಾಟಕ, ಹಾಸ್ಯ ಇತರೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಬಹುದಾಗಿದೆ.

ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ 9513807425 ಸಂಪರ್ಕಿಸಬಹುದು.

ಸೆ.30ರಿಂದ ರಾಷ್ಟ್ರೀಯ ಜ್ಯೋತಿಷ್ಯ, ಹಸ್ತ ಸಾಮುದ್ರಿಕ ವಿಚಾರ ಸಂಕಿರಣ

ಮೈಸೂರು, ಸೆ. 27– ಮೈಸೂರಿನ ದಿವ್ಯಜ್ಯೋತಿ ಕಾಲೇಜ್ ಆಫ್ ಅಸ್ಟ್ರಾಲಜಿ ವತಿಯಿಂದ ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಶಿಕ್ಷಕರ ಭವನದಲ್ಲಿ 16ನೇ ರಾಷ್ಟ್ರೀಯ ಜ್ಯೋತಿಷ್ಯ ಶಾಸ್ತ್ರ ಹಾಗೂ ಹಸ್ತ ಸಾಮುದ್ರಿಕೆ ಕುರಿತು ಸೆ.30 ರಿಂದ ಅಕ್ಟೋಬರ್ 2ರವರೆಗೆ ರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಬೆಂಗಳೂರು ಬೇಲಿ ಮಠ ಮಹಾಸಂಸ್ಥಾನದ ಜಗದ್ಗುರು ಶಿವರುದ್ರ ಮಹಾಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಲಿದ್ದಾರೆ. ಸುತ್ತೂರು ಮಠದ ಪಂಚಾಂಗ ಕರ್ತೃ ಸಿದ್ಧಾಂತಿ ಪುಟ್ಟಹೊನ್ನಯ್ಯರವರು ಜ್ಯೋತಿಷ್ಯ ಮತ್ತು ಅದರ ಅಗತ್ಯತೆ ಬಗ್ಗೆ ಮಾತನಾಡಲಿದ್ದಾರೆ. ಆರ್.ವಿ.ಕಾಲೇಜಿನ ನಿರ್ದೇಶಕರಾದ ಡಾ.ಟಿ.ವಿ.ರಾಜು, ಡಾ. ಪ್ರತಾಪ್‌ಚಂದ್ರ, ಡಾ.ಜಿ.ಹೆಚ್.ಇವಮ್ರಾಪುರ್, ಡಾ.ಗಣೇಶಹೆಗ್ಡೆ, ಪ್ರೊ.ಎಸ್.ಅಹಲ್ಯ, ಆಸ್ಥಾನ ವಿದ್ವಾನ್ ಡಾ.ಯೋಗನರಸಿಂಹ, ಪ್ರೊ.ಹೆಚ್.ಚಂದ್ರಶೇಖರ್, ಡಾ.ದಿವಾಕರನ್, ಡಾ.ಮುರುಳಿ, ಡಾ.ವಿ.ವಿ.ರವಿ ಇನ್ನು ಮುಂತಾದವರು ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಅನೇಕ ಜ್ಯೋತಿಷ್ಯ ವಿಷಯಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ವಿಚಾರ ಸಂಕಿರಣದ ಸಂಚಾಲಕರಾದ ಚಂದ್ರಶೇಖರ್ (9880036277) ಹಾಗೂ ವಾಸ್ತು ತಜ್ಞರಾದ ಕೊರಟಗೆರೆ ಶಿವಣ್ಣ (9886337946) ಸಂಪರ್ಕಿಸಬಹುದು.

ಮಂಡ್ಯದಲ್ಲಿ ಜೋಯಾಲುಕ್ಕಾಸ್ ಆಭರಣ ಪ್ರದರ್ಶನ ಉದ್ಘಾಟನೆ



ಮಂಡ್ಯದಲ್ಲಿ ಆಯೋಜಿಸಿರುವ 3 ದಿನಗಳ ಜೋಯಾಲುಕ್ಕಾಸ್ ಆಭರಣ ಪ್ರದರ್ಶನವನ್ನು ಮಂಡ್ಯ ಸಶಸ್ತ್ರ ಪಡೆಯ ಡಿವೈಎಸ್ಪಿ ರಾಚಯ್ಯ ಉದ್ಘಾಟಿಸಿದರು. ಈ ವೇಳೆ ಡಾ.ಸರ್ವಮಂಗಳ, ಜೋಸೆಫ್, ಮಂಡ್ಯ ಲಯನ್ಸ್ ಅಧ್ಯಕ್ಷೆ ಶ್ರೀಮತಿ ಪ್ರತಿಮಾ, ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಸಿ.ಜೆ.ಸುಜಾತ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕೊಪ್ಪಳದಲ್ಲಿ ಜೆಡಿಎಸ್ ಪುನಶ್ಚೇತನ ಪರ್ವ ಕಾರ್ಯಕ್ರಮ

ಗ್ಯಾರಂಟಿ ಗುಂಗಿನಲ್ಲಿ ರಾಜ್ಯದ ಅಭಿವೃದ್ಧಿ ಮರೆತ ಕಾಂಗ್ರೆಸ್ ಸರ್ಕಾರ

ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ವಾಗ್ದಾಳಿ

ಮೈಸೂರು,ಸೆ.27(ಪಿಎಂ)– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ನಾಲ್ಕು ತಿಂಗಳಾದರೂ ಅಭಿವೃದ್ಧಿ ಕೆಲಸಗಳಿಗೆ ಅನುದಾನ ನೀಡಿಲ್ಲ. ಕೇವಲ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ರಾಜ್ಯ ಸರ್ಕಾರ ಹರಸಾಹಸಪಡುತ್ತಿದ್ದು, ಗ್ಯಾರಂಟಿಗಳ ಗುಂಗಿನಲ್ಲಿ ರಾಜ್ಯದ ಅಭಿವೃದ್ಧಿ ಮರೆತಿದೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ವಾಗ್ದಾಳಿ ನಡೆಸಿದರು.

ಕೊಪ್ಪಳದಲ್ಲಿ ಬುಧವಾರ ರಾಯಚೂರು, ಬಳ್ಳಾರಿ, ವಿಜಯನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಹಮ್ಮಿಕೊಂಡಿದ್ದ ಜೆಡಿಎಸ್ ಪುನಶ್ಚೇತನ ಪರ್ವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಟರ ಶ್ರೇಯೋಭಿವೃದ್ಧಿಗೆ ಮೀಸಲಿರುವ ಅನುದಾನದಲ್ಲಿ 11 ಸಾವಿರ ಕೋಟಿ ಹಣವನ್ನು ಉಪಯೋಗಿಸಿಕೊಂಡಿದೆ ಎಂದು ತೀವ್ರ ವಾಗ್ದಾಳಿ ನಡೆಸಿದರು. ಚುನಾವಣೆ ಪೂರ್ವದಲ್ಲಿ ಎಲ್ಲಾ ಮನೆಗಳಿಗೂ ಪ್ರತಿ ತಿಂಗಳು 200 ಯೂನಿಟ್ ವಿದ್ಯುತ್ ಉಚಿತ ಎಂದು ಘೋಷಣೆ ಮಾಡಿದ್ದ ಕಾಂಗ್ರೆಸ್, ಈಗ ವಾರ್ಷಿಕ ಸಾರಸರಿ ಬಳಕೆ ಆಧಾರದಲ್ಲಿ ಯೂನಿಟ್ ನಿಗದಿಗೊಳಿಸುವ ನಿಯಮ ವಿಧಿಸಿದೆ. ಆ ಮೂಲಕ ನುಡಿದಂತೆ ಈ ಸರ್ಕಾರ ನಡೆಯುತ್ತಿಲ್ಲ. ಹವಾಮಾನ ಇಲಾಖೆ ಮೇ ತಿಂಗಳಲೇ ಮಳೆಯ ಅಭಾವದ ಬಗ್ಗೆ ಮುನ್ಸೂಚನೆ ನೀಡಿತ್ತು. ಅದಾಗ್ಯೂ ಸರ್ಕಾರ ವಿದ್ಯುತ್ ಉತ್ಪಾದನೆಗೆ ಹಣ ಮೀಸಲಿಡದೇ ನಿರ್ಲಕ್ಷ್ಯ ತಾಳಿದ್ದು, ರೈತರಿಗೆ ಸಮರ್ಪಕ ವಿದ್ಯುತ್ ಒದಗಿಸದೇ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು. ಮುಖ್ಯಮಂತ್ರಿಗಳಾಗಿ ಒಂದೇ ಜಾತಿ ನಾಯಕರಂತೆ ವರ್ತಿಸುತ್ತಿದ್ದಾರೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಅವರೇ ಟೀಕಿಸಿದ್ದಾರೆ. ಮುಸ್ಲಿಂ ಸಮಾಜಕ್ಕೆ ಹೆಚ್.ಡಿ. ದೇವೇಗೌಡರು ಶೇ.4ರಷ್ಟು ಮೀಸಲಾತಿ ಕಲ್ಪಿಸಿದ್ದರು. ಅದನ್ನು ಹಿಂದಿನ ರಾಜ್ಯ ಸರ್ಕಾರ ಕೈಬಿಟ್ಟಿದ್ದು, ಚುನಾವಣೆ ಪೂರ್ವದಲ್ಲಿ ಇದನ್ನು ಮತ್ತೆ ನೀಡುವುದಾಗಿ ಕಾಂಗ್ರೆಸ್ ಘೋಷಣೆ ಮಾಡಿತ್ತು. ಇದೇ ಭರವಸೆ ಮೇಲೆ ಮುಸ್ಲಿಂ ಸಮುದಾಯದ ಶೇ.90ರಷ್ಟು ಮತಗಳು ಕಾಂಗ್ರೆಸ್ ದೊರೆತವು. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದು ನಾಲ್ಕು ತಿಂಗಳು ಕಳೆದರೂ ಈವರೆಗೆ ಒಂದು ದಿನವೂ ಆ ಬಗ್ಗೆ ಮಾತನಾಡಿಲ್ಲ. ಈ ಬಗ್ಗೆ ಮೌನವೇಕೆ ಎಂದು ಪ್ರಶ್ನಿಸಿದರು.

ಮೈತ್ರಿ ಬಗ್ಗೆ ಮಾತನಾಡಿದ ಜಿ.ಟಿ. ದೇವೇಗೌಡರು, ನಾಡಿನ ಜನತೆಯ ಹಿತಾಸಕ್ತಿ ಹಿನ್ನೆಲೆಯಲ್ಲಿ ಬಿಜೆಪಿ ಜೊತೆಗೆ ಮೈತ್ರಿಯಾಗಿದ್ದು, ಇಲ್ಲಿ ಪಕ್ಷದ ನಾಯಕರ ಹಿತಾಸಕ್ತಿಗಾಗಿ ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನೆನ್ನೆ ಕಲಬುರಗಿಯಲ್ಲಿ ನಡೆದ ಪುನಶ್ಚೇತನ ಪರ್ವ ಕಾರ್ಯಕ್ರಮ ಯಶಸ್ವಿ ಜರುಗಿತ್ತು. ನಂತರ ಬಸವಣ್ಣರವರ ತಾಯಿಯ ಊರಾದ ಇಂಗಳೇಶ್ವರಕ್ಕೂ ಭೇಟಿ ಕೊಟ್ಟು, ಅಲ್ಲಿಂದ ಇಂದು ಬೆಳಿಗ್ಗೆ ಬಸವಣ್ಣನ ಐಕ್ಯ ಸ್ಥಳ ಕೂಡಲ ಸಂಗಮಕ್ಕೆ ಭೇಟಿ ನೀಡಿ ಸಂಗಮೇಶ್ವರನ ದರ್ಶನ ಪಡೆಯಲಾಯಿತು ಎಂದರು.

ಬಳಿಕ ಪಂಚಮಸಾಲಿ ಪೀಠಾಧ್ಯಕ್ಷ ಶ್ರೀ ಜಯಮೃತ್ಯುಂಜಯ ಸ್ವಾಮಿಗಳಿಂದ ಆಶೀರ್ವಾದ ಪಡೆದು, ನೇರವಾಗಿ ಕೊಪ್ಪಳಕ್ಕೆ ಬಂದು ಗವಿ ಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿಗಳ ಆಶೀರ್ವಾದ ಪಡೆಯಲಾಯಿತು. ಶರಣರು–ಸಂತರ ನೆಲದಿಂದ ಜೆಡಿಎಸ್ ಪುನಶ್ಚೇತನ ಪರ್ವ ಪ್ರಾರಂಭ ಮಾಡಿದ್ದು, ನಮ್ಮ ಪಕ್ಷದ ಪುನಶ್ಚೇತನದ ಮೂಲಕ ಶರಣರ ಆಶಯದಂತೆ ಜನರ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯರಾದ ಹೆಚ್.ಕೆ.ಕುಮಾರಸ್ವಾಮಿ, ಸಿ.ಎಸ್.ಪುಟ್ಟರಾಜು, ಅಲ್ಕೋಡ್ ಹನುಮಂತಪ್ಪ, ನಾಡಗೌಡ, ರಾಜುಗೌಡ, ನೇಮಿರಾಜ್ ನಾಯ್ಕ್, ಕೃಷ್ಣಾ ರೆಡ್ಡಿ, ಸುರೇಶ್ ಗೌಡ, ದೊಡ್ಡಪ್ಪಗೌಡರು, ತಿಮ್ಮರಾಯಪ್ಪ, ಕೆ.ಬಿ.ಪ್ರಸನ್ನಕುಮಾರ್, ವೀರಭದ್ರಪ್ಪ ಹಾಲರವಿ, ಸಿ.ವಿ.ಚಂದ್ರಶೇಖರ್, ಸೂರಜ್ ಸೋನಿ ನಾಯಕ್, ಸುನಿತಾ ಚೌಹಣ್, ಶಾಸಕಿ ಕರೆಮ್ಮ ನಾಯಕ್, ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ, ಜಿಲ್ಲಾಧ್ಯಕ್ಷರು, ತಾಲೂಕು ಅಧ್ಯಕ್ಷರು, ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.



ಕೊಪ್ಪಳದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಜೆಡಿಎಸ್ ಪುನಶ್ಚೇತನ ಪರ್ವ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರ ಸರ್ಕಾರ ರೈತರಿಗೆ ಪ್ರತಿ ವರ್ಷ 6 ಸಾವಿರ ರೂ. ನೀಡುವ ಯೋಜನೆ ಜಾರಿಗೆ ತಂದಿತ್ತು. ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ, ಅವರು ಇದಕ್ಕೆ ರಾಜ್ಯ ಸರ್ಕಾರದಿಂದ 4 ಸಾವಿರ ರೂ. ಸೇರಿಸಿ ಒಟ್ಟು 10 ಸಾವಿರ ರೂ. ನೀಡುವ ಯೋಜನೆಯಾಗಿ ರೂಪಿಸಿದ್ದರು. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ರಾಜ್ಯ ಸರ್ಕಾರದಿಂದ ನೀಡುತ್ತಿದ್ದ 4 ಸಾವಿರ ರೂ. ಹಣವನ್ನು ನಿಲ್ಲಿಸಿದೆ. ಇದು ರೈತ ವಿರೋಧಿ ಸರ್ಕಾರ.

–ಜಿ.ಟಿ.ದೇವೇಗೌಡ, ಶಾಸಕ

27 ಕಾಡಾನೆಗಳನ್ನು ಕಾಡಿಗಟ್ಟಿದ ಕಾರ್ಮಿಕರು



ಸಿದ್ದಾಪುರ, ಸೆ.27– ಕೃಷಿ ಫಸಲು ನಾಶ ಮಾಡುವುದರ ಮೂಲಕ ಕಾರ್ಮಿಕರು, ಬೆಳೆಗಾರರಲ್ಲಿ ಆತಂಕ ಸೃಷ್ಟಿಸುತ್ತಿದ್ದ 27 ಕಾಡಾನೆಗಳನ್ನು ತೋಟದ ಕಾರ್ಮಿಕರೇ ಕಾಡಿಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ವಿರಾಜಪೇಟೆ ತಾಲೂಕಿನ ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಿಲ್ಪಿ ಕಾಫಿ ತೋಟದಲ್ಲಿ ಹಾಡಹಗಲಿನಲ್ಲೇ ಮರಿಯಾನೆಗಳೊಂದಿಗೆ 27 ಕಾಡಾನೆಗಳ ಹಿಂಡು ಕಾಫಿ ತೋಟದಲ್ಲಿ ಬೀಡು ಬಿಟ್ಟಿದ್ದವು. ತೋಟದ ಕೆಲಸಕ್ಕೆ ತೆರಳುವ ಮುನ್ನ ಇಬ್ಬರು ಕಾರ್ಮಿಕರು ಕಾಡಾನೆಗಳ ಇರುವಿಕೆಯ ಬಗ್ಗೆ ತಿಳಿದುಕೊಳ್ಳಲು ತೆರಳಿದ ಸಂದರ್ಭ ಕಾರ್ಮಿಕರಾದ ಪವನ್, ಗಣೇಶ್ ಎಂಬುವರಿಗೆ ಕಾಡಾನೆಗಳ ಹಿಂಡು ಪ್ರತ್ಯಕ್ಷಗೊಂಡವು.

ತಕ್ಷಣ ಇತರ ಕಾರ್ಮಿಕರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ತೋಟದ ಕೆಲಸಕ್ಕೆ ಬಂದ ರಘು, ಕುಶ, ಕಿಟ್ಟಿ, ಬಿಕಾಶ್ ಸೇರಿದಂತೆ ಇತರ ಕಾರ್ಮಿಕರು ಕಾಡಾನೆಗಳ ಗುಂಪನ್ನು ಕಂಡು ಭಯಭೀತರಾದರು. ಕಾಡಾನೆಗಳ ಹಾವಳಿಯಿಂದ ಒಂದು ದಿನದ ಕೆಲಸ ಇಲ್ಲದಂತಾಗುತ್ತದೆ ಎಂದು ಭಾವಿಸಿ ಧೈರ್ಯ ತೋರಿದ ಕಾರ್ಮಿಕರು ಮರದ ಮೇಲೆ ಹತ್ತಿ ಕಿರುಚುವ ಶಬ್ದ ಮಾಡುವ ಮೂಲಕ ಬೇರ್ಪಟ್ಟ ಆನೆಗಳನ್ನು ಒಂದುಗೂಡಿಸಿ ಶಿಲ್ಪಿ ಕಾಫಿ ತೋಟದಿಂದ ಚಿಕ್ಕನಹಳ್ಳಿ ಮಾರ್ಗವಾಗಿ ಒಂದು ಕಿಲೋಮೀಟರ್‌ವರೆಗೆ ಹಿಮ್ಮೆಟ್ಟಿಸಿಕೊಂಡು ಸಮೀಪದ ದುಬಾರೆ ಅರಣ್ಯಕ್ಕೆ ಅಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ನಿರಂತರ ಕಾಡಾನೆ ಹಾವಳಿಯಿಂದ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗದಂತಾಗಿದೆ ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲು ಕಾರ್ಮಿಕರು, ಬೆಳೆಗಾರರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದರು.

ಕಾವೇರಿ ಒಡಲಲ್ಲಿ ಭೂ ಪರಿವರ್ತನೆಗೆ ಭಾರೀ ವಿರೋಧ

ರಿಯಲ್ ಎಸ್ಟೇಟ್ ವಿರುದ್ಧ ಕಾನೂನು ಹೋರಾಟ ಮಾಡಲು ಕೂರ್ಗ್ ವೈಲ್ಡ್‌ಲೈಫ್ ಫೌಂಡೇಶನ್



ಮಡಿಕೇರಿ, ಸೆ.27– ಕಾವೇರಿಯ ಉಗಮ ಸ್ಥಾನ ಕೊಡಗು ಜಿಲ್ಲೆಗೆ ವಾಣಿಜ್ಯ ಭೂಪರಿವರ್ತನೆ ಮತ್ತು ನಗರೀಕರಣ ಮಾರಕವಾಗಿದ್ದು, ನಿಯಮಬಾಹಿರ ಭೂಪರಿವರ್ತನೆಗಳ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು. ಆದ್ದರಿಂದ ಕೊಡಗಿನಲ್ಲಿ ರಿಯಲ್ ಎಸ್ಟೇಟ್‌ಗೆ ಹೂಡಿಕೆ ಮಾಡಿ ಕೈ ಸುಟ್ಟುಕೊಳ್ಳಬೇಡಿ ಎಂದು ಪರಿಸರ ಮತ್ತು ಆರೋಗ್ಯ ಪ್ರತಿಷ್ಠಾನದ ಪ್ರಮುಖ ಹಾಗೂ ಕೂರ್ಗ್ ವೈಲ್ಡ್‌ಲೈಫ್ ಫೌಂಡೇಶನ್ ಮಾಜಿ ಅಧ್ಯಕ್ಷ ಕರ್ನಲ್ ಸಿ.ಪಿ.ಮುತ್ತಣ್ಣ ಮನವಿ ಮಾಡಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ನೀರಿಗಾಗಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಕಲಹದಲ್ಲಿ ತೊಡಗಿವೆ. ಆದರೆ ಕಾವೇರಿ ನದಿ ಹುಟ್ಟುವ ಕೊಡಗಿನ ಸ್ಥಿತಿಗತಿಯ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸಿದರು. ಹಾಲಿಗಾಗಿ ಕಿತ್ತಾಟ ನಡೆಯುತ್ತಿದೆ, ಆದರೆ ಹಾಲು ಕೊಡುವ ಹಸುವಿಗೆ ಏನಾಗಿದೆ ಎಂದು ಯಾರೂ ಚಿಂತಿಸುತ್ತಿಲ್ಲ. ವಾಣಿಜ್ಯ ಭೂಪರಿವರ್ತನೆ ಮತ್ತು ನಗರೀಕರಣದಿಂದ ಕಾವೇರಿ ಜಲ ಮೂಲಕ್ಕೆ ಅಪಾಯ ಎದುರಾಗಿದೆ. ತೋಟ, ಗದ್ದೆಗಳು ನಿಯಮಬಾಹಿರವಾಗಿ ಭೂ ಪರಿವರ್ತನೆಯಾಗುತ್ತಿವೆ. ಹೊರಗಿನವರು ಬಂದು ರೆಸಾರ್ಟ್, ಲೇಔಟ್‌ಗಳನ್ನು ಮಾಡಿ ನಗರೀಕರಣಗೊಳಿಸುತ್ತಿದ್ದಾರೆ. ಜಿಲ್ಲೆಯ ಮೂಲ ನಿವಾಸಿಗಳು 'ಮೂಲೆ' ನಿವಾಸಿಗಳಾಗುತ್ತಿದ್ದಾರೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಕೊಡಗು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಭೀತಿ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೊಡಗು ಜಿಲ್ಲೆಯ ಪರಿಸರ ಮತ್ತು ಜಲಮೂಲಗಳನ್ನು ಉಳಿಸಿಕೊಳ್ಳಲು ನಾವು ನಿರಂತರವಾಗಿ ಹೋರಾಟಗಳನ್ನು ನಡೆಸುತ್ತಾ ಬಂದಿದ್ದೇವೆ. ಆದರೆ ಭ್ರಷ್ಟ ವ್ಯವಸ್ಥೆ ನ್ಯಾಯಾಲಯದ ಆದೇಶವನ್ನೇ ಉಲ್ಲಂಘಿಸಿ ಭೂಪರಿವರ್ತನೆಯಲ್ಲಿ ತೊಡಗಿವೆ. ಇದನ್ನು ತಡೆಯಲು ಮುಂದಿನ ದಿನಗಳಲ್ಲಿ ಕಠಿಣ ಕಾನೂನು ಹೋರಾಟಗಳನ್ನು ನಡೆಸಲಾಗುವುದು. ಇದರಿಂದ ನಿಯಮ ಉಲ್ಲಂಘಿಸಿದ ರೆಸಾರ್ಟ್‌ಗಳನ್ನು ತೆರವುಗೊಳಿಸಬೇಕಾದ ಪರಿಸ್ಥಿತಿಯೂ ಎದುರಾಗಬಹುದು. ಆದ್ದರಿಂದ ಕೊಡಗಿನಲ್ಲಿ ರಿಯಲ್ ಎಸ್ಟೇಟ್‌ಗೆ ಮತ್ತು ನಗರೀಕರಣಕ್ಕೆ ಹಣ ಹೂಡಿಕೆ ಮಾಡುವವರು ಸ್ವಲ್ಪ ಯೋಚಿಸುವುದು ಅಗತ್ಯ, ಇಲ್ಲದಿದ್ದರೆ ಕಾನೂನು ಕ್ರಮದಿಂದ ಹಣ ಕಳೆದುಕೊಳ್ಳಬೇಕಾಗುತ್ತದೆ ಎಂದು ಕರ್ನಲ್ ಮುತ್ತಣ್ಣ ಎಚ್ಚರಿಕೆ ನೀಡಿದರು.

ಕೊಡಗು ಜಿಲ್ಲೆಗೆ ಬಂದು ಲಾಭ ಮಾಡಿಕೊಂಡವರು ಲಾಭದ ಹಣವನ್ನು ಜಲಮೂಲದ ನಾಶಕ್ಕೆ ಕಾರಣವಾಗಬಲ್ಲ ರಿಯಲ್ ಎಸ್ಟೇಟ್‌ಗೆ ಸುರಿಯುವ ಮೂಲಕ 8 ಕೋಟಿ ಜನರಿಗೆ ನೀರನ್ನು ಒದಗಿಸುವ ಕಾವೇರಿ ಮಾತೆಗೆ ಅನ್ಯಾಯ ಮಾಡುತ್ತಿದ್ದಾರೆ. ಲೇಔಟ್, ರೆಸಾರ್ಟ್ ಮತ್ತು ರಿಯಲ್ ಎಸ್ಟೇಟ್ ವ್ಯವಹಾರ ಮಾಡಬೇಕೆನ್ನುವ ಆಸಕ್ತಿ ಇರುವವರು ಮೈಸೂರು, ಬೆಂಗಳೂರಿನಲ್ಲಿ ಮಾಡಲಿ. ಕಾವೇರಿ ನಾಡು ಕೊಡಗಿನಿಂದ ಲಾಭ ಮಾಡಿಕೊಂಡು ಕೊಡಗನ್ನು ನಾಶ ಮಾಡುವುದು ಬೇಡ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಿಯಮಬಾಹಿರ ಭೂಪರಿವರ್ತನೆಯಿಂದ ವಿರಾಜಪೇಟೆ, ಗೋಣಿಕೊಪ್ಪಲು ಮತ್ತು ಪೊನ್ನಂಪೇಟೆ ದಕ್ಷಿಣ ಕೊಡಗಿನಲ್ಲಿ ಮೈಸೂರು ಗಾತ್ರದ ದೊಡ್ಡ ನಗರವಾಗಲಿದೆ. ಅದೇ ರೀತಿ ಮಡಿಕೇರಿ, ಕುಶಾಲನಗರ ಮತ್ತು ಸೋಮವಾರಪೇಟೆ ಉತ್ತರ ಕೊಡಗಿನ ಮತ್ತೊಂದು ದೊಡ್ಡ ಸಿಂಗಲ್ ಸಿಟಿಯಾಗಲಿದೆ. ಕೊಡಗಿಗೆ ಹೊರ ಭಾಗದಿಂದ ಹೆಚ್ಚಿನ ಸಂಖ್ಯೆಯ ಜನರು ಬರುವುದರಿಂದ ಸ್ಥಳೀಯ ಸಮುದಾಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಲಿವೆ. ಮುಖ್ಯವಾಗಿ ಕಾವೇರಿ ನೀರನ್ನು ಒದಗಿಸುವ ಶಕ್ತಿಯನ್ನು ಕೊಡಗು ಕಳೆದುಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕೊಡಗಿನ ಹಿತವನ್ನು ಕಾಯಲು ಮುಂದಾಗಬೇಕು. ನಿಯಮಬಾಹಿರ ಭೂಪರಿವರ್ತನೆಗಳನ್ನು ತಡೆಯಬೇಕು. ಕೊಡಗನ್ನು ಉಳಿಸಿಕೊಳ್ಳಲು ಸ್ಥಳೀಯ ಜನ ಸ್ವಯಂ ಪ್ರೇರಿತರಾಗಿ ಪರಿಸರ ಮತ್ತು ಜಲಮೂಲದ ಪರ ಹೋರಾಟಕ್ಕೆ ಧುಮುಕಬೇಕು ಎಂದು ಕರ್ನಲ್ ಸಿ.ಪಿ.ಮುತ್ತಣ್ಣ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕೆದಕಲ್ ಗ್ರಾ.ಪಂ ಸದಸ್ಯ ಜಿ.ಡಿ.ಶಿವಕುಮಾರ್, ಕೊಡಗು ರಕ್ಷಣಾ ವೇದಿಕೆಯ ಉಪಾಧ್ಯಕ್ಷ ವೈ.ಟಿ. ಗೋಪಿನಾಥ್, ಸಾಮಾಜಿಕ ಕಾರ್ಯಕರ್ತರಾದ ಉಳುವಾರನ ಗಯ ಹಾಗೂ ಉಳುವಾರನ ಪ್ರಜ್ವಲ್ ಉಪಸ್ಥಿತರಿದ್ದರು.

ವಿರಾಜಪೇಟೆ ಸುತ್ತಮುತ್ತ ಮುಂದುವರೆದ ಕಾಡಾನೆ ಹಾವಳಿ

ಹಾಲು ತರಲು ಹೋಗುತ್ತಿದ್ದ ವ್ಯಕ್ತಿ ಮೇಲೆ ದಾಳಿ, ಗಾಯ

ವಿರಾಜಪೇಟೆ, ಸೆ.27– ವಿರಾಜಪೇಟೆ ತಾಲೂಕಿನಾದ್ಯಂತ ಇತ್ತೀಚೆಗೆ ಕಾಡಾನೆ ಹಾವಳಿ ಮಿತಿಮೀರಿದೆ. ಬುಧವಾರ ಬೆಳಗ್ಗೆ ಹಾಲು ತರಲೆಂದು ಅಂಗಡಿಗೆ ತೆರಳಿದ್ದ ವ್ಯಕ್ತಿಯ ಮೇಲೆ ಕಾಡಾನೆಯೊಂದು ದಾಳಿ ನಡೆಸಿದ ಪರಿಣಾಮ ಆತ ತೀವ್ರವಾಗಿ ಗಾಯಗೊಂಡಿರುವ ಘಟನೆಯೊಂದು ಸಂಭವಿಸಿದೆ.



ವಿರಾಜಪೇಟೆ ತಾಲೂಕಿನ ಕಾಕೋಟು ಪರಂಬು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಡಂಗ ಮೂರೂರು ಗ್ರಾಮದ ಭದ್ರಕಾಳಿ ದೇವಸ್ಥಾನದ ಬಳಿ ಹಾಲು ತರಲು ಅಂಗಡಿಗೆ ಹೋದ ಸಂದರ್ಭ ಕಾಡಾನೆ ದಾಳಿ ನಡೆಸಿ ಅಮ್ಮಂಡ ಸುಬ್ರಹ್ಮಣಿ (75) ಅವರನ್ನು ಗಾಯಗೊಳಿಸಿದೆ ಪ್ರಾಣಾಪಾಯದಿಂದ ಪಾರಾಗಿರುವ ಅವರನ್ನು ಮಡಿಕೇರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಭಾಗದಲ್ಲಿ ಪ್ರತ್ಯಕ್ಷವಾಗಿರುವ ಕಾಡಾನೆಗಳನ್ನು ಕಾಡಿಗಟ್ಟಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ಸ್ಥಳಕ್ಕೆ ಭೇಟಿ ನೀಡಿ, ಗಾಯಾಳುವನ್ನು ಜಿಲ್ಲಾಸ್ಪತ್ರೆಗೆ ಸಾಗಿಸಲು ಸಹಕರಿಸಿದ್ದಾರೆ. ಬಳಿಕ ಜಿಲ್ಲಾ ಆಸ್ಪತ್ರೆಯ ವೈದ್ಯರೊಂದಿಗೆ ಮಾತನಾಡಿ ಗುಣಮಟ್ಟದ ಚಿಕಿತ್ಸೆ ನೀಡುವಂತೆ ಮನವಿ ಮಾಡಿದರು. ಇವರೊಂದಿಗೆ ಕಾಕೋಟುಪರಂಬು ಕಾಂಗ್ರೆಸ್ ವಲಯಾಧ್ಯಕ್ಷ ಮಂಡೇಟಿರ ಅನಿಲ್ ಅಯ್ಯಪ್ಪ ಮತ್ತಿತರರು ಉಪಸ್ಥಿತರಿದ್ದರು. ಘಟನೆಗೆ ಪ್ರತಿಕ್ರಿಯಿಸಿದ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಅವರು ಉತ್ತಮ ಚಿಕಿತ್ಸೆ ನೀಡಲು ಸೂಚಿಸಿ, ಗಾಯಾಳುವಿಗೆ ತಕ್ಷಣವೇ ಪರಿಹಾರ ವಿತರಿಸಲು ನಿರ್ದೇಶನ ನೀಡಿದರಲ್ಲದೆ, ಕಾಡಾನೆಯ ಸೆರೆಗೆ ತಕ್ಷಣ ಕ್ರಮ ಕೈಗೊಳ್ಳಲು ಅರಣ್ಯ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಹುಲಿ ದಾಳಿಗೆ ಹಸು ಬಲಿ

ಮಡಿಕೇರಿ, ಸೆ.27– ಪೊನ್ನಂಪೇಟೆ ತಾಲೂಕಿನ ಬಾಳೆಲೆ ವ್ಯಾಪ್ತಿಯಲ್ಲಿ ಹುಲಿ ಹಾವಳಿ ಮುಂದುವರೆದಿದ್ದು, ಜಾನುವಾರು ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿರುವ ಘಟನೆ ನಡೆದಿದೆ. ಪೊನ್ನಂಪೇಟೆ ತಾಲೂಕಿನ ಬಾಳೆಲೆ ಹೋಬಳಿಯ ದೇವನೂರು ಗ್ರಾಮದ ರಾಜಾಪುರ ಎಂಬಲ್ಲಿ ಬುಧವಾರ ಮಧ್ಯಾಹ್ನ ವೇಳೆ ಈ ಘಟನೆ ನಡೆದಿದೆ. ಅಲ್ಲಿನ ನಿವಾಸಿ ಪಿ.ಪ್ರವೀಣ್ ಎಂಬವರ ತೋಟದಲ್ಲಿ ಮೇಯಲು ಬಿಟ್ಟಿದ್ದ ಎಮ್ಮೆಯ ಮೇಲೆ ಹುಲಿ ದಾಳಿ ನಡೆಸಿದ್ದು, ಜಾನುವಾರು ಸಾವನ್ನಪ್ಪಿದೆ.

ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಗೂ ರೈತ ಸಂಘ ಪ್ರಮುಖರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜಾನುವಾರು ಸಾವಿನಿಂದ ಮಾಲೀಕರಿಗೆ ನಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ತಕ್ಷಣವೇ ಪರಿಹಾರ ಒದಗಿಸಬೇಕು. ಜಾನುವಾರು ಹಂತಕ ಹುಲಿಯನ್ನು ಸೆರೆ ಹಿಡಿದು ಬೇರೆಡೆ ಸ್ಥಳಾಂತರಿಸಬೇಕು ಎಂದು ರೈತರ ಸಂಘದ ಪ್ರಮುಖರು ಆಗ್ರಹಿಸಿದ್ದಾರೆ. ಅರಣ್ಯ ಇಲಾಖೆಯಿಂದ ಹುಲಿ ಸೆರೆ ಹಿಡಿಯಲು ಬೋನ್ ಅಳವಡಿಕೆ ಮಾಡಲಾಗಿದೆ.

ಬೀಟೆ ನಾಟಾ ಸಾಗಿಸುತ್ತಿದ್ದ ಆರೋಪಿ ಬಂಧನ



ಕುಶಾಲನಗರ, ಸೆ.27– ಕಾನೂನು ಬಾಹಿರವಾಗಿ ಬೆಂಡೆಬೆಟ್ಟ ಮೀಸಲು ಅರಣ್ಯ ಪ್ರದೇಶದಿಂದ ಬೀಟೆ ಮರ ಕಡಿದು ಅದರ ಬೀಟೆ ನಾಟಗಳನ್ನು ಸಾಗಾಟ ಮಾಡುತ್ತಿದ್ದ ಸಂದರ್ಭ ಅರಣ್ಯ ಸಿಬ್ಬಂದಿಗಳು ದಾಳಿ ಮಾಡಿ ಮಾಲು ಸಮೇತ ಓರ್ವ ಆರೋಪಿಯನ್ನು ಬಂಧಿಸಿದ್ದಾರೆ.

ಚಿಕ್ಕತ್ತೂರು ಗ್ರಾಮದ ಮೂರ್ತಿ ಎಂಬವರ ಪುತ್ರ ಸಿ.ಎಂ. ಮೋನೇಶ್ (26) ಬಂಧಿತ ಆರೋಪಿ. ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಮಂಗಳವಾರ ರಾತ್ರಿ ಕಾರ್ಯಾಚರಣೆ ನಡೆಸಿದ ಅರಣ್ಯ ಸಿಬ್ಬಂದಿಗಳು ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯ ಚಿಕ್ಕತ್ತೂರು ಗ್ರಾಮದಲ್ಲಿ ತಪಾಸಣೆ ಕೈಗೊಂಡ ಸಂದರ್ಭ ಹಾರಂಗಿ–ಚಿಕ್ಕತ್ತೂರು ಕಡೆಯಿಂದ ಬಂದ ಟ್ರಾಕ್ಟರ್ ವೇಗವಾಗಿ ನಿಲ್ಲಿಸದೇ ಹೋದಾಗ ಇಲಾಖಾ ವಾಹನದಲ್ಲಿ ಟ್ರಾಕ್ಟರ್‌ನ್ನು ಬೆನ್ನಟ್ಟಿ ಅದರಲ್ಲಿದ್ದ ಒಬ್ಬಾತನನ್ನು ವಶಕ್ಕೆ ಪಡೆದರು. ಉಳಿದ 3 ಜನ ಕತ್ತಲಲ್ಲಿ ತಪ್ಪಿಸಿಕೊಂಡು ತಲೆ ಮರೆಸಿಕೊಂಡಿದ್ದಾರೆ. ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ಅತ್ತೂರು ಮೀಸಲು ಅರಣ್ಯದಿಂದ ಒಂದು ಬೀಟೆ ಮರವನ್ನು ತುಂಡು ಮಾಡಿ ಟ್ರಾಕ್ಟರ್‌ಗೆ ತುಂಬಿಸಿ ಕುಶಾಲನಗರ ಕಡೆಗೆ ಮಾರಾಟ ಮಾಡಲು ತರುತ್ತಿರುವುದಾಗಿ ತಿಳಿದು ಬಂದಿದೆ. ಚಿಕ್ಕತ್ತೂರಿನ ಸಿ.ಪಿ.ದಿಲಿಪ, ಗಿರೀಶ್, ಶ್ರೀನಿವಾಸ ಅಲಿಯಾಸ್ ಸಿನಿ ತಲೆಮರೆಸಿಕೊಂಡಿದ್ದಾರೆ. ಟ್ರಾಕ್ಟರ್‌ನಲ್ಲಿದ್ದ 9 ಬೀಟೆ ನಾಟಗಳ ವಶಪಡಿಸಿಕೊಂಡ ಅಧಿಕಾರಿಗಳು ತನಿಖೆ ಮುಂದುವರೆಸಿದ್ದಾರೆ.

ಜನರಲ್ ತಿಮ್ಮಯ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಡಿಕೇರಿ, ಸೆ.27– 2022–23 ನೇ ಸಾಲಿನಲ್ಲಿ ಹತ್ತನೇ ತರಗತಿ ಮತ್ತು ದ್ವಿತೀಯ ಪಿಯುಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಕರ್ನಾಟಕ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ 'ಜನರಲ್ ಕೆ.ಎಸ್.ತಿಮ್ಮಯ್ಯ' ನಗದು ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅ.31 ಕೊನೆಯ ದಿನವಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಮಡಿಕೇರಿ, ಸೆ.27– ಒಂದರಿಂದ 8 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಸಮುದಾಯದ ಅರ್ಹ ವಿದ್ಯಾರ್ಥಿಗಳಿಂದ 2023–24 ನೇ ಸಾಲಿಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (ಎಸ್‌ಎಸ್‌ಪಿ) ದಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಮಾಹಿತಿಗೆ ಕಚೇರಿ ದೂ.ಸಂ. 08272–225528, ಮಾಹಿತಿ ಕೇಂದ್ರ, ಮಡಿಕೇರಿ 08272–220214, ಮಾಹಿತಿ ಕೇಂದ್ರ ಸೋ.ಪೇಟೆ 8548068519, ಮಾಹಿತಿ ಕೇಂದ್ರ, ಪೊನ್ನಂಪೇಟೆ 9900731037 ಮತ್ತು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ (ಎಸ್‌ಎಸ್‌ಪಿ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://dom.karnataka.gov.in/kodagu/public ಅಥವಾ ಸಹಾಯವಾಣಿ ಸಂಖ್ಯೆ 8277799990 ಗೆ ಅಥವಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮೌಲಾನಾ ಆಜಾದ್ ಭವನ, ಎಫ್.ಎಂ.ಸಿ. ಕಾಲೇಜು ಹತ್ತಿರ, ಮಡಿಕೇರಿ ಇವರನ್ನು ಸಂಪರ್ಕಿಸಬಹುದು.

ಬೆಟ್ಟದಲ್ಲಿ ನವದಂಪತಿಗಳಿಗೆ ಶುಭ ಹಾರೈಸಿದ ಸಿಎಂ

ದುಬಾರಿ ವಿವಾಹ ಬೇಡ, ಯುವ ಪೀಳಿಗೆ ಸರಳ ವಿವಾಹ ಮಾಡಿಕೊಳ್ಳಲಿ



ಚಾಮರಾಜನಗರ, ಸೆ.27– ಜಿಲ್ಲೆಯ ಹನೂರು ತಾಲೂಕಿನ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಬುಧವಾರ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡು ನೂತನ ದಂಪತಿಗಳಿಗೆ ಶುಭ ಹಾರೈಸಿದರು.

ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ರಾತ್ರಿ 9.30ರ ಸುಮಾರಿಗೆ ಆಗಮಿಸಿ ಬೆಟ್ಟದ ರಾಷ್ಟ್ರಪತಿ ಭವನದಲ್ಲಿ ವಾಸ್ತವ್ಯ ಹೂಡಿದರು. ಬೆಳಗ್ಗೆ ಮಹದೇಶ್ವರಸ್ವಾಮಿ ದರ್ಶನ ಪಡೆದು, ರಾಜ್ಯದಲ್ಲಿ ಉತ್ತಮ ಮಳೆಯಾಗಿ ನೀರಿನ ಸಂಕಷ್ಟ ದೂರವಾಗಲೆಂದು ಮಾದಪ್ಪನಲ್ಲಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಬೆಳಗ್ಗೆ 9.50 ರಿಂದ 10.20ರ ಶುಭ ಲಗ್ನದಲ್ಲಿ ದೇವಸ್ಥಾನದ ರಂಗಮಂದಿರದಲ್ಲಿ ಮಲೆ ಮಹದೇಶ್ವರ ಸ್ವಾಮಿ ಅಭಿವೃದ್ಧಿ ಪ್ರಾಧಿಕಾರದಿಂದ ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಪಾಲ್ಗೊಂಡು ನೂತನ ದಾಂಪತ್ಯ ಜೀವನಕ್ಕೆ ಕಾಲಿಟ್ಟ 39 ಜೋಡಿಗಳಿಗೆ ಶುಭ ಹಾರೈಸಿದರು.

ಬಳಿಕ ಮಾತನಾಡಿದ ಅವರು, ಇನ್ನು ಐದು ವರ್ಷದ ಅವಧಿಯಲ್ಲಿ ಮಲೆ ಮಹದೇಶ್ವರಸ್ವಾಮಿ ಬೆಟ್ಟವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುತ್ತೇವೆ ಎಂದು ಘೋಷಣೆ ಮಾಡಿದರು. ಬಡ ಜನರು ದುಬಾರಿ ಮದುವೆಯನ್ನು ಮಾಡಿಕೊಳ್ಳಬೇಡಿ, ತಮ್ಮ ಶಕ್ತಿಗೆ ತಕ್ಕಂತೆ ಮದುವೆ ಮಾಡಿಕೊಳ್ಳಬೇಕು. ಮುಂದಿನ ಯುವ ಪೀಳಿಗೆ ಸರಳ ಮದುವೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಮದುವೆಗೆ ದುಂದುವೆಚ್ಚವನ್ನು ಮಾಡಬಾರದು ಎಂದು ಸಲಹೆ ನೀಡಿದರು.

ಮಲೆ ಮಹದೇಶ್ವರ ಬೆಟ್ಟದಲ್ಲಿ ಸ್ವಚ್ಛತೆಯನ್ನು ಕಾಪಾಡುವ ಕೆಲಸವಾಗಬೇಕು. ಯಾತ್ರಿಕರಿಗೆ ಕುಡಿಯುವ ನೀರು, ಸ್ನಾನ, ಶೌಚಾಲಯ ಇನ್ನಿತರ ಮೂಲ ಸೌಕರ್ಯ ವ್ಯವಸ್ಥೆ ಕಡ್ಡಾಯವಾಗಿ ಆಗಬೇಕು ಎಂದು ತಿಳಿಸಿದರು. ನಂತರ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಪಾಲ್ಗೊಂಡು ಬೆಟ್ಟದಲ್ಲಿ ಪ್ರಗತಿಯಲ್ಲಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಮುಂದಿನ ದಿನಗಳಲ್ಲಿ ಭಕ್ತರಿಗೆ ಅನುಕೂಲವಾಗುವ ಅಭಿವೃದ್ಧಿ ಕೆಲಸಗಳ ಬಗ್ಗೆ ಆದ್ಯತೆ ನೀಡಿ ಅಧಿಕಾರಿಗಳು ಕೆಲಸ ನಿರ್ವಹಿಸಬೇಕು. ಬೆಟ್ಟಕ್ಕೆ ಬರುವ ಭಕ್ತರಿಗೆ ಮೂಲ ಸೌಕರ್ಯಗಳ ಕೊರತೆಯಾಗದಂತೆ ಕ್ರಮ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಈ ವೇಳೆ ಸಾಲೂರು ಬೃಹನ್ಮಠಾಧ್ಯಕ್ಷರಾದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್, ಮಹದೇಶ್ವರ ಬೆಟ್ಟದ ಗ್ರಾಪಂ ಅಧ್ಯಕ್ಷರು ಅರ್ಚನಾ, ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ, ಎಸ್ಪಿ ಪದ್ಮಿನಿಸಾಹು ಇದ್ದರು.

ರಾಜ್ಯದಲ್ಲಿ ಉತ್ತಮ ಮಳೆಯಾಗಲೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಾರ್ಥನೆ



ಚಾಮರಾಜನಗರ, ಸೆ.27– ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ಬಳಿಕ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಜಿಲ್ಲೆಯ ಪ್ರಸಿದ್ಧ ಯಾತ್ರಾಕ್ಷೇತ್ರವಾದ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟಕ್ಕೆ ಭೇಟಿ ನೀಡಿ, ಮಾದಪ್ಪನ ದರ್ಶನ ಪಡೆದರು.

ಈ ವೇಳೆ ರಾಜ್ಯದಲ್ಲಿ ಉತ್ತಮ ಮಳೆಯಾಗಲೆಂದು ಮಹದೇಶ್ವರ ಸ್ವಾಮಿಯಲ್ಲಿ ಸಿಎಂ ಸಿದ್ದರಾಮಯ್ಯ ಪ್ರಾರ್ಥನೆ ಸಲ್ಲಿಸಿದ್ದಾರೆ. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ಸಂಕಷ್ಟ ಪರಿಸ್ಥಿತಿ ನಿವಾರಣೆಯಾಗಲಿ, ರೈತರಿಗೆ ಒಳ್ಳೆಯದಾಗಲಿ, ರಾಜ್ಯದಲ್ಲಿ ಉತ್ತಮ ಮಳೆಯಾಗಲೆಂದು ಮಹದೇಶ್ವರ ಸ್ವಾಮಿಯಲ್ಲಿ ಕೇಳಿಕೊಂಡಿದ್ದೇನೆ ಎಂದರು.

ತಮಿಳುನಾಡಿಗೆ 3000 ಕ್ಯೂಸೆಕ್ ನೀರು ಬಿಡುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನೀರು ನಿರ್ವಹಣಾ ಪ್ರಾಧಿಕಾರ 3000 ಕ್ಯೂಸೆಕ್ ನೀರು ಬಿಡಿ ಎಂದು ಆದೇಶ ನೀಡಿದೆ. ಸದ್ಯ ನಮ್ಮ ಬಳಿ ನೀರು ಇಲ್ಲ, ಈಗಾಗಲೇ ಕಾನೂನು ತಜ್ಞರ ಸಲಹೆ ಪಡೆದಿದ್ದೇವೆ. ನೀರು ಹಂಚಿಕೆ ವಿಚಾರದಲ್ಲಿ ಯಾವುದೇ ರಾಜಿಯಿಲ್ಲ. ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ ಎಂದರು.

ಬುಡಕಟ್ಟು ಆಶ್ರಮ ಶಾಲೆಗೆ ಮುಖ್ಯಮಂತ್ರಿಗಳ ಭೇಟಿ

ಚಾಮರಾಜನಗರ, ಸೆ.27– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದ ಮುಖ್ಯ ರಸ್ತೆಯಲ್ಲಿರುವ ಕೋಣನಕೆರೆಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಸೇರಿದ ಬುಡಕಟ್ಟು ಆಶ್ರಮ ಶಾಲೆಗೆ ಇಂದು ಭೇಟಿ ನೀಡಿದ್ದರು.

ಮುಖ್ಯಮಂತ್ರಿಗಳನ್ನು ಸ್ಥಳೀಯ ಗ್ರಾಮಸ್ಥರು, ವಿದ್ಯಾರ್ಥಿಗಳು ಸಾಂಪ್ರದಾಯಿಕ ಗೊರುಕನ ನೃತ್ಯದ ಮೂಲಕ ಬರಮಾಡಿಕೊಂಡರು. ಶಾಲಾ ಮಕ್ಕಳು ಗುಲಾಬಿ ಹೂ ನೀಡಿ ಸಿದ್ದರಾಮಯ್ಯ ಅವರನ್ನು ಸಂತಸದಿಂದ ಸ್ವಾಗತಿಸಿದರು.

ಇದೇ ವೇಳೆ ಮಕ್ಕಳೊಂದಿಗೆ ಆತ್ಮೀಯವಾಗಿ ಮಾತನಾಡಿದ ಮುಖ್ಯಮಂತ್ರಿಯವರು ಎಷ್ಟನೇ ತರಗತಿಯಲ್ಲಿ ಓದುತ್ತಿದ್ದೀರ, ನಿಮಗೆ ಏನೇನು ಸೌಲಭ್ಯಗಳಿವೆ ಎಂದು ಕೇಳಿದರು. ಬಳಿಕ ಊಟದ ಹಾಲ್‌ನಲ್ಲಿ ಮಧ್ಯಾಹ್ನದ ಊಟ ಸೇವನೆ ಮಾಡುತ್ತಿದ್ದ ಮಕ್ಕಳನ್ನು ನಿಮಗೆ ಊಟಕ್ಕೆ ಏನೇನು ಕೊಡಲಾಗುತ್ತಿದೆ, ಊಟ ರುಚಿಯಾಗಿದೆಯಾ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿಯವರು ಆಗಮಿಸುತ್ತಿದ್ದಂತೆ ಮಕ್ಕಳು ಹರ್ಷೋದ್ಗಾರದಿಂದ ಸಂತಸ ವ್ಯಕ್ತಪಡಿಸಿದರು. ಇದೇ ವೇಳೆ ಮುಖ್ಯಮಂತ್ರಿಗಳು ಬುಡಕಟ್ಟು ಜನಾಂಗದ ಮುಖಂಡರು, ಸ್ಥಳೀಯ ಕಾಲೋನಿಯ ಜನರ ಅಹವಾಲುಗಳನ್ನು ಆಲಿಸಿದರು.

ಮಕ್ಕಳೊಂದಿಗೆ ಆತ್ಮೀಯ ಸಂವಾದ



ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಸಭೆ

ಚಾಮರಾಜನಗರ, ಸೆ.27– ಮಲೆ ಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿ ಇಂದು ಮುಖ್ಯಮಂತ್ರಿಗಳು ಹಾಗೂ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಯಿತು.

ಸಾಲೂರು ಶ್ರೀಗಳಾದ ಶಾಂತಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಶಾಸಕರಾದ ಎಂ.ಆರ್. ಮಂಜುನಾಥ್, ಸಿ. ಪುಟ್ಟರಂಗಶೆಟ್ಟಿ ಎ.ಆರ್. ಕೃಷ್ಣಮೂರ್ತಿ, ಎಚ್.ಎಂ. ಗಣೇಶ್‌ಪ್ರಸಾದ್, ಮರಿತಿಬ್ಬೇಗೌಡ, ಡಾ.ಡಿ. ತಿಮ್ಮಯ್ಯ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಮಂಜುನಾಥ್ ಪ್ರಸಾದ್, ಜಿಲ್ಲಾಧಿಕಾರಿ ಶಿಲ್ಪಾನಾಗ್, ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಸ್ಪಿ ಪದ್ಮಿನಿ ಸಾಹು ಇತರರು ಉಪಸ್ಥಿತರಿದ್ದರು.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಸೆ.27– ತೋಟಗಾರಿಕೆ ಇಲಾಖೆ ವತಿಯಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ (CHD) ಸೋಲಾರ್ ಪಂಪ್‌ಸೆಟ್‌ಗೆ ಸಹಾಯಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ತೋಟಗಾರಿಕೆಯಲ್ಲಿ ವಿನೂತನ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳಿಗೆ ಸಹಾಯಧನ ಕಾರ್ಯಕ್ರಮದಡಿ ತೋಟಗಾರಿಕೆ ಬೆಳೆಗಳ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ ಕಾರ್ಯಕ್ರಮದಡಿ ರೈತರಿಗೆ ಸೌರಶಕ್ತಿ ಆಧಾರಿತ ಕೃಷಿ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಳ್ಳಲು ಎಲ್ಲಾ ವರ್ಗದ ರೈತರಿಗೂ ಶೇ.50ರಷ್ಟು ಸಹಾಯಧನ ನಿಗದಿಪಡಿಸಲಾಗಿದೆ. ಕನಿಷ್ಠ 3 ಹೆಚ್‌ಪಿ ಸೋಲಾರ್ ಪಂಪ್‌ಸೆಟ್ ಸಾಮರ್ಥ್ಯದ ಘಟಕದ ವೆಚ್ಚ 2 ಲಕ್ಷ ರೂ.ಗಳಿಗೆ ಶೇ.50ರಂತೆ 1 ಲಕ್ಷ ರೂ. ನೀಡಲಾಗುವುದು, 5 ಹೆಚ್‌ಪಿ ಹಾಗೂ ಮೇಲ್ಪಟ್ಟ ಸೋಲಾರ್ ಪಂಪ್‌ಸೆಟ್‌ಗಳಿಗೆ ಘಟಕದ ವೆಚ್ಚ 3 ಲಕ್ಷ ರೂಗಳಿಗೆ ಶೇ.50ರಂತೆ 1.50 ಲಕ್ಷ ರೂ. ಗರಿಷ್ಠ ಸಹಾಯಧನ ನೀಡಲಾಗುವುದು.

ಆಸಕ್ತರು ಆಯಾ ತಾಲೂಕಿನ ತೋಟಗಾರಿಕಾ ಇಲಾಖೆಗೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿ, ಮಾಹಿತಿ ಪಡೆದು ಯೋಜನೆ ಸದುಪಯೋಗಪಡಿಸಿಕೊಳ್ಳುವಂತೆ ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿಗಳಿಂದ ಚಾ.ನಗರದಲ್ಲಿ ಕನಕ ವಾಣಿಜ್ಯ ಸಂಕೀರ್ಣದ 1ನೇ ಹಂತಕ್ಕೆ ಭೂಮಿಪೂಜೆ



ಚಾಮರಾಜನಗರ, ಸೆ.27– ನಗರದಲ್ಲಿ ತಾಲೂಕು ಕುರುಬರ ಸಂಘ, ಶ್ರೀಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘಗಳ ಸಹಕಾರದಲ್ಲಿ ನಡೆದ ಕನಕ ವಾಣಿಜ್ಯ ಸಂಕೀರ್ಣದ 1 ನೇ ಹಂತದ ಭೂಮಿಪೂಜೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಿದರು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ನಾನು ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಕನಕ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ 1 ಕೋಟಿ ನೀಡಿದ್ದೆ. ಅದರಲ್ಲಿ 75 ಲಕ್ಷ ರೂ.ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ತಾಲೂಕು ಕುರುಬರ ಸಂಘ, ಶ್ರೀಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘ, ಶ್ರೀಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘ ಒಂದು ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಸಂಕೀರ್ಣದ ನಿರ್ಮಾಣಕ್ಕೆ 4 ಕೋಟಿ ಅನುದಾನ ಅವಶ್ಯಕತೆ ಇದೆ. ಚಾಮರಾಜನಗರದಲ್ಲಿ ದಾನಿಗಳು ಹೆಚ್ಚಾಗಿದ್ದಾರೆ ಹಾಗೂ ಸಂಘದಿಂದಲೂ ಹಣವನ್ನು ಸಂಗ್ರಹಿಸಿ ಸಂಕೀರ್ಣದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಇನ್ನುಳಿದ ಹಣವನ್ನು ಕೊಡುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಸಮುದಾಯ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕೆ.ಆರ್.ನಗರ ಶಾಖಾಮಠ ಶ್ರೀಕ್ಷೇತ್ರ ಕಾಗಿನೆಲೆ ಕನಕ ಗುರುಪೀಠದ ಶ್ರೀಶಿವಾನಂದಪುರಿ ಮಹಾಸ್ವಾಮೀಜಿಯವರು ಸಾನ್ನಿಧ್ಯವಹಿಸಿದ್ದರು. ತಾಲೂಕು ಕುರುಬರ ಸಂಘದ ಅಧ್ಯಕ್ಷ ಆರ್ .ಉಮೇಶ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ದರ್ಶನ್ ಧ್ರುವನಾರಾಯಣ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಕ.ರಾ.ಪ್ರ.ಕು.ಸಂಘ ಅಧ್ಯಕ್ಷ ಸುಬ್ರಹ್ಮಣ್ಯ, ನಗರಸಭಾ ಸದಸ್ಯೆ ಲೋಕೇಶ್ವರಿ, ಶ್ರೀಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ನಿಂಗೇಗೌಡ, ತಾಲೂಕು ಕುರುಬರ ಸಂಘದ ಗೌರವ ಅಧ್ಯಕ್ಷ ಎಸ್.ರಾಜಶೇಖರ್, ಉಪಾಧ್ಯಕ್ಷ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಕೆ.ಪಿ.ನಾಗರಾಜು, ಖಜಾಂಚಿ ಕುದೇರು ಲಿಂಗಣ್ಣ ನೌಕರ ಸಂಘದ ಮ.ಬಸವರಾಜು, ಕಾರ್ಯದರ್ಶಿ ಧನಂಜಯ್, ಸಹ ಕಾರ್ಯದರ್ಶಿ ಮಣಿಕಂಠ, ಸಂಘಟನಾ ಕಾರ್ಯದರ್ಶಿಗಳಾದ ಕೆಕೆ ಹುಂಡಿ ನಾಗರಾಜು, ಎಸ್.ಮಹದೇವು, ರೇವಣ್ಣ ಮಹೇಶ್ ಕುಮಾರ್, ಬಿ.ಎಂ.ಉಮೇಶ್, ಶಂಕರ್ ಸಂಘದ ನಿರ್ದೇಶಕರು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಬಾಡಿಗೆಗೆ/ಭೋಗ್ಯಕ್ಕೆ
30x40 2BHK
ಸಸ್ಯಾಹಾರಿಗಳಿಗೆ,
Parking 2 Wheeler
9481830468
6364677230
ಶ್ರೀರಾಂಪುರ, ಬಿಇಎಂಎಲ್ ಲೇಔಟ್

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಪ್ಯಾಕಿಂಗ್ ಕೆಲಸಕ್ಕೆ ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ
ಕುವೆಂಪುನಗರ ಸುತ್ತಮುತ್ತ
9535370330

ಗಿಚ್ಚಿಗಿಲಿಗಿಲಿ ತಂಡದವರಿಂದ ಹಾಸ್ಯ ಕಾರ್ಯಕ್ರಮ
28/09/2023 ಗುರುವಾರ ಮೈಸೂರು ಪುರಭವನದಲ್ಲಿ ಚಂದ್ರಪ್ರಭ, ಬಸವರಾಜ್, ವಿನೋದ್ ಗೊಬ್ಬರಗಾಲರವರಿಂದ ಹಾಸ್ಯ ಕಾರ್ಯಕ್ರಮ. ಬೆಳಿಗ್ಗೆ 10 ಗಂಟೆಗೆ
ಡಾ|| ಕಸ್ತೂರಿಚಂದ್ರು
88676-88676

ಸೈಟು ಮಾರುವವರು ಕೊಳ್ಳುವವರು ಸಂಪರ್ಕಿಸಿ
ಲಾಲ್ ಬಹದ್ದೂರ್ ಶಾಸ್ತ್ರಿನಗರ ಶಾಂತವೇರಿ ಗೋಪಾಲಗೌಡ ನಗರ ಸಪ್ತಮಾತೃಕ KSRTC Layout Any Dimension
9986420232
9945845302

ಶ್ರೀ ಗೌರಿಶಂಕರ ಟ್ರಾವೆಲ್ಸ್
28–10–2023 (7 ದಿನ): ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಸಾರಾನಾಥ್, ಗಯಾ, ಬುದ್ಧಗಯಾ, ಬಾಬಾ ಬೈದ್ಯನಾಥ್ ಇತ್ಯಾದಿ.
30–11–2023 (4 ದಿನ): ಭೀಮಶಂಕರ, ಶನಿಸಿಂಗನಾಪುರ, ಶಿರಡಿ, ನಾಸಿಕ್, ತ್ರ್ಯಂಬಕೇಶ್ವರ, ಘೃಷ್ಣೇಶ್ವರ, ಎಲ್ಲೋರ.
ವಿಮಾನ / ಏಸಿ ಬಸ್ / ಊಟ / ರೂಂ.
Mob: 9620002114

SITES FOR SALE
MORYA SMART CITY
30x40, 30x50, 40x60
MUDA Approved Layout
Attached to KBL Silicon City and MMG Grand City, near Infosys, Mysore.
8217538285, 8951975104

SITE FOR SALE
In MMG Grand City
Near Infosys, Mysore
MUDA Approved Layout
30x40
WEST FACE. Contact:
Mob: 7829779070

ಅಭಿನವ ಗೃಹ ನಿರ್ಮಾಣ ಸಹಕಾರ ಸಂಘ ನಿ, ಮೈಸೂರು
ನಮ್ಮ ಕಛೇರಿಯ ದಿನನಿತ್ಯದ ಲೆಕ್ಕ ಪತ್ರಗಳನ್ನು ನಿರ್ವಹಿಸಲು ಡಿಗ್ರಿ ಹಾಗೂ ಕಂಪ್ಯೂಟರ್ ಜ್ಞಾನವುಳ್ಳ ಒಬ್ಬ ಯುವಕ ಕೆಲಸಕ್ಕೆ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಅಧ್ಯಕ್ಷರು/ಕಾರ್ಯದರ್ಶಿ
9449129606,9980612085
9916117372

WANTED
MARKETING EXECUTIVES are required for a reputed Trading co in mysore. PART TIME / FULL TIME. Experience in Marketing field is preferred. Freshers can also apply. (Age-No bar) Graduates / Undergraduates Send your resume to raghavendrastationeries@gmail.com
9980255772

ಗೋವಾ ಪ್ರವಾಸ
ಹೊರಡುವ ದಿನಾಂಕ: 16 ಅಕ್ಟೋಬರ್ 2023 (3 ದಿನಗಳು). ವೀಕ್ಷಿಸುವ ಸ್ಥಳಗಳು: ಬಾಗ ಬೀಚ್, ದೂಧ್‌ಸಾಗರ್ ಜಲಪಾತ, ಕಲಂಗುಟ್ ಬೀಚ್, ಬಾಸಲಿಕ ಚರ್ಚ್, ಅಗೋಡ ಕೋಟೆ, ಮಂಗೇಶಿ ದೇವಸ್ಥಾನ ಮತ್ತು ನಾಗೇಶಿ ದೇವಸ್ಥಾನ. ಊಟ, ವಸತಿ ಸೇರಿರುತ್ತದೆ.
ಎಲ್ಲಾ ಸೇರಿ ಒಬ್ಬರಿಗೆ ರೂ. 7,500.
Mob: 70222 71023

ಬೇಕಾಗಿದ್ದಾರೆ
ಹನುಮಂತು ಹೋಟೆಲ್‌ಗೆ ಹುಡುಗರು ಬೇಕಾಗಿದ್ದಾರೆ.
ಸಂಬಳ: 12000 ದಿಂದ 14000.
ಬಿ.ಎನ್. ಸ್ಟ್ರೀಟ್, ಮಾರ್ಕೆಟ್ ಬಿಲ್ಡಿಂಗ್, ಮಂಡಿಮೊಹಲ್ಲಾ, ಮೈಸೂರು. ಸಂದರ್ಶನಕ್ಕೆ ಸಂಪರ್ಕಿಸಿ:
Mob: 9611431188

LIFE PARTNER ಆಗಲು GOVT JOB ವರನಿಗೆ ವಧು ಬೇಕಾಗಿದ್ದಾರೆ.
ಲಿಂಗಾಯತ Age: 42/5.41 BA, Govt SDA, Court Employee Salary 50,000/- Well Settled Independent ಇರುವಂತಹ ವರನಿಗೆ ವಿಧವೆ/ವಿಚ್ಛೇದಿತೆ/ನೌಕರಸ್ಥೆ ಯಾವುದೇ ಜಾತಿಯ ಅಭ್ಯಂತರವಿಲ್ಲ ವಧು ಬೇಕಾಗಿದ್ದಾರೆ. (ಸರಳ ವಿವಾಹಕ್ಕೆ) (ಮಕ್ಕಳಿದ್ದರೂ ಪರವಾಗಿಲ್ಲ)
ಬೆಂಗಳೂರು: 9480385742

BANK CHEQUE LOST
Manu K.N. S/o J.Nagaraju No. 718, Basaveshwara Nagara Mysore, 6th Cross, Mysore, Mysuru City, Karnataka, Pincode-570016. I Lost My Friends Orginal State Bank of India Gokulam Branch Two Cheque Leafe on 21-09-2023 near Basavangudi Circle Hebbal Main Road, Mysore Cheque Leafe Numbe 739934 and 739935
Finder will be please contact:
9036861133

ತಮಿಳುನಾಡು ಪ್ರವಾಸ 07 ದಿನಗಳು
ದಿನಾಂಕ: 26ನೇ ಅಕ್ಟೋಬರ್ 2023
ಇಶಾ ಫೌಂಡೇಷನ್ (112 ಅಡಿ ಶಿವನ ಪ್ರತಿಮೆ), ಕನ್ಯಾಕುಮಾರಿ, ನವಗ್ರಹ ದರ್ಶನ (ಒಂದು ದಿನದಲ್ಲಿ), ಪಿಚ್ಚಾವರಂ ಮಾಂಗ್ರೂವ್ ಅರಣ್ಯ, ಅಣ್ಣಾಮಲೈ, ರಾಮೇಶ್ವರ, ಧನುಷ್ಕೋಟಿ, ಮಧುರೈ, ತಂಜಾವೂರು ಬೃಹತ್ ಶಿವ, ಕಂಚಿ, ವೆಲ್ಲೋರ್ ಗೋಲ್ಡನ್ ಟೆಂಪಲ್. ಒಬ್ಬರಿಗೆ ರೂ. 14,500.
7022271023, 9611341351

ವರ ಬೇಕಾಗಿದೆ
ಮೈಸೂರಿನಲ್ಲಿ ವಾಸವಿರುವ 25 ವರ್ಷದ ಸರ್ಕಾರಿ ಬ್ಯಾಂಕ್ ಉದ್ಯೋಗಸ್ಥಳಾಗಿರುವ, ಮರಾಠ ಜನಾಂಗದ ಹುಡುಗಿಗೆ, ಅದೇ ಜಾತಿಯ ಅಥವಾ ಹಿಂದೂ ಜನಾಂಗದ, ಮೈಸೂರಿನಲ್ಲೇ ವಾಸಿಸುತ್ತಿರುವ ಉದ್ಯೋಗದಲ್ಲಿರುವ ಹುಡುಗ ಬೇಕಾಗಿದ್ದಾರೆ.
7899407211

airtel WANTED
Promoters
Salary : 14,0000/-
Incentive up to 5,000/-
Education:PUC+
9148086332

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

RBI ಟೇಬಲ್ ಮೌಲ್ಡ್ ಇಟ್ಟಿಗೆಗಳು
ದೀರ್ಘಕಾಲ ಉಳಿಯುವ ಇಟ್ಟಿಗೆಗಳು
• ಪರಿಶೀಲಿಸಿದ ಗುಣಮಟ್ಟ • ಸುಲಭ ಡೆಲಿವರಿ
• ಅತ್ಯುತ್ತಮ ಧೃಡತೆ • ಕಡಿಮೆ ಬೆಲೆಯಲ್ಲಿ
ಮುಂದಿನ ಪೀಳಿಗೆಗೆ ಸದೃಢವಾದ ಉಡುಗೊರೆ...
82178 93849
98442 24480

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

ಸುವರ್ಣ ಯಾತ್ರ
1) ತಮಿಳುನಾಡು ಪ್ರವಾಸ 6 ದಿನಗಳು 21–10–23
2) ಕೇರಳ ಪ್ರವಾಸ 7 ದಿನಗಳು 22–10–23
3) ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು–26–10–23
4) 2 ಜೋರ್ತಿಲಿಂಗ್ ಸೇರಿ ಕಾಶಿ ಪ್ರವಾಸ 7 ದಿನಗಳು 26–10–23
5) ಪುರಿ ಜಗನ್ನಾಥ ಪ್ರವಾಸ 4 ದಿನಗಳು 26–10–2023
9019462508
9008381022

ಬೇಕಾಗಿದ್ದಾರೆ
ಫ್ಯಾನ್ಸಿ, ಗಿಫ್ಟ್, ಫುಟ್‌ವೇರ್ ಶಾಪ್‌ಗೆ ಸೇಲ್ಸ್ ಕೆಲಸಕ್ಕೆ ಹುಡುಗರು ಮತ್ತು ಸುಪರ್‌ವೈಸರ್ ಕೆಲಸಕ್ಕೆ ಅನುಭವವಿರುವ 25 ವರ್ಷದಕ್ಕಿಂತ ಒಳಗಿನ ಹುಡುಗರು ತಕ್ಷಣ ಬೇಕಾಗಿದ್ದಾರೆ. ಫ್ಲೋರಾ ಫ್ಯಾನ್ಸಿ ಗಿಫ್ಟ್ & ಫುಟ್‌ವೇರ್, ದೇವೇಗೌಡ ಸರ್ಕಲ್ ಮೈಸೂರು
7619270650

SITE FOR SALE
40x60 N/F
No.2, Main Road, KBL Wood Rose Layout, 2Km From T.N.Pura Road, Mysore
9480362658
9481068597

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್
ಆಕರ್ಷಕ ಸಂಬಳ +
ESI, PF, Incentive
ಗಾಂಧಿ ಸರ್ಕಲ್, ಮೈಸೂರು
9980620678

ನೇಮಕಾತಿ
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ:
ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ–25
ವಿಠಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಸಿಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
hr@centuryvitalrecords.com
Mob: 8867064586

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ಬೇಕಾಗಿದ್ದಾರೆ
ಕಂಪೆನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ.
ಊಟ ವಸತಿ ಉಚಿತ,
12000–15000 ಸಂಬಳ;
87629 00282
ಮಂಗಳೂರು

ವಧು ಬೇಕಾಗಿದೆ
60 ವರ ಪ್ರಾಯದ ಬ್ರಾಹ್ಮಣ ಜಾತಿಯ ವರನಿಗೆ 30 ರಿಂದ 40 ವರ್ಷ ಪ್ರಾಯದ ಹುಡುಗಿ ವಿಧವೆ, ವಿಚ್ಛೇದಿತೆ, ಮಕ್ಕಳಿಲ್ಲದ ಸಸ್ಯಹಾರಿ ವಧು ಬೇಕಾಗಿದೆ.
8123559515

FOR LEASE
10 ROOMS
Suitable for PG
Bogadi Post Office Road
9844246875

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

WORK @ HOME
WORK FROM HOME
ಕಂಪನಿಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತೇವೆ
ಕರೆ ಮಾಡಿ ಸರಿಯಾದ
WORK FROM HOME
ಆಯ್ಕೆ ಮಾಡಿ.
8867973998

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

DOCUMENT LOST
Basavaraju B.M., 908, LIG-2, Lakshmikanthanagar, 1st Stage, Mysore-17, I lost the original khatha (name of the Khatha Holder Somashekara Raju, S/o Late M.R. Sundar Raju) of House No. 128, LIG 2nd Stage, Hebbal, Mysuru, while shifting the house.
Finders please contact:
Mob: 984577762

ತಕ್ಷಣ ಬೇಕಾಗಿದ್ದಾರೆ
ಬೋಗಾದಿ, ಗಂಗೋತ್ರಿ ಮತ್ತು ಟಿ.ಕೆ.ಲೇಔಟ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ : 15000/-
9620777819
9620667819

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಹೆಬ್ಬಾಳ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ : 15000/- +W/o (8Hrs)
9880727819
9620667819

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ, ಇಂಗ್ಲೀಷ್, ಹಿಂದಿ). ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್. ಮೊಹಲ್ಲಾ. ಸಂಬಳ; 8000 ರಿಂದ 11000 ರವರೆಗೆ.
Mob: 8150005111

Sudarshan Saur

ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
ATTRACTIVE OFFER
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

SITES FOR SALE
60x40 feet, East facing at Ahad City, Mysuru, 6 km from satellite bus stand, Mahadevapura Road. Beautiful layout, gated community UGD, Electricity, water multiple gardens, tar roads. Contact:
Mob: 9901231117

ಸೋಫಾ ರಿಪೇರ್ ಅಂಡ್ ವರ್ಕ್ಸ್
ಸಂಪರ್ಕಿಸಿ:
9591012944

2 BHK house for rent
Best suitable for commercial office, Training Institute, Doctors Clinic, since it is on the main road. HIG 12, New Kantharaje Urs Road, Sharadadevi nagar, Mysore-570 022. Contact:
Geetanjali: 9481821576
Eshwar: 9035502006

ಡ್ರೈವರ್ ಬೇಕಾಗಿದ್ದಾರೆ
ಅಟೋಮೆಟಿಕ್ ಪ್ರೀಮಿಯಂ ಕಾರನ್ನು ಓಡಿಸಲು, ಅನುಭವ ಹೊಂದಿರಬೇಕು.
ಸಂಬಳ: 20000/–
9606431007

REQUIRED
Girls of 18 to 25 Required for a Home Based cake shop in Gokulam SSLC/PUC Passed or Failed Call
7259722778

AFFIDAVIT
I, C.K. Karthik, legal father of C.K. Surya, residing at 2, Air Force Selection Board, C.V. Complex, Siddartha Nagar (PO), Mysuru-570 011, that I have corrected my son's name from C.K. Surya to Surya Karthik Cirium, on my own free will in front of Notary M. Anantha Murthy on 26-9-2023. The both names C.K. Surya and Surya Karthik Cirium pertain to one the same person. That his date of birth is 24-01-2005. That he will at all times hereafter in all records, deeds and writing and in all proceedings dealing with transactions, prifate as well as under all occasions what soever be known as only Surya Karthik Cirium.
Sd/- C.K. Karthik

Change of Name
I, Sajid Sha, residing at No. 2085, 11th Cross, Rajivnagar 1st Stage, Mysore-570 019, changed my name as M.U. Sajeed Shah, on my own free will, in front of Notary C.R. Seetharam on 23-9-2023. I shall at all times hereafter in all records, deeds & writings and in all proceedings, dealings & transactions, private as well as upon M.U. Sajeed Shah in place & in substitutions of my former name / sur name.
Sd/- M.U. Sajeed Shah

Change of Name
I, K. Jaya, residing at No. 459, Belvathagrama, R.B.I. Post, Note Mudran Nagar, Mysore-570 003, have changed my name as K. Jayamma, on my own free will, in front of Notary L.N. Rajendran on 25-9-2023. I shall be known, called and recognised K. Jayamma hereinafterwards and shall also use and sign my name as such K. Jayamma.
Sd/- K. Jayamma

WANTED
Telecallers - Female
Office work - 10th and above.
AGe: 20 years - 35 years.
Earn 7K upto 10K
M.R. Associates - HDFC Advisors
Saraswathipuram, Mysore
Mob: 9900844455

Document Lost
Syed Mohammed Mayraj, No. 152, 5th Main, Subash Nagara, Mysore, I lost Engg. Mechanics & SOM Marks Card passed during academic year 2016 December, College: GTTC, Mysore, Reg. No. 1190828.
Finders please contact:
Mob: 7349384355

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 9000 ದಿಂದ 10,000ದವರೆಗೆ ಸಮಯ: ಬೆಳಿಗ್ಗೆ 9.30 ರಿಂದ ರಾತ್ರಿ 9 ರವರೆಗೆ. ಸ್ಥಳ: ನಜರ್‌ಬಾದ್ ಮೈಸೂರು. ಸ್ಥಳೀಯರಿಗೆ ಆದ್ಯತೆ
9986311444
9986322444

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಕಂಪನಿಗಳಿಗೆ, ಆಫೀಸ್‌ಗಳಿಗೆ ಮತ್ತು ಶೋರೂಂಗಳಿಗೆ ಕೆಲಸ ಮಾಡಲು 7th, SSLC, PUC, ITI, Diploma, Any Degree Pass/Fail ಆದ ಯುವಕ ಯುವತಿಯರಿಗೆ Telephone attender, Receptionist, Billing, Cashier, Backend Department, Quality, Production, helper, Labelling, Maintenance ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 15,200 ರಿಂದ 43,200 (ESI+PF+OT) ಸೇರಿ. T&C Apply
9036548905, 6364103418

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು
ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜ್ಯೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೇ ಇಲ್ಲ. ಫೋನಿನ ಮೂಲಕ ಪರಿಹಾರ.
9663466548

ಬೇಕಾಗಿದ್ದಾರೆ
OFFICE BOY ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 15000-20000/-
Ph.9380142144

ಬೇಕಾಗಿದ್ದಾರೆ
ಕಂಪ್ಯೂಟರ್ ಮತ್ತು ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿ ಅಥವಾ ಹುಡುಗ ಬೇಕಾಗಿದ್ದಾರೆ.
ಸ್ಥಳ: ಮೈಸೂರು
94809 18242

ಅಂಗಡಿ ಕೆಲಸಕ್ಕೆ ಬೇಕಾಗಿದ್ದಾರೆ
ಮೆಡಿಕಲ್ ಸರಕು ಮಾರಾಟ ಅಂಗಡಿಗೆ ಕೆಲಸಕ್ಕೆ ಬೇಕಾಗಿದ್ದಾರೆ ಮೈಸೂರಿನಲ್ಲಿ ಇರುವವರು ಬಂದು ನಮ್ಮನ್ನು ಹಾಗೂ ದ್ವಿಚಕ್ರವಾಹನ ಡ್ರೈವಿಂಗ್ ಲೈಸೆನ್ಸ್ ಪಡೆದಿರುವವರು ಕೂಡ ಬಂದು ಭೇಟಿಯಾಗಬಹುದು. ಸಂದರ್ಶನ ವೇಳೆ: ಸಂಜೆ 3 ಗಂಟೆಯಿಂದ 6 ಗಂಟೆವರೆಗೆ ಮಾತ್ರ ಶ್ರೀನಿವಾಸ ಇಮೇಜ್ ಪ್ರಾಡೆಕ್ಟ್ಸ್ ಮೋರ್ ಮೆಗಾ ಮಾರ್ಟ್ ಹತ್ತಿರ, ಶಿವರಾಂಪೇಟೆ, ಮೈಸೂರು
9902902530

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

For Sale
1) 30x40 site 16 lakhs including Registration Near New RT Nagar
2) 30x40 E Preethi layout Srirampura
3) 30x40 S/WSky Top layout yelawala
4) 20x30 G+2 House RK Nagar and Dattagalli
5) 20x 30 Ground +1 New House Kandaya Srirampura
6) 18x40 E 40 feet road Kuvempu nagar
Prakruthi Properties
9538690359,9035990359

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್: 9945911118
ಅನಿಲ್: 7026996123
ARTHOR SERVICES PVT.LTD
NO. L-89, 2nd Floor, M Block, Opp. Karuna Hospital, Kuvempunagar, Mysore-570023

WANTED
1. Lady Searcher
Timings - 11Am to 9pm
2. Security Gurads
Educated to 1. Gundlupet 2. R gate 3. Hebbal Industrial Area
suitable candidates contact
9686422400 I 9242406261

WANTED
1. Accountant (Male)
A. Experience - 1 to 2 years
B. Skills: Tally, Erp-9, Gst, M.S Office
2. Marketing Executives (M)
A. Experience - 1 to 2 years
B. Education: Any Degree
C. Good salary + TA.DA+Incentives
3. Bolero Driver
Sri sai ram Furnitures Distributor, Vijayanagar, 2nd stage, Mysore
8217411158

NEW HOUSE FOR SALE
30x40, E/F,
Ground and First, University Layout, Near Srirampura Ring Road, Mysore. Contact:
98456 23152

FOR RENT- 1 BHK HOUSE & 2 SHOPS
Mysore Vidyaranyapuram 4th Main, 27th Cross Corner, Ground floor, 894/A House, North facing having all facilities Vehicle Parking, Solar, Ward Robes, Water Sump, Automatic Motor Pump, Water Tank, Show Case, 2 Fans fitted, Separate Washing Stone. 2 shops west facing measuring 10 x 10 feet available near Sterling theatre.
9448872684 I 9900079871

3 BHK DUPLEX HOUSE FOR SALE
3 Yrs Old, N/E Corner, Park Facing, 27x40, MUDA App, Panchacharya layout, Vijayanagar 4th Stage, Mysuru, Near SVEI School
Price - Rs 1.18 cr
8660105902

SITE FOR SALE
40X60
SITE SALE
Suvarna Nagar
(Gaddige Road)
9880273834

ಸೆಕ್ಯೂರಿಟಿಗಾರ್ಡ್ ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ಕೈಗಾರಿಕ ಪ್ರದೇಶದಲ್ಲಿ ಕೆಲಸಕ್ಕೆ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
15000/- ಸಂಬಳ
ESI+PF ಇರುತ್ತದೆ.
9986501873
9611064640

SITE FOR SALE
30x40, 20x40, 30x35
Sites, Bank Loan upto 80%, Near Gurur Bus Stop, Ramabainagar, Mysore.
DTCP approved
(Corporation limits)
1.5 Kms from JP Nagar Ring Road
8660105902

100% TEAK WOOD FACTORY FINISH DOORS
@ DEPOT RATES

10 YEARS WARRANTY
www.ssbuildmart.com
9901291267
9845426862

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL 99012 91267
98454 26862

ಅನುಬಂಧ.ಕಾಂ
ಎಲ್ಲಾ ಜಾತಿಯ ಸುಂದರ ಶ್ರೀಮಂತ ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ
9448229184
7899625268

HOUSE FOR RENT
2BHK, Varanda Hall, Dining, Pooja Room, Attached bath to one BHK, Solar Facility Can Parking inside Compound 40x80 Site E/F # 1392, C&D Block, Kuvempunagar, Mysore-23 Behind Jagadambha Petrol Bunk.
(Broker Excuse)
9449253753

ಬೇಕಾಗಿದ್ದಾರೆ
ಹೋಲ್‌ಸೇಲ್ ಮೆಡಿಕಲ್ ಏಜೆನ್ಸಿಗೆ ಡೆಲಿವರಿ ಬಾಯ್ಸ್ ಹಾಗೂ ಆರ್ಡರ್ ಬುಕ್ಕಿಂಗ್ ಮಾಡಿಕೊಳ್ಳಲು ಹುಡುಗರು ಬೇಕಾಗಿದ್ದಾರೆ. ಮೆಡಿಕಲ್ ಕ್ಷೇತ್ರದಲ್ಲಿ ಅನುಭವ ಇರುವವರಿಗೆ ಮೊದಲ ಆದ್ಯತೆ
9611665145

ಮನೆಯಿಂದಲೇ ಕೆಲಸ
ನಿಮ್ಮ ಬಿಡುವಿನ ವೇಳೆಯಲ್ಲಿ ಕಥಾ ಪುಸ್ತಕ ಬರವಣಿಗೆ ಫಾರಂ ಫಿಲ್ಲಿಂಗ್ ಡಾಟಾ ಎಂಟ್ರಿ ಮೊಬೈಲ್ ವಾಟ್ಸಾಪ್ ಟೈಪಿಂಗ್ ಕೆಲಸ ಮಾಡಿ ಗಳಿಸಿ ವಾರಕ್ಕೆ 15000 ದಿಂದ 25000 ವರೆಗೆ ಪ್ಯಾಂಕಿಂಗ್ ಕೆಲಸಗಳು ಲಭ್ಯವಿದೆ
7996573393

ಹೊಸ ಮನೆ ಮಾರಾಟಕ್ಕಿದೆ
40x70, W/N ಫೇಸ್,
30 ಚದುರ ಮನೆ, 4BHK
ಮಹದೇವಪುರ, ನ್ಯಾಯಾಧೀಶರ ವಸತಿ ಗೃಹದ ಹಿಂಭಾಗ, Near JP ನಗರ ರಿಂಗ್ ರಸ್ತೆ, Bank Loan ದೊರೆಯುತ್ತದೆ. Rs.1.10 Cr.
9342288281

ಹೋಮ್ ನರ್ಸಿಂಗ್ ಸೇವೆ & ಬೇಬಿಕೇರ್
ವಯೋವೃದ್ಧರನ್ನು ಮತ್ತು ಅನಾರೋಗ್ಯ ವಯೋವೃದ್ಧರನ್ನು 24x7 ಮನೆಯಲ್ಲಿಯೇ ನೋಡಿಕೊಳ್ಳಲು Care Taker ಬೇಕಾಗಿದ್ದಲ್ಲಿ ಕಳಿಸಿಕೊಡಲಾಗುವುದು.
ನಮ್ಮ ಸೇವೆಗಳು:
1) Home Nursing, 2) Baby Care 3) Hospital attender Service, 4)Stroke Patient Care, 5) Physiotherapy, 6) Cook, Driver, 7) Cancer Patient Care, 8) Tracheostomy Patient Care, 9) Oxygen Patient Care ಇತ್ಯಾದಿ ಎಲ್ಲಾ ತರಹದ ಸೇವೆಗಳನ್ನು ನೀಡಲು ನುರಿತ ಹೋಮ್ ನರ್ಸ್‌ಗಳನ್ನು ಕಳಿಸಿಕೊಡಲಾಗುವುದು.
6361483331,9141308669

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ. Salary + OT 18800/- to 78000/-
9035022214
9935022290

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಒಂದನೇ ಪುಟದಿಂದ

ನಮ್ಮ ಜಾತ್ಯಾತೀತ ನಿಲುವು ಬದಲಾಗಲ್ಲ

ಮಂಗಳೂರು ಘಟನೆಯೊಂದನ್ನು ನಿದರ್ಶನವಾಗಿ ಪ್ರಸ್ತಾಪಿಸಿದರು. ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರೊಂದಿಗೆ ರಾಜ್ಯದ ರಾಜಕೀಯ ಸ್ಥಿತಿಗತಿ ಬಗ್ಗೆ ಚರ್ಚಿಸಿದ ಬಳಿಕ ನಮ್ಮ ಶಾಸಕರೊಂದಿಗೆ ಸಮಾಲೋಚಿಸಿ ಬಿಜೆಪಿಯೊಂದಿಗಿನ ಮೈತ್ರಿ ವಿಚಾರದಲ್ಲಿ ಮುಂದುವರೆಯಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅನುಮತಿ ನೀಡಲಾಗಿದೆ. ಮೈತ್ರಿ ಕುರಿತ ಮಾತುಕತೆ ಒಂದು ಹಂತ ತಲುಪಿದೆ. ಇನ್ನೂ ಈ ವಿಚಾರವಾಗಿ ಪ್ರಧಾನಿ ಅವರೊಂದಿಗೆ ಮಾತುಕತೆ ನಡೆಸಿಲ್ಲ. ಅಲ್ಲದೆ, ಲೋಕಸಭಾ ಚುನಾವಣೆಯ ಸೀಟು ಹಂಚಿಕೆ ಬಗ್ಗೆ ಚರ್ಚೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಎರಡೂ ಪಕ್ಷಗಳ ಸಂಸದೀಯ ಮಂಡಳಿ ಸಭೆಯಲ್ಲಿ ಚರ್ಚೆಯಾದ ಬಳಿಕ ಮೈತ್ರಿ ವಿಚಾರ ರೂಪುರೇಷೆ ಸಿದ್ಧವಾಗಲಿದೆ. ಸೀಟು ಹಂಚಿಕೆಯೂ ಆಗಲಿದೆ ಎಂದು ಹೇಳಿದರು. ಅಲ್ಪಸಂಖ್ಯಾತರ ರಕ್ಷಣೆಯನ್ನು ಜೆಡಿಎಸ್ ಹಿಂದೆಯೂ ಮಾಡಿದೆ. ಮುಂದೆಯೂ ಮಾಡಲಿದೆ. ಅವಕಾಶವಾದಿ ರಾಜಕಾರಣ ಮಾಡುವುದಿಲ್ಲ. ಪ್ರಾದೇಶಿಕ ಪಕ್ಷದ ಉಳಿವಿಗಾಗಿ ಮೈತ್ರಿ ನಿರ್ಧಾರ ಮಾಡಬೇಕಾಯಿತು.

ಕೇರಳದ ನಮ್ಮ ಸ್ನೇಹಿತರು ಕರ್ನಾಟಕದಲ್ಲಿ ಪಕ್ಷವನ್ನು ಉಳಿಸಿ ಮುನ್ನಡೆಸುವುದಾದರೆ, ರಾಜ್ಯಾಧ್ಯಕ್ಷ ಸ್ಥಾನ ಬಿಟ್ಟುಕೊಡಲು ಸಿದ್ಧ ಎಂದರು. ಮೈತ್ರಿ ಮಾಡಿಕೊಳ್ಳುವ ಪರಿಸ್ಥಿತಿ ಏಕೆ ನಿರ್ಮಾಣವಾಯಿತು. ಇದಕ್ಕೆ ಯಾರು ಕಾರಣ ಎಂದು ಪ್ರಶ್ನಿಸಿದ ಅವರು, ಬಲವಂತವಾಗಿ ಕಾಂಗ್ರೆಸ್ ನಾಯಕರು ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮೈತ್ರಿ ಸರ್ಕಾರದ ಮುಖ್ಯಮಂತ್ರಿ ಮಾಡಿದರು. ಆದರೆ, 17 ಮಂದಿ ಶಾಸಕರನ್ನು ಮುಂಬೈಗೆ ಕಳುಹಿಸಿ ಮೈತ್ರಿ ಸರ್ಕಾರ ತೆಗೆದು, ಬಿಜೆಪಿ ಸರ್ಕಾರ ರಚನೆಗೆ ಯಾರು ಕಾರಣ ಎಂದು ಪ್ರಶ್ನಿಸಿದರು. ರಾಜ್ಯ ಮತ್ತು ರಾಷ್ಟ್ರದಲ್ಲಿ ಜಾತ್ಯತೀತ ಶಕ್ತಿಗಳನ್ನು ದುರ್ಬಲಗೊಳಿಸಲು ಕಾಂಗ್ರೆಸ್ ಯತ್ನಿಸಿರುವುದಕ್ಕೆ ಹತ್ತು ಹಲವು ನಿದರ್ಶನಗಳನ್ನು ನೀಡಬಲ್ಲೆ.

ಬಿ.ಎಂ.ಫಾರೂಕ್ ಅವರು ರಾಜ್ಯ ಸಭೆ ಚುನಾವಣೆಗೆ ಸ್ಪರ್ಧಿಸಿದಾಗ 7 ಶಾಸಕರು ಪಕ್ಷಾಂತರ ಮಾಡಿ ಸೋಲಿಸಿದವರು ಯಾರು? ಕಾಶ್ಮೀರದಲ್ಲಿ ಫಾರೂಕ್ ಅಬ್ದುಲ್ ಸರ್ಕಾರ ತೆಗೆದದ್ದು ಯಾರು? ಎಂದು ವಾಗ್ದಾಳಿ ನಡೆಸಿದ ಅವರು ಜಾತ್ಯಾತೀತ ನಿಲುವಿನ ಬಗ್ಗೆ ಕಾಂಗ್ರೆಸ್‌ನಿಂದ ಪಾಠ ಕಲಿಯಬೇಕೆ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ನಾಗಾಲೋಟ ಎಲ್ಲಿದೆ ಎಂದು ಸುದ್ದಿಗಾರರನ್ನೇ ಪ್ರಶ್ನಿಸಿದ ಗೌಡರು ಕಾವೇರಿಯಲ್ಲಿ ಓಡುತ್ತಿದೆ, ಓಡುತ್ತಿದೆ ಎಂದು ಪುನರುಚ್ಚಾರ ಮಾಡಿದರು. ಜಲಸಂಪನ್ಮೂಲ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾವೇರಿ ನೀರು ನಿರ್ವಹಣಾ ಸಮಿತಿ ಶಿಫಾರಸ್ಸು ಸಂತಸ ತಂದಿರುವುದಾಗಿ ಹೇಳಿದ್ದಾರೆ. ಕಾವೇರಿ ವಿಚಾರದಲ್ಲಿ ನಾಡಿನ ಹಾಗೂ ರೈತರ ಹಿತರಕ್ಷಣೆಗೆ ಹೋರಾಡುತ್ತಾ ಬಂದಿದ್ದೇನೆ. ಮುಂದಿಯೂ ಹೋರಾಡುತ್ತೇನೆ. ಸೂಕ್ತ ಸಂದರ್ಭದಲ್ಲಿ ಆ ಬಗ್ಗೆ ಮಾತನಾಡುತ್ತೇನೆ ಎಂದರು.

ಸಂತ್ರಸ್ತರ ಕುಟುಂಬಕ್ಕೆ ಸರ್ಕಾರಿ ನೌಕರಿ

ಪ್ರಕರಣ ಎಂದು ಪರಿಗಣಿಸಬಹುದು ಎಂದರು. ಈ ಹಂತದಲ್ಲಿ ಸಿದ್ದ ರಾಮಯ್ಯ ಹೌದು, ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಖಾಯಂ ಸರ್ಕಾರಿ ಉದ್ಯೋಗ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ದೂರುಗಳು ಬರಬಾರದು: ಜೂನ್ ನಿಂದ ಆಗಸ್ಟ್‌ವರೆಗೂ ಅಗತ್ಯವಾದಷ್ಟು ಮಳೆ ಅಗದ ಕಾರಣದಿಂದ ರಾಜ್ಯ ದಲ್ಲಿ ಬರ ಪರಿಸ್ಥಿತಿ ಇದೆ. 236 ತಾಲೂಕುಗಳಲ್ಲಿ 161 ತಾಲೂಕಿನಲ್ಲಿ ತೀವ್ರ ಬರಗಾಲ, 34 ತಾಲೂಕುಗಳಲ್ಲಿ ಸಾಧಾರಣ ಬರ ಎಂದು ಘೋಷಿಸಲಾಗಿದೆ. ಇನ್ನಷ್ಟು ತಾಲೂಕು ಗಳು ಬರದ ಪಟ್ಟಿಗೆ ಸೇರುವ ಪರಿಸ್ಥಿತಿ ಬಂದಿದೆ ಎಂದರು. ಹಣಕ್ಕೆ ಯಾವುದೇ ಕೊರತೆ ಇಲ್ಲ. ಅಧಿಕಾರಿಗಳು

ಕುಡಿಯುವ ನೀರಿನ ಸಮಸ್ಯೆ ಆಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕರಿಂದ ಯಾವುದೇ ದೂರುಗಳು ಬರದಂತೆ ಕಾರ್ಯ ನಿರ್ವಹಿಸಬೇಕು. ಜಿಲ್ಲಾಧಿಕಾರಿ, ಸಿಇಓ ಮತ್ತು ಉಸ್ತುವಾರಿ ಕಾರ್ಯದರ್ಶಿಗಳು ಈ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು. ಬರಗಾಲದ ಕಾರಣದಿಂದ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ ಹೀಗಾಗಿ ವಿದ್ಯುತ್ ಉತ್ಪಾದನೆ ಹಾಗೂ ಸರಬರಾಜಿನಲ್ಲಿ ಕೊರತೆಯಾಗದಂತೆ ಕ್ರಮ ಕೈಗೊಳ್ಳಬೇಕು. ಯಾರೊಬ್ಬರು ಕೆಲಸ ಹುಡುಕಿಕೊಂಡು ವಲಸೆ ಹೋಗದಂತೆ ಕ್ರಮ ಕೈಗೊಳ್ಳಬೇಕು. ನರೇಗಾ ಯೋಜನೆಯನ್ನು ಬಳಸಿಕೊಳ್ಳಬೇಕು. 150ದಿನ ಕೆಲಸ ನೀಡಬೇಕು. ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗಬಾರದು, ರೋಗಗಳು ಬಾರದಂತೆ ಮುಂಜಾಗ್ರತೆ ವಹಿಸಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

ಬಲವಂತ ವಸೂಲಿಗೆ ತಡೆ ಹಾಕಿ: ಖಾಸಗಿಯಾಗಿ ಸಾಲ ನೀಡಿದವರು ರೈತರಿಗೆ ಬಲವಂತವಾಗಿ ವಸೂಲಿ ಮಾಡದಂತೆ ಕ್ರಮ ವಹಿಸಬೇಕು. ಬರ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಶೋಷಣೆ ಮಾಡದಂತೆ ಕಾರ್ಯನಿರ್ವಹಿಸಬೇಕು. ಈ ಎಲ್ಲಾ ಸೂಚನೆಗಳನ್ನು ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಾರ್ವಜನಿಕರಿಂದ ದೂರು ಬಂದರೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸಭೆಯಲ್ಲಿ ಸಚಿವರಾದ ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ಡಾ.ತಿಮ್ಮಯ್ಯ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಜಿಲಾಧಿಕಾರಿ ಸಿ.ಟಿ. ಶಿಲ್ಪನಾಗ್, ಎಸ್‌ಪಿ ಪದ್ಮಿನಿ ಸಾಹು, ಎಡಿಸಿ ಗೀತಾ ಹುಡೇದ, ಸಿಇಓ ಆನಂದ ಪ್ರಕಾಶ್ ಮೀನಾ ಇದ್ದರು.

ಮೈಸೂರಲ್ಲಿ ಕಾವೇರುತ್ತಿದೆ ಕಾವೇರಿ ಪರ ಹೋರಾಟ

ಜೆಡಿಎಸ್, ಕರ್ನಾಟಕ ಪ್ರಜಾ ಪಾರ್ಟಿ, ಕಾವೇರಿ ಕ್ರಿಯಾ ಸಮಿತಿ ಕಾರ್ಯಕರ್ತರಿಂದ ಸರಣಿ ಪ್ರತಿಭಟನೆ



ಜೆಡಿಎಸ್ ಕಾರ್ಯಕರ್ತರಿಂದ ಗಾಂಧಿ ಸ್ಕ್ವೇರ್‌ನಲ್ಲಿ ಪ್ರತಿಭಟನೆ



ಅರಮನೆ ಉತ್ತರ ದ್ವಾರದಲ್ಲಿ ಕಾವೇರಿ ಕ್ರಿಯಾ ಸಮಿತಿ ಸದಸ್ಯರ ಧರಣಿ



ಕೋರ್ಟ್ ಮುಂದೆ ಕರ್ನಾಟಕ ಪ್ರಜಾ ಪಾರ್ಟಿ ಕಾರ್ಯಕರ್ತರ ಅಂಚೆ ಪತ್ರ ಚಳವಳಿ

ಮೈಸೂರು, ಸೆ.27(ಆರ್‌ಕೆ)– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಸರ್ಕಾರದ ಕ್ರಮ ಖಂಡಿಸಿ ಮೈಸೂರಲ್ಲಿ ವಿವಿಧ ಸಂಘಟನೆಗಳ ಆಕ್ರೋಶ ಭುಗಿಲೆದ್ದಿದೆ.

ಮೈಸೂರು ನಗರ (ಜಿಲ್ಲಾ) ಜಾತ್ಯಾತೀತ ಜನತಾ ದಳದ ನೂರಾರು ಕಾರ್ಯಕರ್ತರು ಗಾಂಧಿ ಸ್ಕ್ವೇರ್‌ನಲ್ಲಿ ಇಂದು ಪ್ರತಿಭಟನಾ ಧರಣಿ ನಡೆಸಿದರು. ಮಳೆ ಬಾರದೇ ಜಲಾಶಯಗಳು ಬರಿದಾಗಿ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುವ ಸ್ಥಿತಿ ತಲುಪುತ್ತಿದ್ದರೂ, ಸರ್ಕಾರ ರಾಜ್ಯದ ಜನರ ಹಿತ ಕಾಯದೇ ಕೇಂದ್ರದಲ್ಲಿ ಅಧಿಕಾರ ಹಿಡಿಯಲು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಓಲೈಸಲು ನೀರು ಹರಿಸುತ್ತಿರುವುದರಿಂದ ರೈತರ ಬೆಳೆಗಳು ಒಣಗುತ್ತಿವೆ ಎಂದು ಆರೋಪಿಸಿದ ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಬರ ಪರಿಸ್ಥಿತಿ ಹಾಗೂ ಜಲಾಶಯಗಳ ನೀರಿನ ಪ್ರಮಾಣದ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಅಗತ್ಯ ಮಾಹಿತಿ ನೀಡಿ ಮನವರಿಕೆ ಮಾಡಿಕೊಟ್ಟು ತಕ್ಷಣವೇ ನೀರು ಹರಿಸುತ್ತಿರುವುದನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿದರು. ರೈತರು, ಕನ್ನಡ ಪರ ಸಂಘಟನೆಗಳು, ಕಾವೇರಿ ಹೋರಾಟಗಾರರು ನಿರಂತರವಾಗಿ ಆಕ್ರೋಶ ವ್ಯಕ್ತಪಡಿಸುತ್ತಿದ್ದರೂ, ಅವರ ಸಂಕಷ್ಟ ಆಲಿಸದೇ ತಮಿಳುನಾಡಿಗೆ ನೀರು ಬಿಡುತ್ತಿರುವ ಸರ್ಕಾರ ರಾಜ್ಯದ ಜನರ ಹಿತ ಕಡೆಗಣಿಸುತ್ತಿದ್ದು, ಒಂದು ವೇಳೆ ಕ್ರಮ ವಹಿಸದಿದ್ದಲ್ಲಿ ಕಾವೇರಿ ಜಲಾನಯನ ಪ್ರದೇಶ ಸೇರಿದಂತೆ ರಾಜ್ಯದಾದ್ಯಂತ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಧರಣಿ ನಿರತರು ಎಚ್ಚರಿಕೆ ನೀಡಿದರು.

ಜೆಡಿಎಸ್ ನಗರಾಧ್ಯಕ್ಷ ಕೆ.ಟಿ. ಚೆಲುವೇಗೌಡ, ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮಾಜಿ ಶಾಸಕರಾದ ಅಶ್ವಿನ್‌ಕುಮಾರ್, ಕೆ.ಮಹದೇವ, ಮಾಜಿ ಮೇಯರ್‌ಗಳಾದ ಆರ್. ಲಿಂಗಪ್ಪ, ಎಂ.ಜೆ. ರವಿಕುಮಾರ್, ನಗರಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು, ಲಕ್ಷ್ಮೀ ಶಿವಣ್ಣ, ಮುಖಂಡರುಗಳಾದ ಪಿ. ಗಂಗಾಧರಗೌಡ, ಮಂಜುನಾಥ, ಬಾಲು, ಆರ್. ಮುದ್ದುರಾಜ್, ಪಿ. ಕುಮಾರ್, ಡಾ. ನರಸಿಂಹೇಗೌಡ, ರವಿಚಂದ್ರೇಗೌಡ ಸೇರಿದಂತೆ ಹಲವರು ಪ್ರತಿಭಟನಾ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಕಾವೇರಿ ಕ್ರಿಯಾ ಸಮಿತಿ: ಕಳೆದ ಒಂದು ವಾರದಿಂದ ಕಾವೇರಿ ನೀರಿಗಾಗಿ ಹೋರಾಟ ನಡೆಸುತ್ತಿರುವ ಕಾವೇರಿ ಕ್ರಿಯಾ ಸಮಿತಿ ಸದಸ್ಯರು ಇಂದು ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ತೀವ್ರ ಪ್ರತಿಭಟನೆ ನಡೆಸಿದರು. ಸರ್ಕಾರವು ಕನ್ನಡಿಗರಿಗೆ, ಕಾವೇರಿ ಹೋರಾಟಗಾರರ ಪ್ರತಿಭಟನೆಗೆ ಮನ್ನಣೆ ನೀಡದೇ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಖಂಡನೀಯ ಎಂದು ಧರಣಿ ನಿರತರು ಆರೋಪಿಸಿದರು. ಈ ನಡುವೆ ತಮಗೆ ಅಕ್ಟೋಬರ್ 10ರವರೆಗೆ ಪ್ರತಿಭಟನೆ ನಡೆಸಲು ಒಂದು ಸ್ಥಳ ನಿಗದಿ ಮಾಡಿಕೊಡಬೇಕೆಂದು ಮನವಿ ಮಾಡಿದ ಕ್ರಿಯಾ ಸಮಿತಿಯ ಜಯಪ್ರಕಾಶ್, ಎಂ.ಜೆ. ಸುರೇಶ್‌ಗೌಡ, ಎಂ. ಮೋಹನ್‌ಕುಮಾರ್‌ಗೌಡ, ಮೂಗೂರು ನಂಜುಂಡಸ್ವಾಮಿ, ಮೆಲ್ಲಹಳ್ಳಿ ಮಹದೇವಸ್ವಾಮಿ ಹಾಗೂ ಡಿಸಿಪಿ ಎಂ. ಮುತ್ತುರಾಜ್ ನಡುವೆ ಮಾತಿನ ಚಕಮಕಿ ನಡೆಯಿತು. ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯೇ ಅವಕಾಶ ನೀಡಬೇಕೆಂದು ಕ್ರಿಯಾ ಸಮಿತಿ ಸದಸ್ಯರು ಒತ್ತಾಯಿಸಿದರಾದರೂ, ದಸರಾ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಆ ಸ್ಥಳದಲ್ಲಿ ಅನುಮತಿ ನೀಡಲಾಗುವುದಿಲ್ಲ, ಬದಲಾಗಿ ಗಾಂಧಿ ಸ್ಕ್ವೇರ್‌ನಲ್ಲಿ ಮಾಡಿಕೊಳ್ಳಿ ಎಂದು ಮುತ್ತುರಾಜ್ ಹೇಳಿದರೂ ಕೇಳದೇ ಪಟ್ಟು ಹಿಡಿದ ಕಾರಣ ಮಾತಿನ ಚಕಮಕಿ ನಡೆದು ಕೆಲ ಕಾಲ ಸ್ಥಳದಲ್ಲಿ ಬಿಗುವಿನ ವಾತಾವರಣ ಉಂಟಾಗಿತ್ತು. ಪ್ರತಿಭಟನೆ ನಡೆಸುತ್ತಿದ್ದ ವೇಳೆ ಆ ಮಾರ್ಗ ಬಂದ ಮೇಯರ್ ಶಿವಕುಮಾರ್ ಅವರೂ ಕಾವೇರಿ ಕ್ರಿಯಾ ಸಮಿತಿ ಸದಸ್ಯರ ಹೋರಾಟದಲ್ಲಿ ಪಾಲ್ಗೊಂಡು, ಬೆಂಬಲ ನೀಡಿದರು.

ಕರ್ನಾಟಕ ಪ್ರಜಾ ಪಾರ್ಟಿ: ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಪ್ರಜಾಪಾರ್ಟಿ (ರೈತ ಪರ್ವ) ಕಾರ್ಯಕರ್ತರು ಇಂದು ಕೋರ್ಟ್ ಎದುರು ಪ್ರತಿಭಟನೆ ನಡೆಸಿದರಲ್ಲದೆ ಅಂಚೆ ಪತ್ರ ಚಳವಳಿ ಮಾಡಿದರು. ಕೆಪಿಪಿ ನಗರಾಧ್ಯಕ್ಷ ಆರ್. ಶ್ರೀನಿವಾಸ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪ್ರಧಾನಮಂತ್ರಿಗಳು ಮಧ್ಯೆ ಪ್ರವೇಶಿಸಿ ಸಂಕಷ್ಟ ಸೂತ್ರವನ್ನು ಜಾರಿಗೊಳಿಸಿ ಕಾವೇರಿ ವಿವಾದಕ್ಕೆ ಶಾಶ್ವತ ಪರಿಹಾರ ಒದಗಿಸುವಂತೆಯೂ ಅವರು ಅಂಚೆ ಪತ್ರದ ಮೂಲಕ ಒತ್ತಾಯಿಸಿದರು.

ಮಾಜಿ ಮುಖ್ಯಮಂತ್ರಿ ಆರ್.ಗುಂಡೂರಾವ್ ಜನ್ಮ ದಿನಾಚರಣೆ



ಮೈಸೂರು, ಸೆ. 27– ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುತ್ತಿದ್ದ ದಿ.ಆರ್ ಗುಂಡೂರಾವ್, ನೇರ ನುಡಿಯ ಧೈರ್ಯಶಾಲಿ ನಾಯಕ ಎಂದೇ ಜನಮಾನಸದಲ್ಲಿ ಹೆಸರಾಗಿದ್ದರು. ಆಡಳಿತದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದವರಲ್ಲಿ ಗುಂಡೂರಾವ್ ಕೂಡ ಒಬ್ಬರು. ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಬೆಂಗಳೂರು ಹೊರಗೆ ಸಚಿವ ಸಂಪುಟ ಸಭೆ ನಡೆಸುವ ಮೂಲಕ ಆಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವ ಮಾದರಿ ಹಾಕಿಕೊಟ್ಟಿದ್ದರು ಎಂದು ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ತಿಳಿಸಿದರು

ಮೈಸೂರಿನ ಕಲಾಮಂದಿರ ಮುಂಭಾಗ ಗುಂಡೂರಾವ್ ಅಭಿಮಾನಿ ಬಳಗದ ವತಿಯಿಂದ ಮಾಜಿ ಮುಖ್ಯಮಂತ್ರಿ ಆರ್.ಗುಂಡೂರಾವ್ ಅವರ 86ನೇ ಜನ್ಮದಿನ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಸಿಹಿ ವಿತರಿಸಿ ಅವರು ಮಾತನಾಡಿದರು.

ಗುಂಡೂರಾವ್ ಅಭಿಮಾನಿ ಬಳಗದ ಅಧ್ಯಕ್ಷ ವಿನಯ್ ಕಣಗಾಲ್ ಮಾತನಾಡಿ, ಮಾಜಿ ಮುಖ್ಯಮಂತ್ರಿ ಆರ್.ಗುಂಡೂರಾವ್ ಅವರಿಗೆ ಮೈಸೂರಿನೊಂದಿಗೆ ಇದ್ದ ಅವಿನಾಭಾವ ಸಂಬಂಧ ಹಾಗೂ ನೀಡಿರುವ ಕೊಡುಗೆಗಳ ಬಗ್ಗೆ ಹೇಳಿದರು.

ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ ಬಸಪ್ಪ, ಗುಂಡೂರಾವ್ ಅಭಿಮಾನಿ ಬಳಗದ ಅಧ್ಯಕ್ಷ ವಿನಯ್ ಕಣಗಾಲ್, ವರುಣ ಮಹದೇವ್, ರಾಕೇಶ್, ಎಸ್.ಎನ್.ರಾಜೇಶ್, ರವಿಚಂದ್ರ, ಲೋಕೇಶ್, ಯೋಗೇಶ್ ಯಾದವ್, ಬೀರೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಹಲಾಯ್ ಮೆಮನ್ ಜಮಾತ್‌ನಿಂದ ತಬ್ರುಕ್ ಕಾರ್ಯಕ್ರಮ

ಮೈಸೂರು, ಸೆ. 27– ಮೈಸೂರಿನ ಹಲಾಯ್ ಮೆಮನ್ ಜಮಾತ್ ವತಿಯಿಂದ ಸೆ. 28ರಿಂದ 30ರವರೆಗೆ ಈದ್ ಮೀಲಾದ್–ಉನ್–ನಬಿ ಅಂಗವಾಗಿ ತಬ್ರುಕ್ (ಅನ್ನದಾನ) ಕಾರ್ಯಕ್ರಮ ಏರ್ಪಡಿಸಲಾಗಿದೆ.

ಹಲಾಯ್ ಮೆಮನ್ ಜಮಾತ್ ಅಧ್ಯಕ್ಷ ಮನ್ಸೂರ್ ಮಜೀದ್ ಸೇಠ್ ಖುಶಾಲಿ, ಜಾಮಿಯ ವಬಸ್ತಕಾನ್ ಸಿಲ್‌ಸಿಲಾಹ ಜಹಾಂಗೀರಿಯ ಮತ್ತು ಖುಶಾಲಿಯ ಭಕ್ತಾದಿಗಳು ಪ್ರತಿ ವರ್ಷದಂತೆ ಜಂಟಿಯಾಗಿ ಪ್ರವಾದಿ ಮೊಹಮ್ಮದ್ ಅವರ ಜನ್ಮದಿನದ ಅಂಗವಾಗಿ ಜಶ್ನೆ ಈದ್ ಮೀಲಾದ್–ಉನ್–ನಬಿ ಅನ್ನು ಆಚರಿಸಲಾಗುತ್ತಿದೆ. ಇದರ ಅಂಗವಾಗಿ ಸೆ.28ರಿಂದ 30 ರವರೆಗೆ ಸಂಜೆ 3 ಗಂಟೆಗೆ ಲ್ಯಾಂಗರ್–ಇ–ಆಮ್ (ದಾವತ್) ತಬ್ರುಕ್ ಅನ್ನದಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸೆ.28ರಂದು ಸಂಜೆ 7 ಗಂಟೆಗೆ ರಿಫಾ ಫಂಕ್ಷನ್ ಹಾಲ್, ಮುಸ್ಲಿಂ ಬಾಲಕಿಯರ ಅನಾಥಾಲಯ, ಅಶೋಕ ರಸ್ತೆ, ಮೈಸೂರು ಇಲ್ಲಿ ಫತಾಖಾನಿ, ದಾರುದ್–ಇ–ಸಲಾಂ ಅನ್ನು ನೆರವೇರಿಸಲಾಗುವುದು. ಸೆ. 29 ಮತ್ತು 30 ರಂದು 2 ದಿನಗಳು ಮಸೀದಿ–ಇ–ಆಜಮ್ ಮರ್ಕಾಜ್ ಅಹಲೆ ಸುನ್ನೋ ಜಮಾತ್, ಅಶೋಕ ರಸ್ತೆ ಲಷ್ಕರ್ ಮೊಹಲ್ಲಾ, ಮೈಸೂರು ಇಲ್ಲಿ ನಮಾಜ್–ಇ–ಇಶಾ ಪ್ರಾರ್ಥನೆಯ ನಂತರ ಲ್ಯಾಂಗರ್–ಇ–ಆಮ್ (ದಾವತ್) ತಬ್ರುಕ್ ಅನ್ನದಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.9036969069 ಸಂಪರ್ಕಿಸಬಹುದು.

ಕನ್ನಡ ಪೌರಾಣಿಕ ಯಕ್ಷಗಾನ ಪ್ರದರ್ಶನ

ಮೈಸೂರು, ಸೆ. 27 – ಮೈಸೂರಿನ ಹೂಟಗಳ್ಳಿಯ ಶ್ರೀ ಸರ್ವ ಸಿದ್ಧಿ ಪ್ರದಾಯಕ ಗಣಪತಿ ದೇವಸ್ಥಾನ ಮತ್ತು ಸರಸ್ವತಿ ಕನ್ವೆನ್ಷನ್ ಹಾಲ್ ಹಿಂಭಾಗ ವಿದ್ಯುತ್ ದೀಪ ಅಲಂಕೃತ ರಂಗಮಂಟಪದಲ್ಲಿ ಹೂಟಗಳ್ಳಿ ಕರಾವಳಿ ಸಾಂಸ್ಕೃತಿಕ ಚಾವಡಿ ಇದರ ದಶಮಾನೋತ್ಸವದ ಪ್ರಯುಕ್ತ ಸೆ. 30 ರಂದು ಸಂಜೆ 6 ರಿಂದ ಶ್ರೀ ಚಾಮುಂಡೇಶ್ವರಿ ದೇವಿ ಮಹಾತ್ಮೆ ಕನ್ನಡ ಪೌರಾಣಿಕ ಯಕ್ಷಗಾನ ಪ್ರದರ್ಶನ ಏರ್ಪಡಿಸಲಾಗಿದೆ. ಕರಾವಳಿ ಸಾಂಸ್ಕೃತಿಕ ಚಾವಡಿ ಸುಮಾರು 10 ವರ್ಷಗಳಿಂದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದರ ಮುಖೇನ ಎಲ್ಲಾ ಕರಾವಳಿಯ ಜನರು ಮತ್ತು ಮೈಸೂರಿನ ಜನತೆಗೆ ಕರಾವಳಿ ಪ್ರದೇಶದ ಸಂಸ್ಕೃತಿಯನ್ನು ತೋರಿಸಿಕೊಡುವ ಪ್ರಯತ್ನವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ ಎಂದು ಗೌರವಾಧ್ಯಕ್ಷ ಡಾ. ದಿನೇಶ್ ಶೆಟ್ಟಿ, ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಕಾರ್ಯದರ್ಶಿ ರಾಕೇಶ್ ರೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೊಲೀಸ್ ಸ್ಪಂದನಾ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ



ಮೈಸೂರು, ಸೆ. 27– ಮೈಸೂರು ನಗರ ಪೊಲೀಸ್ ಸ್ಪಂದನಾ ಪತ್ತಿನ ಸಹಕಾರ ಸಂಘದ 2021–22 ಮತ್ತು 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಕರ್ನಾಟಕ ಪೊಲೀಸ್ ಅಕಾಡೆಮಿ ಸಭಾಂಗಣದಲ್ಲಿ ಸೋಮವಾರ ನಡೆಯಿತು.

ಸಭೆಯನ್ನು ಸಂಘದ ವ್ಯವಸ್ಥಾಪಕರಾದ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಉದ್ಘಾಟಿಸಿದರು. ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅಧ್ಯಕ್ಷತೆ ವಹಿಸಿದ್ದರು. ಡಿಸಿಪಿಗಳಾದ ಎಂ. ಮುತ್ತುರಾಜು, ಎಸ್ ಜಾಹ್ನವಿ, ಎ. ಮಾರುತಿ, ಸಂಘದ ಸಿಇಓ ಎಸ್.ಕುಮಾರ್, ಗೌರವ ಸಲಹೆಗಾರ ಎಸ್.ಎಲ್. ಉಮಾಮಹೇಶ್ವರ, ಲೆಕ್ಕ ಪರಿಶೋಧಕ ಫ್ರಾನ್ಸಿಸ್, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸದಸ್ಯರು ಇದ್ದರು.





ಟೆನ್ನಿಕಾಯ್ಟ್‌ನಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ

ಮೈಸೂರಿನ ದಟ್ಟಗಳ್ಳಿ ಬಡಾವಣೆಯಲ್ಲಿರುವ ಎಸ್‌ವಿಜಿ ಸೆಂಟರ್ ಆಫ್ ಎಕ್ಸಲೆನ್ಸ್ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಎ.ಸಿ.ಸಿಂಧು ಹಾಗೂ ಮಾಸ್ಟರ್ ಋತ್ವಿಕ್ ಎಸ್.ಗೌಡ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಟೆನ್ನಿಕಾಯ್ಟ್‌ನಲ್ಲಿ ಜಯಗಳಿಸುವ ಮೂಲಕ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ನೈಪುಣ್ಯ ದಸರಾ ಚಿತ್ರಕಲಾ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಸೆ. 27– ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿದ್ದ ಪ್ರಸಕ್ತ ಸಾಲಿನಲ್ಲಿ ನಡೆದ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಹಾಗೂ ಬಹುಮಾನ ವಿತರಣಾ ಸಮಾರಂಭವನ್ನು ಸೆ. 30 ರಂದು "ರಮಾ ಗೋವಿಂದ ರಂಗಮಂದಿರ" ದಲ್ಲಿ ಸಂಜೆ 5 ಕ್ಕೆ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ॥ ಸುದರ್ಶನ್ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಖ್ಯಾತ ಕಿರುತೆರೆ ನಟಿ ನಿಖಿಲಾ ಸುಮನ್ ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ರಂಗಕರ್ಮಿ ಸುಮತಿ ಕೆ.ಆರ್ ಅವರು ನಿರ್ದೇಶಿಸಿರುವ, ನೈಪುಣ್ಯ ಶಾಲೆಯ ವಿದ್ಯಾರ್ಥಿಗಳು ಅಭಿನಯಿಸಲಿರುವ, ಪಂಜರ ಶಾಲೆ ನಾಟಕವನ್ನು ಪ್ರದರ್ಶಿಸಲಾಗುವುದು. ಕಾರ್ಯಕ್ರಮ ಸಂಜೆ 5 ಗಂಟೆಗೆ ಆರಂಭವಾಗಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ತಮಿಳುನಾಡಿಗೆ ನೀರು ಬಿಡುವ ವಿಚಾರದಲ್ಲಿ ಸಿಎಂ, ಡಿಸಿಎಂ ಭಿನ್ನ ನಿಲುವು

ಬಿಡಲು ನಮ್ಮಲ್ಲಿ ನೀರಿಲ್ಲ ಎಂದು ಸಿಎಂ ಹೇಳಿದರೆ; ಹೇಗಾದರೂ ಮಾಡಿ ನೀರು ಬಿಡ್ತೇವೆ ಅಂತಾರೆ ಡಿಸಿಎಂ

ಬೆಂಗಳೂರು, ಸೆ.27(ಕೆಎಂಶಿ)– ತಮಿಳುನಾಡಿಗೆ ಕಾವೇರಿ ನೀರು ಹರಿಸುವ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಭಿನ್ನ ನಿಲುವು ಹೊಂದಿದ್ದಾರೆ.

ಕಾವೇರಿ ನೀರು ನಿಯಂತ್ರಣಾ ಸಮಿತಿಯು 3000 ಕ್ಯುಸೆಕ್ ನೀರನ್ನು ಹರಿಸಲು ಆದೇಶಿಸಿದೆ. ಈ ಬಗ್ಗೆ ಕಾನೂನು ತಂಡದೊಂದಿಗೆ ಚರ್ಚಿಸಿದ್ದು, ಮೇಲಿನ ಪ್ರಾಧಿಕಾರದ ಮುಂದೆ ಆಕ್ಷೇಪಣೆ ಸಲ್ಲಿಸುವುದಾಗಿ ಮುಖ್ಯಮಂತ್ರಿ ಅವರು ತಿಳಿಸಿದ್ದಾರೆ. ಹನೂರು ಸಮೀಪ ಸುದ್ದಿಗಾರರೊಂದಿಗೆ ಮಾತನಾಡಿ, ಕಾನೂನು ತಂಡ ಸಲಹೆ ನೀಡಿದಂತೆ ಮೇಲ್ಮನವಿ ಸಲ್ಲಿಸಲಾಗುವುದು. ನೀರು ಬಿಡಲು ನಮ್ಮ ಬಳಿ ನೀರಿಲ್ಲ ಎಂದಿದ್ದಾರೆ.

ಈ ನಡುವೆ ರಾಜಧಾನಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜಲಸಂಪನ್ಮೂಲ ಖಾತೆ ಹೊಣೆ ಹೊತ್ತಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ಎರಡು ಸಾವಿರ ಕ್ಯುಸೆಕ್ ನೀರು ಸಾಮಾನ್ಯವಾಗಿ ತಮಿಳುನಾಡಿಗೆ ಹರಿದು ಹೋಗುತ್ತಿರುತ್ತದೆ. ಒಂದು ಸಾವಿರ ಕ್ಯುಸೆಕ್ ನೀರಿಗೆ ಪರ್ಯಾಯ ವ್ಯವಸ್ಥೆ ಮಾಡುತ್ತೇವೆ.



ತಮಿಳುನಾಡಿಗೆ ನೀಡಬೇಕಿರುವ 3,000 ಕ್ಯುಸೆಕ್ ನೀರಿನಲ್ಲಿ ಕೆಆರ್‌ಎಸ್‌ನಿಂದ ಒಂದು ಹನಿ ನೀರನ್ನು ಯಾವುದೇ ಕಾರಣಕ್ಕೂ ಬಿಡುಗಡೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರೈತರ ವಿಷಯದಲ್ಲಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಸರ್ಕಾರ ರಾಜಿಯಾಗುವುದಿಲ್ಲ. ಮಂಡ್ಯ ಭಾಗದ ರೈತರ ಹಿತ ಮುಖ್ಯ. ಮೇಕೆದಾಟು ಯೋಜನೆ ಬೇಕು ಎಂದು ವಿರೋಧ ಪಕ್ಷದವರು ಅಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದಾರೆ. ಇಲ್ಲಿ ಕೊಟ್ಟರೆ ಏನು ಪ್ರಯೋಜನ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ನೀವು ದೆಹಲಿಯಲ್ಲಿ ಹೋರಾಟ ಮಾಡಿ, ಇಲ್ಲಿ ಮಾಡಿದರೆ ಏನು ಪ್ರಯೋಜನ ಎಂದರು

ಸುಪ್ರೀಂಕೋರ್ಟ್ ಕೂಡ ಮೌಖಿಕವಾಗಿ ಮೇಕೆದಾಟು ಯೋಜನೆಗೆ ಪೂರಕವಾಗಿ ಮಾತನಾಡಿದೆ. 26 ಸಂಸದರು ಸರ್ವಪಕ್ಷ ಸಭೆಯಲ್ಲಿ ರಾಜ್ಯದ ಪರವಾಗಿ ಮಾತನಾಡಿದರು. ಅದರಂತೆ ಈಗ ಪ್ರಧಾನಿಯವರನ್ನು ಭೇಟಿಯಾಗಿ ಮನವಿ ಸಲ್ಲಿಸಿ ಎಂದು ಆಗ್ರಹಿಸಿದರು.

ತಮಿಳುನಾಡಿನ ಜೊತೆ ಡಿ.ಕೆ.ಶಿವಕುಮಾರ್ ಅವರು ಮಾತುಕತೆ ನಡೆಸುತ್ತಿಲ್ಲ ಎಂದು ಕುಮಾರಸ್ವಾಮಿ ಅವರ ಆರೋಪಕ್ಕೆ ಪ್ರತಿಕ್ರಿಯಿಸಿ ರಾಜ್ಯದ ಹಿತಕ್ಕೆ ಎರಡು ಪಕ್ಷಗಳು ಒಂದಾಗಿವೆ. ಈಗಲೂ ರಾಜ್ಯದ ಹಿತಕ್ಕೆ ಮೇಕೆದಾಟು ವಿಚಾರವಾಗಿ ಕೇಂದ್ರದ ಮೇಲೆ ಒತ್ತಡ ತರಲಿ, ಮೂರು ವರ್ಷದಲ್ಲಿ ಅಣೆಕಟ್ಟು ಕಟ್ಟುವ ಕೆಲಸ ಮುಗಿಸುತ್ತೇನೆ.

12,500 ಕ್ಯುಸೆಕ್ ನೀರಿಗೆ ತಮಿಳುನಾಡು ಬೇಡಿಕೆ ಇಟ್ಟಿತ್ತು, ನಿಮ್ಮ ಹೋರಾಟದಿಂದ ಸಮಿತಿ 3,000 ಕ್ಯುಸೆಕ್ ನೀರು ಬಿಡುಗಡೆಗೆ ಶಿಫಾರಸ್ಸು ಮಾಡಿದೆ. ಮತ್ತೊಮ್ಮೆ ಹೋರಾಟ ಏತಕ್ಕೆ ಎಂದರು.

ಹೋರಾಟಗಾರರ ಬಗ್ಗೆ ನಮಗೆ ತಕರಾರು ಇಲ್ಲ, ಅವರ ಜೊತೆ ನಾವಿರುತ್ತೇವೆ. ಸೆ.29 ರಂದು ಮತ್ತೊಮ್ಮೆ ಬಂದ್ ಎಂದು ಹೇಳಲಾಗುತ್ತಿದೆ, ಇದರಿಂದ ಸಾವಿರಾರು ಕೋಟಿ ವಹಿವಾಟು ಹಾಳಾಗುತ್ತದೆ. ಶಾಲಾ ಮಕ್ಕಳಿಗೆ ತೊಂದರೆಯಾಗುತ್ತದೆ ಬಂದ್ ಬೇಡ ಎಂದು ಮನವಿ ಮಾಡಿದರು.

ಬೆಂಗಳೂರಿನ ಗೋಗ್ಯಾನ್ ಫೌಂಡೇಷನ್, ಪ್ರಾಣಿದಯಾ ಸಂಘದಿಂದ ದಾಳಿ

ಕೇರಳಕ್ಕೆ ಸಾಗಿಸುತ್ತಿದ್ದ 300ಕ್ಕೂ ಹೆಚ್ಚು ಜಾನುವಾರು ರಕ್ಷಣೆ

• ಹೆಚ್.ಡಿ.ಕೋಟೆ ಬಳಿ 11 ಆರೋಪಿಗಳ ಬಂಧನ • ಪೊಲೀಸ್, ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರ ಆಕ್ರೋಶ





ಹೆಚ್.ಡಿ.ಕೋಟೆ, ಸೆ.27– 10 ಕಂಟೇನರ್‌ಗಳಲ್ಲಿ ಅಕ್ರಮವಾಗಿ ಕೇರಳಕ್ಕೆ ಸಾಗಿಸುತ್ತಿದ್ದ 300ಕ್ಕೂ ಹೆಚ್ಚು ಜಾನುವಾರುಗಳನ್ನು ತಾಲೂಕಿನ ಗಡಿಭಾಗವಾದ ಮಚ್ಚೂರು ಗೇಟ್‌ನಲ್ಲಿ ಬೆಂಗಳೂರಿನ ಗೋಗ್ಯಾನ್ ಫೌಂಡೇಷನ್ ಮತ್ತು ಪ್ರಾಣಿದಯಾ ಸಂಘದವರು ದಾಳಿ ನಡೆಸಿ ರಕ್ಷಿಸಿದ್ದಾರೆ.

ಬುಧವಾರ ಬೆಳಗ್ಗೆ ಕೇರಳದ ಕಸಾಯಿ ಖಾನೆಗೆ ಅಕ್ರಮವಾಗಿ ಸುಮಾರು 300ಕ್ಕೂ ಹೆಚ್ಚು ಜಾನುವಾರುಗಳನ್ನು ಸಾಗಿಸುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಬೆಂಗಳೂರಿನ ಗೋಗ್ಯಾನ್ ಫೌಂಡೇಷನ್ ಮತ್ತು ಪ್ರಾಣಿ ದಯಾ ಸಂಘದವರು ದಾಳಿ ನಡೆಸಿ ವಾಹನ ಸಮೇತ ಹಿಡಿದು, ಜಾನುವಾರುಗಳನ್ನು ರಕ್ಷಣೆ ಮಾಡಿ ಅಂತರಸಂತೆ ಠಾಣೆ ಪೊಲೀಸರ ವಶಕ್ಕೆ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿಗಳಾದ ರಫೀಕ್, ಚೆಲುವರಾಜು, ಮಕ್ಬೂಲ್, ಗೋವಿಂದ, ಗಜಫರ್ ಶರೀಫ್, ಮಹಮ್ಮದ್ ಶಫಿ, ಸೈಯದ್ ಅಮರ್, ಶಬೀರ್ ಸೇರಿದಂತೆ 11 ಮಂದಿಯನ್ನು ಬಂಧಿಸಲಾಗಿದೆ. ಆರೋಪಿಗಳು ಕೆ.ಆರ್. ಪೇಟೆ, ಮೈಸೂರು, ದರ್ಗಾ, ಕಿಕ್ಕೇರಿ, ಈ ಗ್ರಾಮಗಳಿಗೆ ಸೇರಿದವರು ಎನ್ನಲಾಗಿದೆ.

ಹೆಚ್.ಡಿ.ಕೋಟೆ ಹೋಬಳಿ ಕೇಂದ್ರವಾದ ಅಂತರಸಂತೆಯಲ್ಲಿ ಪೊಲೀಸ್ ಠಾಣೆ ಹಾಗೂ ಉದ್ಬೂರಿನಲ್ಲಿರುವ ಅರಣ್ಯ ಚೆಕ್ ಪೋಸ್ಟ್‌ಗಳನ್ನು ದಾಟಿ 10 ಕಂಟೇನರ್‌ಗಳಲ್ಲಿ ಅಕ್ರಮವಾಗಿ 300ಕ್ಕೂ ಹೆಚ್ಚು ಜಾನುವಾರುಗಳನ್ನು ಸಾಗಿಸಿದ್ದಾರೆ ಎಂದರೆ ಪೊಲೀಸರು ಹಾಗೂ ಅರಣ್ಯ ಇಲಾಖೆಯವರು ಇಂತಹ ಅಕ್ರಮ ಸಾಗಾಣಿಕೆ ಜಾಲದಲ್ಲಿ ಶಾಮೀಲಾಗಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಅಂತರಸಂತೆ ಪೊಲೀಸ್ ಠಾಣೆ ಹಾಗೂ ಅರಣ್ಯ ಇಲಾಖೆಯ ಚೆಕ್ ಪೋಸ್ಟ್ ಬಳಿ, ಈ ಭಾಗದ ಗ್ರಾಮದ ಜನರು ವಾಹನದಲ್ಲಿ ಓಡಾಟ ಮಾಡುತ್ತಿದ್ದಾಗ ಪೊಲೀಸರು ನಮ್ಮ ಬಳಿ ಲೈಸೆನ್ಸ್ ಇಲ್ಲ, ಹೆಲ್ಮೆಟ್ ಇಲ್ಲ ಅಂದರೆ ದಂಡ ವಿಧಿಸುತ್ತಾರೆ, ಆದರೆ ಜಾನುವಾರುಗಳನ್ನು ಸಾಗಾಣಿಕೆ ಮಾಡುವ 10 ಕಂಟೇನರ್‌ಗಳನ್ನು ಯಾವುದೇ ತಪಾಸಣೆ ಮಾಡದೆ ಹಣ ಪಡೆದು ಕೇರಳ ರಾಜ್ಯಕ್ಕೆ ಸಾಗಿಸಲು ಬಿಟ್ಟಿದ್ದಾರೆ. ಇವರ ಮೇಲೆ ಯಾವ ಕ್ರಮಕೈಗೊಳ್ಳುತ್ತೀರಿ ಎಂದು ಸಾರ್ವಜನಿಕರ ಪ್ರಶ್ನಿಸಿದ್ದಾರೆ.

ಪೊಲೀಸರ ಈ ಕಾರ್ಯವೈಖರಿಯನ್ನು ಖಂಡಿಸಿ ಸಾರ್ವಜನಿಕರು ಪೊಲೀಸ್ ಠಾಣೆ ಎದುರು ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು. ಆರೋಪಿಗಳನ್ನು ಪೊಲೀಸರು ಬಂಧಿಸಿ ಕಣ್ಣು ಒರೆಸುವ ಕೆಲಸ ಮಾಡುತ್ತಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಬೆಂಗಳೂರಿನ ಗೋಗ್ಯಾನ್ ಫೌಂಡೇಷನ್ ಮತ್ತು ಪ್ರಾಣಿದಯಾ ಸಂಘದವರು ಸುರಕ್ಷಿತವಾಗಿ ಜಾನುವಾರುಗಳನ್ನು ಮೈಸೂರಿನ ಪಿಂಜರಾಪೋಲ್‌ಗೆ ಸ್ಥಳಾಂತರಿಸಿದರು.

ಬೆಂಗಳೂರಿನ ಗೋಗ್ಯಾನ್ ಫೌಂಡೇಷನ್ ಮತ್ತು ಪ್ರಾಣಿ ದಯಾ ಸಂಘದವರು ಈ ದಾಳಿ ನಡೆಸದಿದ್ದಲ್ಲಿ ಈ ಪ್ರಕರಣ ಬೆಳಕಿಗೆ ಬರುತ್ತಿರಲಿಲ್ಲ ಎಲ್ಲಿಂದಲೋ ಗೋವುಗಳನ್ನು ತುಂಬಿಕೊಂಡು ವಾಹನಗಳು ಕರ್ನಾಟಕದ ಗಡಿಯನ್ನು ತಲುಪಿವೆ ಎಂದರೆ ಇದರ ಹಿಂದೆ ದೊಡ್ಡ ದೊಡ್ಡ ಕೈಗಳ ಬೆಂಬಲವೇ ಇರಬೇಕು ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಈ ಸಂದರ್ಭದಲ್ಲಿ ಡಿವೈಎಸ್ಪಿ ಮಹೇಶ್ ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್ ಶಬ್ಬೀರ್ ಹುಸೇನ್, ಅಂತರಸಂತೆ ಪೊಲೀಸ್ ಠಾಣೆಯ ರವಿಶಂಕರ್, ಸರಗೂರು ಪೊಲೀಸ್ ಠಾಣೆಯ ನಂದೀಶ್ ಪ್ರಸಾದ್, ಸಿಬ್ಬಂದಿಗಳು ಹಾಜರಿದ್ದರು.

ಜಾನುವಾರುಗಳನ್ನು ಸಾಗಿಸುತ್ತಿದ್ದ ವಾಹನ ಚಾಲಕನೊಬ್ಬ ಮಾತನಾಡಿರುವ ಎನ್ನಲಾದ ವಿಡಿಯೊಂದು ವೈರಲ್ ಆಗಿದ್ದು, ಕಳೆದ 15 ದಿನಗಳಲ್ಲಿ ಮೂರು ಬಾರಿ ಕೇರಳಕ್ಕೆ ಜಾನುವಾರುಗಳನ್ನು ಇದೇ ಮಾರ್ಗವಾಗಿ ಸಾಗಿಸಲಾಗಿದೆ. ಪೊಲೀಸ್ ಮತ್ತು ಅರಣ್ಯ ಇಲಾಖೆಯ ಚೆಕ್‌ಪೋಸ್ಟ್‌ನಲ್ಲಿ ಕಂಟೇನರ್‌ಗಳಲ್ಲಿ ಗೋವುಗಳಿವೆ ಎಂದರೆ ಅವರು ಚೆಕ್ ಮಾಡುವುದಿಲ್ಲ. ನಾವು ಸುಲಭವಾಗಿ ಕೇರಳಕ್ಕೆ ಸಾಗಿಸುತ್ತೇವೆ' ಎಂದಿರುವ ವಿಡಿಯೋ ವೈರಲ್ ಆಗಿದ್ದು, ಗೋವುಗಳ ಸಾಗಾಣಿಕೆಯಲ್ಲಿ ತಾಲೂಕಿನ ಕೆಲ ಅಧಿಕಾರಿಗಳೇ ಶಾಮಿಲಾಗಿರುವ ಬಗ್ಗೆ ಸಾರ್ವಜನಿಕರು ಆರೋಪಿಸಿರುವುದಕ್ಕೆ ಪುಷ್ಟಿ ಕೊಡುವಂತಿದೆ.

ಸಾಲ ಮರುಪಾವತಿಸಿ, ಸಂಘದ ಆರ್ಥಿಕ ಬೆಳವಣಿಗೆಗೆ ಸಹಕರಿಸಿ



ನಂಜನಗೂಡು, ಸೆ27– ಬಡ ಜನರಿಗೆ ಹಣ ಕಾಸು ನೆರವು ನೀಡಿ ಆರ್ಥಿಕವಾಗಿ ಮೇಲೆತ್ತುವ ಉದ್ದೇಶದಿಂದ ಸ್ಥಾಪಿಸಲಾಗಿರುವ ಈ ಸಂಘವನ್ನು ಆರ್ಥಿಕವಾಗಿ ಮತ್ತಷ್ಟು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಸದಸ್ಯರು ಸಕಾಲದಲ್ಲಿ ಸಾಲ ಮರುಪಾವತಿಸಿ ಅಭಿವೃದ್ಧಿಗೆ ನೆರವಾಗಬೇಕು ಎಂದು ಶ್ರೀ ವೀರಶೈವ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ ಹೇಳಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ನಡೆದ ಸಂಘದ 17ನೇ ವರ್ಷದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದರು.

17 ವರ್ಷಗಳ ಹಿಂದೆ ಹಿರಿಯ ವಕೀಲ ಹಾಗೂ ಸಂಸ್ಥಾಪಕ ಅಧ್ಯಕ್ಷರಾದ ಬಿ.ಮಹದೇವಪ್ಪರವರ ನೇತೃತ್ವದಲ್ಲಿ ಸ್ಥಾಪಿತವಾದ ಈ ಸೊಸೈಟಿಯು ಪ್ರಸ್ತುತ ಬೃಹದಾಕಾರವಾಗಿ ಬೆಳೆದಿದ್ದು ಅನೇಕರು ಸಂಘದ ಸಹಕಾರದಿಂದ ವಾಣಿಜ್ಯ ಮತ್ತಿತರ ಕ್ಷೇತ್ರಗಳಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ್ದಾರೆ ಎಂದರು.


ಕೇವಲ ಹತ್ತು ಸಾವಿರದಿಂದ ಪ್ರಾರಂಭಿಸಿ ಈಗ ಸದಸ್ಯರಿಗೆ ಹಂತ ಹಂತವಾಗಿ 25 ಸಾವಿರ ರೂ., 50 ಸಾವಿರ ರೂ. ಹಾಗೂ ಪ್ರಸ್ತುತ 1 ಲಕ್ಷ ರೂ. ಸಾಲ ನೀಡಲಾಗುತ್ತಿದ್ದು ಮುಂದಿನ ದಿನಗಳಲ್ಲಿ 2 ಲಕ್ಷದವರೆವಿಗೂ ಸಾಲ ನೀಡುವ ಗುರಿ ಹೊಂದಲಾಗಿದೆ ಎಂದರು.

ಸೊಸೈಟಿಗೆ ನಿವೇಶನವನ್ನು ಖರೀದಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಶೀಘ್ರದಲ್ಲೇ ನಿವೇಶನವನ್ನು ಖರೀದಿಸಿ ಸ್ವಂತ ಕಟ್ಟಡ ನಿರ್ಮಾಣ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಹಲ್ಲರೆ ಶಿವಬುದ್ದಿ, ಸಿದ್ದರಾಮಪ್ಪ, ಬಸವಯೋಗಿ, ಪ್ರಗತಿಪರ ರೈತ ಉಲ್ಲಾಸ್ ಅವರನ್ನು ಗೌರವಿಸಲಾಯಿತು.

ಸೊಸೈಟಿಯ ಉಪಾಧ್ಯಕ್ಷ ಎಂ.ವಿ.ಶಿವಕುಮಾರ್, ನಿರ್ದೇಶಕರಾದ ಜಿ.ಚೆನ್ನಬಸಪ್ಪ, ಡಿ.ಎಸ್.ಕೆಂಡಗಣ್ಣಸ್ವಾಮಿ, ಎನ್.ವಿ.ವಿನಯ್ ಕುಮಾರ್, ಮಂಜುಳಾಮಧು, ಇ.ಶಾಂತಕುಮಾರಿ, ಗೀತಾದೇವಿ, ಪಿ.ರಮೇಶ್, ಎನ್. ಮಹೇಶ್, ಎನ್.ಕುಮಾರ್‌ಸ್ವಾಮಿ, ಶಿವಮಲ್ಲಪ್ಪ, ಕಾರ್ಯದರ್ಶಿ ಬಸಪ್ಪ ಸಿಬ್ಬಂದಿಗಳಾದ ಚೈತ್ರಾ, ಪ್ರಸನ್ನಕುಮಾರ್, ಎಸ್.ಆರ್.ಪ್ರಭಾಕರ್, ಪೂಜಾ, ಲಿಂಗರಾಜು ಉಪಸ್ಥಿತರಿದ್ದರು.

ಸಮಾಜ ಸೇವಕ ಕೆ.ಆರ್.ಲಕ್ಕೇಗೌಡರ ಅಂತ್ಯಕ್ರಿಯೆ



ಕೆ.ಆರ್.ನಗರ, ಸೆ27– ಮಂಗಳವಾರ ನಿಧನರಾದ ಸಮಾಜ ಸೇವಕ, ನಿವೃತ್ತ ಕನ್ನಡ ಉಪನ್ಯಾಸಕ ಕೆ.ಆರ್. ಲಕ್ಕೇಗೌಡರ ಅಂತಿಮ ಸಂಸ್ಕಾರ ಇಂದು ಪಟ್ಟಣದ ಹೊರವಲಯದ ಕಂಠೇನಹಳ್ಳಿಯ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿತು.

ಬುಧವಾರ ಮಧ್ಯಾಹ್ನ 2.30ರವರೆಗೆ ಸಾರ್ವಜನಿಕರ ದರ್ಶನಕ್ಕಾಗಿ ಮೃತರ ಪಾರ್ಥಿವ ಶರೀರವನ್ನು ಪಟ್ಟಣದ ಬನ್ನಿಮಂಟಪ ಬಡಾವಣೆಯ ಅವರ ನಿವಾಸದಲ್ಲಿ ಇಡಲಾಗಿತ್ತು. ಶಾಸಕರಾದ ಡಿ.ರವಿಶಂಕರ್, ಎ.ಮಂಜು, ಮಾಜಿ ಸಚಿವ ಸಾ.ರಾ.ಮಹೇಶ್, ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ, ರಾಜ್ಯ ಮಹಿಳಾ ಸಹಕಾರ ಸಂಘದ ಅಧ್ಯಕ್ಷೆ ಲಲಿತಾ ಜಿ.ಟಿ.ದೇವೇಗೌಡ, ಕೆಪಿಸಿಸಿ ಕಾರ್ಯಕಾರಣಿ ಸದಸ್ಯ ದೊಡ್ಡಸ್ವಾಮೇಗೌಡ, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮಾಜಿ ಮೂಡಾ ಅಧ್ಯಕ್ಷ ಎಚ್.ಎನ್. ವಿಜಯ್, ಹಾಸನ ಜಿಪಂ ಸಿಇಓ ಪೂರ್ಣಿಮಾ, ಡಿವೈಎಸ್‌ಪಿ ಗೀತಾ, ಪುರಸಭೆ ಮುಖ್ಯ ಅಧಿಕಾರಿ ಡಾ.ಜಯಣ್ಣ, ತಹಸಿಲ್ದಾರ್‌ಗಳಾದ ಸಿ.ಎಸ್.ಪೂರ್ಣಿಮಾ, ಎಂ.ಎಸ್, ಯದು ಗಿರೀಶ್, ತಾಪಂ ಇಒಗಳಾದ ಹರೀಶ್, ಎಚ್.ಕೆ.ಸತೀಶ್, ಗಿರೀಶ್, ಸೇರಿದಂತೆ ಸಾವಿರಾರು ಮಂದಿ ಮೃತರ ಅಂತಿಮ ದರ್ಶನ ಪಡೆದರು.

ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ ಸಮಾರಂಭ

ನಂಜನಗೂಡು, ಸೆ.27– ನಗರದ ನೀಲಕಂಠೇಶ್ವರ ಶಾಲಾ ಆವರಣದಲ್ಲಿ ಅ.1 ರಂದು ಪ್ರೊ.ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ, ಮೈಸೂರು ವತಿಯಿಂದ "ಪ್ರೊ.ಮಲೆಯೂರು ಗುರುಸ್ವಾಮಿ" ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಲೆಯ ಕಾರ್ಯದರ್ಶಿ ಎನ್.ಎ. ಕುಮಾರಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಉದ್ಘಾಟಿಸಲಿದ್ದು, ಖ್ಯಾತ ವಿದ್ವಾಂಸ ಪ್ರೊ.ಪ್ರೇಮಶೇಖರ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎನ್.ಆರ್.ತಾರನಾಥ, ಸಾಹಿತಿ ಪ್ರೊ.ಮೊರಬದ ಮಲ್ಲಿಕಾರ್ಜುನ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ನಾಳೆ ಹುಣಸೂರು ಬಂದ್; ಇಂದು ಸಂಘಟನೆಗಳ ಸಭೆ

ಹುಣಸೂರು, ಸೆ.27– ಕಾವೇರಿ ವಿಚಾರದಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ಖಂಡಿಸಿ ಸೆ.29 ರಂದು ಕರ್ನಾಟಕ ಬಂದ್‌ಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ರಾಜ್ಯ ರೈತ ಸಂಘ, ರಾಜ್ಯ ದಲಿತ ಸಂಘರ್ಷ ಸಮಿತಿ ಹಾಗೂ ಕನ್ನಡ ಪರ ಸಂಘಟನೆಗಳ ನೇತೃತ್ವದಲ್ಲಿ ನಾಳೆ (ಸೆ.28) ಬೆಳಗ್ಗೆ ಪಟ್ಟಣದಲ್ಲಿ ಎಪಿಎಂಸಿ ಕಚೇರಿಯಲ್ಲಿ ಸಭೆ ಕರೆಯಲಾಗಿದೆ.

ಕರ್ನಾಟಕ ಬಂದ್ ಬೆಂಬಲಿಸಿ ಹುಣಸೂರು ತಾಲೂಕು ಕೂಡ ಬಂದ್ ಆಚರಿಸಬೇಕಾಗಿರುವುದರಿಂದ ಚರ್ಚಿಸುವ ಸಲುವಾಗಿ ಈ ಸಭೆಯನ್ನು ಕರೆಯಲಾಗಿದೆ. ಆಟೋ ಚಾಲಕರು, ವರ್ತಕರು, ಲಾರಿ ಮಾಲೀಕರು, ಆರ್‌ಎಂಸಿ, ಸರ್ಕಾರಿ ಇಲಾಖೆಯವರು, ಶಾಲಾ ಕಾಲೇಜುಗಳು, ಕೆಎಸ್‌ಆರ್‌ಟಿಸಿ ಬೀದಿಬದಿ ವ್ಯಾಪಾರಿಗಳು ಸ್ವಯಂಪ್ರೇರಣೆಯಿಂದ ಬಂದ್‌ಗೆ ಬೆಂಬಲ ಸೂಚಿಸುವಂತೆ ಸಭೆಯಲ್ಲಿ ಕೋರಲಾಗುವುದು ಎಂದು ರೈತ ಮುಖಂಡರಾದ ಹೊಸೂರು ಕುಮಾರ್, ಅತ್ತಿಕುಪ್ಪೆ ರಾಮಕೃಷ್ಣ, ಚಿಕ್ಕಹುಣಸೂರು ರಾಜು, ಸಿದ್ದೇಶ್, ಶಿವರಾಜು, ಬೆಂಕಿಪುರ ಚಿಕ್ಕಣ್ಣ, ಸರ್ವೇಶ್, ಗೌರಿಪುರ ವೆಂಕಟೇಶ್, ಸಿಪಿಎಂ ಬಸವರಾಜು, ನಿಂಗರಾಜ್, ಮಲ್ಲಾಡಿ, ಪ್ರಕಾಶ್ ಹೊಸಹಳ್ಳಿ ಅವರು ತಮ್ಮ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಗುಣಮಟ್ಟದ ಹಾಲಿನಿಂದ ಸಹಕಾರ ಸಂಘ ಅಭಿವೃದ್ಧಿ



ತಿ.ನರಸೀಪುರ.ಸೆ.27– ರೈತರು ಸಂಘಕ್ಕೆ ಉತ್ತಮ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕು ಹಾಗೂ ತಾವು ಸಹ ಆರ್ಥಿಕವಾಗಿ ಮುನ್ನಡೆ ಸಾಧಿಸಬೇಕು ಎಂದು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಚ್.ವಿ. ಶೇಷಾದ್ರಿ ಹೇಳಿದರು

ತಾಲೂಕಿನ ಹೆಮ್ಮಿಗೆ ಗ್ರಾಮದಲ್ಲಿ ಏರ್ಪಡಿಸಲಾಗಿದ್ದ ಸಂಘದ 2022–23 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಪ್ರಸಕ್ತ ಸಾಲಿನಲ್ಲಿ 1.26. ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದರು.

ಆರಂಭಗೊಂಡ ಸಹಕಾರ ಸಂಘವು ವರ್ಷಗಳಷ್ಟು ಹಳೆಯ ಸಂಘವಾಗಿದ್ದು ಆರಂಭದಿಂದಲೂ ಲಾಭದಾಯಕವಾಗಿ ಮುನ್ನಡೆಯುತ್ತಾ ಬಂದಿದೆ. ಸಂಘ ಕಟ್ಟಡಕ್ಕೆ ಗ್ರಾಮದ ದಾನಿಗಳು ಜಾಗ ನೀಡಿದರೆ ಮೈಮುಲ್ ಹಾಗೂ ಸರ್ಕಾರದಿಂದ ಅನುದಾನ ಪಡೆದು ಕಟ್ಟಡವನ್ನು ನಿರ್ಮಾಣ ಮಾಡುತ್ತೇವೆ ಎಂದರು.

ಇನ್ನೂ ಹೆಚ್ಚಿನ ಹಾಲು ಉತ್ಪಾದನೆಗೆ ರೈತರು ಒತ್ತು ನೀಡಬೇಕಿದೆ ಎಂದರು. ಇತ್ತೀಚೆಗೆ ಹೈನುಗಾರಿಕೆ ಲಾಭದಾಯಕ ಉದ್ದಿಮೆಯಾಗಿ ಬೆಳೆಯುತ್ತಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಹಸು ಸಾಕುವವರ ಸಂಖ್ಯೆ ಇಳಿಮುಖವಾಗುತ್ತಿರುವುದು ಬೇಸರದ ಸಂಗತಿಯಾಗಿದೆ,ಮನೆಗೊಂದು, ಎರಡು ಹಸು ಇದ್ದರೆ ಹೆಚ್ಚಿನ ಹಾಲು ಉತ್ಪಾದನೆ ಸಾಧ್ಯವಾಗುತ್ತದೆ ಎಂದರು.

ವಾರ್ಷಿಕ ವರದಿಯನ್ನ ಡೈರಿ ಕಾರ್ಯದರ್ಶಿ ಸೋಮಣ್ಣ ಮಂಡಿಸಿದರು ಹೆಚ್ಚೆಚ್ಚು ಹಾಲು ಹಾಕುವ ರೈತರಾದ ಸುಸಮ್ಮ, ಈರಪ್ಪ ವಸಂತ, ಶ್ರೀನಿವಾಸ ಅವರನ್ನು ಸನ್ಮಾನಿಸಿದರು. ಉಪಾಧ್ಯಕ್ಷ ಪರಶಿವಮೂರ್ತಿ, ನಿರ್ದೇಶಕರುಗಳಾದ ಎಚ್.ವಿ.ಶಂಕರ, ರತ್ನಮ್ಮ ಬಂಗಾರಮ್ಮ, ರಾಜಶೇಖರ, ಮಾದಶೆಟ್ಟಿ, ಚಿಕ್ಕಹೊನ್ನಯ್ಯ, ನಂಜುಂಡಸ್ವಾಮಿ, ಸಿ. ಚೌಡಯ್ಯ, ಹೆಚ್.ಎಂ.ಅಂಕಪ್ಪ, ಡಿ.ವಿ. ಮಧುಕೇಶ, ಹಾಲು ಪರೀಕ್ಷಕ ಪುಟ್ಟನಾಯಕ ಇತರರು ಹಾಜರಿದ್ದರು

ಸಕಾಲಕ್ಕೆ ಸಾಲ ಮರುಪಾವತಿಸಿ ಅಭಿವೃದ್ಧಿಗೆ ಸಹಕರಿಸಿ



ಮಲ್ಕುಂಡಿ, ಸೆ.27– ರೈತರು ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಿ ಎಂದು ಸಂಘದ ಅಧ್ಯಕ್ಷ ಮಂಜುನಾಥ್ ತಿಳಿಸಿದರು.

ನಂಜನಗೂಡು ತಾಲೂಕಿನ ಕುರಿಹುಂಡಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘದಿಂದ ರೈತರಿಗೆ ಶೂನ್ಯ ಬಡ್ಡಿಯಲ್ಲಿ ಸಾಲ ನೀಡುತ್ತಿದ್ದಾರೆ. ಪ್ರತಿಯೊಬ್ಬರು ಅದನ್ನು ಸದುಪಯೋಗ ಪಡೆದುಕೊಳ್ಳಬೇಕು. ಅದೇ ರೀತಿ ಪಡೆದ ಸಾಲವನ್ನು ಸರಿಯಾದ ಸಮಯಕ್ಕೆ ಮರು ಪಾವತಿ ಮಾಡಿದರೆ ಸಂಘ ಅಭಿವೃದ್ಧಿ ಕಾಣಲು ಸಾಧ್ಯ ಎಂದು ತಿಳಿಸಿದರು.

ಸಂಘದ ಉಪಾಧ್ಯಕ್ಷ ಮಹದೇವಯ್ಯ, ನಿರ್ದೇಶಕರುಗಳಾದ ಮಲ್ಲಾರಾಧ್ಯ, ಶ್ರೀನಿವಾಸಶೆಟ್ಟಿ, ಸಂಪತ್, ಬಸವರಾಜ್, ದೊಡ್ಡಸೋಮಣ್ಣ, ರಾಜೇಂದ್ರಕುಮಾರ್, ಮಾರ್ಕಂಡಯ್ಯ, ಮಾಲಮ್ಮ, ಮಹದೇವಮ್ಮ, ಸಿಇಓ ಕೆ.ಎಂ.ಹರೀಶ್ ಸೇರಿದಂತೆ ಪ್ರಮುಖರು ಹಾಜರಿದ್ದರು

ಪೌರರ ಆರೋಗ್ಯ ಕಾಪಾಡುವ ಪೌರ ಕಾರ್ಮಿಕರು ಆರೋಗ್ಯಾಧಿಕಾರಿಗಳು

ತಿ.ನರಸೀಪುರದಲ್ಲಿ ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಅಭಿಪ್ರಾಯ



ತಿ.ನರಸೀಪುರ.ಸೆ.27– ಪರಿಸರ ಸ್ವಚ್ಛತೆಯ ಜೊತೆಗೆ ಜನರ ಮನೋಭಾವವನ್ನು ಬದಲಾಯಿಸುವುದು ಸ್ವಚ್ಛ ಭಾರತದ ಪರಿಕಲ್ಪನೆಯಾಗಿದ್ದು, ಸ್ವಚ್ಛತೆಯ ಕುರಿತು ಕಾನೂನು ಜಾರಿಗೆ ಬಂದರೆ ಸಾಲದು, ಜನರ ಮನಸ್ಥಿತಿ ಪರಿವರ್ತನೆ ಆಗಬೇಕು, ಪರಿಸರವನ್ನು ಸ್ವಚ್ಛವಾಗಿರಿಸುವಲ್ಲಿ ಪೌರಕಾರ್ಮಿಕರ ಕೊಡುಗೆ ಅಪಾರವಾದುದು ಎಂದು ತಹಶೀಲ್ದಾರ್ ಸುರೇಶ್ ಆಚಾರ್ ಹೇಳಿದರು.

ಪುರಸಭೆ ವತಿಯಿಂದ ಪಟ್ಟಣದ ಸಿಡಿಎಸ್ ಭವನದಲ್ಲಿ ಬುಧವಾರ ಏರ್ಪಡಿಸಲಾಗಿದ್ದ ಪೌರಕಾರ್ಮಿಕರ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಟ್ಟಣದಲ್ಲಿ ರೋಗ ರುಜಿನಗಳು ಹರಡದಂತೆ ಪೌರಕಾರ್ಮಿಕರು ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಪೌರರ ಆರೋಗ್ಯವನ್ನು ಕಾಪಾಡಲು ವೈದ್ಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಪೌರಕಾರ್ಮಿಕರು ಆರೋಗ್ಯವಾಗಿದ್ದರೆ ಮಾತ್ರ ಪಟ್ಟಣದ ಪೌರರು ಆರೋಗ್ಯದಿಂದಿರಲು ಸಾಧ್ಯ ಆ ನಿಟ್ಟಿನಲ್ಲಿ ಪೌರಕಾರ್ಮಿಕರು ಕೆಲಸದ ವೇಳೆ ಸರಕಾರ ನೀಡಿದ ಹ್ಯಾಂಡ್ ಗ್ಲೌಜು ಹಾಗೂ ಶೂಗಳನ್ನು ಕಡ್ಡಾಯವಾಗಿ ಬಳಸಬೇಕಿದೆ ಎಂದರು.

ಪೌರಕಾರ್ಮಿಕರ ಮಕ್ಕಳು ಪೌರಕಾರ್ಮಿಕರಾಗಿ ದುಡಿಯಬೇಕೆಂದಿಲ್ಲ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಿ ಅವರು ಮುಂದೆ ಉತ್ತಮ ನಾಗರಿಕರಾಗಿ ಸಮಾಜದಲ್ಲಿ ಉನ್ನತ ಹುದ್ದೆ ಹೊಂದುವಂತೆ ನೋಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್ ಮಾತನಾಡಿ ಪೌರಕಾರ್ಮಿಕರು ಮಳೆ, ಚಳಿ, ಗಾಳಿಯನ್ನು ಲೆಕ್ಕಿಸದೆ ನಗರದ ಸ್ವಚ್ಛತೆ ಕಡೆ ಗಮನ ಹರಿಸುತ್ತಾರೆ. ನಗರ ಸುಂದರವಾಗಿ ಕಾಣಲು ಪೌರಕಾರ್ಮಿಕರ ಸೇವೆ ಮುಖ್ಯ. ಆ ನಿಟ್ಟಿನಲ್ಲಿ ಪಟ್ಟಣದ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ, ಪೌರ ಕಾರ್ಮಿಕರು ಪುರಸಭೆಯಿಂದ ನೀಡಲಾಗಿರುವ ರೈನ್ ಕೋಟ್ ಧರಿಸಿ ಕಾರ್ಯ ನಿರ್ವಹಿಸಬೇಕು. ಪೌರ ಕಾರ್ಮಿಕರು ಆರೋಗ್ಯದ ಕಡೆಯೂ ಹೆಚ್ಚಿನ ಗಮನ ಹರಿಸಬೇಕು ಹಾಗೂ ಮಕ್ಕಳಿಗೆ ಶಿಕ್ಷಣವನ್ನು ನೀಡಿ ಮುಖ್ಯ ವಾಹಿನಿಗೆ ತರಲು ಶ್ರಮಿಸಬೇಕು ಎಂದು ಸಲಹೆ ನೀಡಿದರು. ನಿಕಟಪೂರ್ವ ಅಧ್ಯಕ್ಷ ಟಿ.ಎನ್.ನಂಜುಂಡಸ್ವಾಮಿ ಮಾತನಾಡಿ, ದೇಶದ ಗಡಿಯನ್ನು ಸೈನಿಕರು, ನಾಡಿಗೆ ಅನ್ನ ನೀಡುವ ರೈತರು ಮತ್ತು ಜನತೆಯ ಆರೋಗ್ಯವನ್ನು ಕಾಪಾಡುವ ಪೌರಕಾರ್ಮಿಕರು ದೇಶದ ಪ್ರಮುಖ ಅಂಗಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸ್ವಚ್ಛತೆಗಾಗಿ ಜೀವವನ್ನೇ ಪಣಕ್ಕಿಟ್ಟು ಕೆಲಸ ಮಾಡುವ ಕಾರ್ಮಿಕರಿಗೆ ಮಾನಸಿಕವಾಗಿ ಧೈರ್ಯ ನೀಡುವ ಜವಾಬ್ದಾರಿ ಎಲ್ಲರ ಮೇಲಿದೆ. ಸಮಾಜವು ಸಹ ಅವರನ್ನು ಗೌರವಯುತವಾಗಿ ಕಾಣಬೇಕು ಎಂದು ತಿಳಿಸಿದರು.

ಪರಿಸರ ಅಭಿಯಂತರೆ ಲೋಕೇಶ್ವರಿ ಮಾತನಾಡಿ ಪೌರ ಕಾರ್ಮಿಕರಿಲ್ಲದ ಪಟ್ಟಣವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಸರ್ಕಾರವು ಸಹ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ರಾಜ್ಯವು ಸ್ವಚ್ಛತೆಯಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿರಲು ಪೌರಕಾರ್ಮಿಕರೇ ಕಾರಣರಾಗಿದ್ದಾರೆ. ಅಂತಹ ಕಾರ್ಮಿಕರಿಗೆ ವರುಷದಲ್ಲಿ ಒಂದು ದಿನವನ್ನು ಮೀಸಲಿಟ್ಟು ಗೌರವ ನೀಡುವ ಕೆಲಸ ಮಾಡಲಾಗುತ್ತಿದೆ ಎಂದರು.

ಪಟ್ಟಣದ ಜೀವನಾಡಿಗಳಾಗಿರುವ ಪೌರ ಕಾರ್ಮಿಕರಿಗೂ ಒಂದು ದಿನ ಇದೇ ಎಂಬುದು ಹಲವು ಜನರಿಗೆ ತಿಳಿದೇ ಇಲ್ಲ. ನಗರದ, ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ, ಸಮರ್ಪಕವಾಗಿ ಪರಿಸರವನ್ನು ಸ್ವಚ್ಛವಾಗಿಡುವ ಪೌರಕಾರ್ಮಿಕರು ಇಂದು ತಮ್ಮ ದಿನಾಚರಣೆ ಆಚರಿಸಿಕೊಳ್ಳುತ್ತಿದ್ದಾರೆ. ಈ ದಿನಾಚರಣೆ ತೋರಿಕೆಗಾಗಿ ಅಲ್ಲ, ಸಮಾಜದಲ್ಲಿ ಪೌರಕಾರ್ಮಿಕರಿಗೂ ಒಂದು ನೆಲೆ–ಬೆಲೆ ಇದೆ ಎಂದು ಹೇಳಲಿಕ್ಕಾಗಿ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ರಾಮೇಗೌಡ ಮಾತನಾಡಿ, ತಮ್ಮ ಇಲಾಖೆಯಿಂದ ಪೌರಕಾರ್ಮಿಕರಿಗೆ ದೊರಕುವ ಸೌಲಭ್ಯಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ರೀಡೆಯಲ್ಲಿ ವಿಜೇತರಾದ ಪೌರಕಾರ್ಮಿಕರಿಗೆ ಬಹುಮಾನ ವಿತರಿಸಲಾಯಿತು ಹಾಗು ಉತ್ತಮ ಸೇವೆ ಸಲ್ಲಿಸಿದ ಕಾರ್ಮಿಕರಿಗೆ ಪೌರ ಸನ್ಮಾನ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ, ತಾ.ಪಂ.ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಪುರಸಭಾ ಸದಸ್ಯರುಗಳಾದ ಬಾದಾಮಿ ಮಂಜು, ಸಿಸ್ಟಮ್ ಸಿದ್ದು, ಮಂಜುನಾಥ್, ಮೆಡಿಕಲ್ ನಾಗರಾಜು, ಮಹದೇವಮ್ಮ, ಆರೋಗ್ಯಾಧಿಕಾರಿ ಮಧು, ಮಹೇಂದ್ರ ಹರೀಶ್, ರಾಘವೇಂದ್ರ, ರಾಜೇಂದ್ರ, ಆಶಾ, ಸಮುದಾಯ ಸಂಘಟಕ ಮಹದೇವಣ್ಣ, ನಿವೃತ್ತ ಸಮುದಾಯ ಸಂಘಟಕ ಕೆಂಪರಾಜು, ಗುತ್ತಿಗೆದಾರ ಕೆಂಪಯ್ಯನಹುಂಡಿ ಮಾಧು ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಚಂದ್ರಮುಖಿ–2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸ್ಕಂದ (ತೆ)	4 ಪ್ರದರ್ಶನಗಳು
ಸಂಗಂ	
ಚಂದ್ರಮುಖಿ–2 (ತ)	4 ಪ್ರದರ್ಶನಗಳು
ಲಿಡೋ	
ಒಲವೇ ಮಂದಾರ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇರೈವನ್(ತ)	4 ಪ್ರದರ್ಶನಗಳು
ಪ್ರಭಾ	
ಸ್ಕಂದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ
ಸ್ಕ್ರೀನ್ 3	ಎಕ್ಸ್‌ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್** (ಕ): ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2** (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2** (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ** (ಕ): ರಾ.9.45ಕ್ಕೆ, **ಆಚಾರ್ & ಕೋ** (ಕ): ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ** (ಕ): ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ** (ಕ): ಬೆ.11.55ಕ್ಕೆ, **ರಾಖಿ ಔರ್ ರಾಣಿ** (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್** (ಇಂ): ಸಂ.6.35ಕ್ಕೆ, **ಭೋಳಾ ಶಂಕರ್** (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2** (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಮೈಸೂರು ರೇಸುಗಳು



8ನೇ ದಿನ, ಗುರುವಾರ 28–09–2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. **ಜಯನಗರ ಪ್ಲೇಟ್–2000 ಮೀ.** ರೇಟೆಡ್ 20 ರಿಂದ 45. **ಮ.2.00ಕ್ಕೆ**
1. ರೂಲಿಂಗ್ ಡೈನೆಸ್ಟಿ 2. ಡಿಯರ್ ಲೇಡಿ 3. ಬರ್ಸ್ಕಿ

II. **ವಾಲರೋಸ ಪ್ಲೇಟ್ –1200 ಮೀ.** ರೇಟೆಡ್ 40 ರಿಂದ 65. **ಮ.2.30ಕ್ಕೆ**
1. ಸ್ಪಿರಿಟ್ ಆಫ್ ದ ರೋಸ್ 2. ಬಯೋಮೆಟ್ರಿಕ್ 3. ಕ್ಲಿಟಸ್

III. **ಆಂಟಿಪಿಫ್ ಪ್ಲೇಟ್– 1400 ಮೀ.** ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). **ಮ.3.00ಕ್ಕೆ**
1 ನ್ಯಾಚುರಲ್ ಪ್ಲೈ 2. ಮೋರಗ್‌ನೈಟ್ 3 ವಾರ್ ಸಾಂಗ್

IV. **K.T. ಶ್ಯಾಮಯ್ಯಗೌಡ ಮೆಮೋರಿಯಲ್ ಟ್ರೋಫಿ– 1400ಮೀ.** ರೇಟೆಡ್ 60 ಮತ್ತು ಮೇಲ್ವರ್ಗ (ಮೈಸೂರ್ ಬೇಸ್ಡ್ ಹಾರ್ಸ್). **ಸಂ.3.30ಕ್ಕೆ**
1. ಅಸ್ತಾರ್ 2. ವಿಜಯ ಫಾಲ್ಕನ್ 3. ಗ್ಯಾಮ

V. **ಮಹಾರಾಜಸ್ ಕಪ್–1600 ಮೀ.** 4 ವರ್ಷ (ಟರ್ಮ್ಸ್) **ಸಂ.4.00ಕ್ಕೆ**
1. ಎ ವಾಲ್ ಡೋ 2. ಎ ಸ್ಟಾರ್ ಈಸ್ ಬಾರ್ನ್

VI. **ಸನ್ ಆಫ್ ದಿ ಲೈಟ್ ಪ್ಲೇಟ್ ಡಿ2–1200 ಮೀ.** ರೇಟೆಡ್ 20 ರಿಂದ 45 **ಸಂ.4.30ಕ್ಕೆ**
1 ಸಾಕ್ರೆಡ್ ಕ್ರಿಯೇಟರ್ 2. ಸೋಲೋ ಪ್ರಿನ್ಸ್ 3. ವಾರ್ ಟ್ರೈಯಲ್

VII. **ಸನ್ ಆಫ್ ದಿ ಲೈಟ್ ಪ್ಲೇಟ್ ಡಿ1–1200 ಮೀ.** ರೇಟೆಡ್ 20 ರಿಂದ 45 **ಸಂ.5.00ಕ್ಕೆ**
1 ಒಸಿರೀಸ್ 2 ಏರ್ ಡಿಸ್‌ಪ್ಲೆ 3. ಮಾರ್ಚ್ ಟು ವಿಕ್ಟರಿ

ದಿನದ ಅತ್ಯುತ್ತಮ	: ಎ ವಾಲ್ ಡೋ
ಡಬ್ಬಲ್	: ರೂಲಿಂಗ್ ಡೈನೆಸ್ಟಿ, ನ್ಯಾಚುರಲ್ ಪ್ಲೈ
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಮಹದೇವಯ್ಯ ನಿಧನ



ಮೂಗೂರು, ಸೆ.27–ಗ್ರಾಮದ ಶ್ರೀರಾಮ ಕಾಲೋನಿಯ ನಿವಾಸಿ ನಿವೃತ್ತ ಶಿಕ್ಷಕ ಮಹದೇವಯ್ಯ (69) ಅವರು ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೂಗೂರಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಕಾಂಗ್ರೆಸ್ ಯಾರ ಬಿ ಟೀಂ?: ಅದಕ್ಕೇ ತಮಿಳುನಾಡಿಗೆ ಕಾವೇರಿ ನಾಗಾಲೋಟದಿಂದ ಹರಿಯುತ್ತಿದ್ದಾಳೆ!!

● ಕೈ ಪಕ್ಷಕ್ಕೆ ಕುಟುಕಿದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ● 2018ರಲ್ಲಿ ನೀವು ಯಾರ ಕಾಲು ಹಿಡಿಯಲು ಬಂದಿದ್ದೀರಿ?; ಕಾಂಗ್ರೆಸ್ ವಿರುದ್ಧ ವಾಗ್ದಾಳಿ

ಬೆಂಗಳೂರು: ಜೆಡಿಎಸ್ ಪಕ್ಷವನ್ನು ಬಿಜೆಪಿ 'ಬಿ' ಟೀಂ ಎನ್ನುವ ಕಾಂಗ್ರೆಸ್‌ನವರು ಯಾವ ಟೀಂ. ಅವರು ತಮಿಳುನಾಡಿನ ಟೀಮಾ ಅಥವಾ ಡಿಎಂಕೆಯ ಬಿ ಟೀಮಾ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಲೇವಡಿ ಮಾಡಿದರು.

ಜೆಪಿ ಭವನದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಸಮ್ಮುಖದಲ್ಲಿ ಮಾಧ್ಯಮಗಳ ಜತೆ ಅವರು ಮಾತನಾಡಿದರು. ಜೆಡಿಎಸ್ ಪಕ್ಷ ಬಿಜೆಪಿ ಬಿ ಟೀಂ ಅಂತ ಹೇಳಿದ್ದೆವು. ಈಗ ಅವರು ಬಿಜೆಪಿ ಜತೆ ಕೈ ಜೋಡಿಸಿದ್ದಾರೆ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ. ಹಾಗಾದರೆ, ಅವರು ಬದುಕು ಕಂಡುಕೊಂಡಿರುವ ಪ್ರಾದೇಶಿಕ ಪಕ್ಷಗಳ ಬಳಿ ಕಾಂಗ್ರೆಸ್ ಸ್ಥಿತಿ ಏನು? ಅದು ಆ ಪಕ್ಷಗಳ ಬಿ ಟೀಂ ಅಲ್ಲವೇ? ಎಂದು ಕುಟುಕಿದರು.

ಬಿಜೆಪಿ ಜತೆ ಅಧಿಕಾರ ಅನುಭವಿಸಿದ ಪಕ್ಷಗಳ ಜತೆ ಸಖ್ಯ ಬೆಳೆಸಿಕೊಂಡಿರುವ ಕಾಂಗ್ರೆಸ್ ಪಕ್ಷಕ್ಕೆ ಬಿ ಟೀಂ, ಎ ಟೀಂ ಎಂದು ಮಾತನಾಡುವ ನೈತಿಕತೆ ಇದೆಯೇ ಎಂದು ಹರಿಹಾಯ್ದ ಅವರು; ಅಂದು ಗುಲಾಂ ನಬಿ ಅಜಾದ್, ವೇಣುಗೋಪಾಲ್ ಅವರ ಸಮ್ಮುಖದಲ್ಲಿ ಸಿದ್ದರಾಮಯ್ಯ ಕೂಡ ಇದ್ದರು. ಕುಮಾರಸ್ವಾಮಿಗೆ ಸಿಎಂ ಸ್ಥಾನ ಬೇಡ, ನಿಮ್ಮಲ್ಲೇ ಒಬ್ಬರು ಸಿಎಂ ಆಗಿ ಎಂದರು ದೇವೇಗೌಡರು. ಆದರೆ ಕೇಂದ್ರದ ನಾಯಕರು ಕುಮಾರಸ್ವಾಮಿ ಅವರೇ ಸಿಎಂ ಆಗಬೇಕು ಅಂದರು. ಆ ದಿನಗಳು ಕಾಂಗ್ರೆಸ್ ಪಕ್ಷಕ್ಕೆ ನೆನಪಿಲ್ಲವೇ? ಆಗ ಬಿಜೆಪಿ ಬಿ ಟೀಂ ಎಂಬುದು ಅರಿವಿಗೆ ಬರಲಿಲ್ಲವೇ ಎಂದರು.

ಆ ದಿನವೇ ಅಮಿತ್ ಶಾ ಅವರಿಂದ ನನಗೆ ಕರೆ ಬಂತು. ಅವತ್ತು ಬಿಜೆಪಿ ಜೊತೆ ಹೋಗಿದ್ದಿದ್ದರೆ 5 ವರ್ಷಗಳ ಕಾಲ ನಾನೇ ಸಿಎಂ ಆಗಿರುತ್ತಿದ್ದೆ. ಆದರೆ, ನಾನು ಹಾಗೆ ಮಾಡಲಿಲ್ಲ. ಈಗ ಸುಳ್ಳು ಪ್ರಚಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಇದೆಲ್ಲಾ ಗೊತ್ತಿಲ್ಲವೇ? ಎಂದು ಚಾಟಿ ಬೀಸಿದರು.



ಅಂದು ಸರಕಾರ ಬೀಳಿಸುವಾಗ ಬಿಜೆಪಿಯ 5 ಜನ ಶಾಸಕರು ಬೆಂಬಲ ಕೊಡಲು ಮುಂದಾಗಿದ್ದರು. ಆದರೆ 5 ಜನ ಬಿಜೆಪಿ ಶಾಸಕರು ಬಂದರೆ ಕಾಂಗ್ರೆಸ್‌ನ ಇನ್ನೂ 5 ಜನರನ್ನು ಕಳುಹಿಸುತ್ತೇವೆ ಎಂದಿದ್ದರು ಒಬ್ಬರು. ಅವರು ಯಾರೂ ಎನ್ನುವುದು ಇಡೀ ರಾಜ್ಯಕ್ಕೆ ಗೊತ್ತಿದೆ. ಇವರು ಜಾತ್ಯತೀತತೆ ಬಗ್ಗೆ ಮಾತನಾಡುತ್ತಾರೆ. ನಾಚಿಕೆ ಆಗಬೇಕು ಇವರಿಗೆ ಎಂದು ಕಿಡಿಕಾರಿದರು.

2004ರಲ್ಲಿಯೇ ಜೆಡಿಎಸ್ ಮುಗಿಸಲು ಕಾಂಗ್ರೆಸ್ ಪ್ರಯತ್ನ ಮಾಡಿತ್ತು. ಸಿದ್ದರಾಮಯ್ಯ ಆ ಪ್ರಯತ್ನ ಮಾಡಿದ್ದರು. ನಾಲ್ಕು ಜನ ಸೇರಿ ಎಲ್ಲಿಗೆ ಹೋಗಿದ್ದರು ಎಂದು ಫ್ಲೈಟ್ ಟಿಕೆಟ್ ತೋರಿಸಬೇಕಾ? ಎಂದು ಸಿಎಂ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜೆಡಿಎಸ್‌ನಿಂದ ಅಲ್ಪಸಂಖ್ಯಾತ ನಾಯಕರು ದೂರ ಆಗುತ್ತಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು; ಇದೆಲ್ಲಾ ರಾಜಕೀಯದಲ್ಲಿ ನಡೆಯುತ್ತಿರುತ್ತದೆ. ಇಬ್ರಾಹಿಂ ಅವರಿಗೂ ಈ ಎಲ್ಲ ವಿಚಾರಗಳನ್ನು ಆಯಾ ಕಾಲಕ್ಕೆ ಮಾಹಿತಿ ಕೊಡ್ತಾ ಬಂದಿದ್ದೇನೆ ಎಂದರು.

ಕೆಲವರು ಗುಂಪು ಮಾಡಿಕೊಂಡು ಸಭೆ ಮಾಡಲು ಉದ್ದೇಶಿಸಿದ್ದಾರೆ. ಅವರಿಗೆ ನಾನು ಹೇಳುವುದು ಇಷ್ಟೇ, ನಾವೆಂದೂ ನಿಮಗೆ ಅಗೌರವ ತೋರಿಸಿಲ್ಲ. ಇದನ್ನು ಅರಿತುಕೊಳ್ಳಿ ಎಂದು ಮನವಿ ಮಾಡುತ್ತೇನೆ ಎಂದರು.

ಮುಸ್ಲಿಮರ ಹಿತರಕ್ಷಣೆ ಎಂದಲ್ಲ. ಇಡೀ ನಾಡಿನ ಜನರ ರಕ್ಷಣೆ ಮಾಡುತ್ತೇವೆ. ಅದಕ್ಕಾಗಿಯೇ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದೇವೆ. ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಪ್ರಬಲವಾಗಿದ್ದಿದ್ದರೆ ಅಲ್ಲಿಯೂ ನನಗೆ ಅಲ್ಪಸಂಖ್ಯಾತರ ಓಟ್ ಬರುತ್ತಿರಲಿಲ್ಲ. ಅವರು ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕುತ್ತಿದ್ದರು. ಜೆಡಿಎಸ್–ಬಿಜೆಪಿ ಫೈಟ್ ಇದ್ದ ಕಾರಣ ನನಗೆ ಓಟ್ ಬಂದಿದೆ ಎಂದು ಮಾಜಿ ಸಿಎಂ ನೇರ ಮಾತುಗಳಲ್ಲಿ ಹೇಳಿದರು.

ಅಮಿತ್ ಶಾ ಕಾಲು ಹಿಡಿಯಲು ಹೋಗಿದ್ದಾರೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಮೈತ್ರಿಯ ಸಂಕಟ ಅವರನ್ನು ಬಾಧಿಸುತ್ತಿದೆ. 2018ರಲ್ಲಿ ಇವರು ಯಾರ ಕಾಲು ಹಿಡಿಯಲು ಬಂದಿದ್ದರು? ಒಮ್ಮೆ ಪ್ರಿಯಾಂಕ್ ಖರ್ಗೆ ನೆನಪು ಮಾಡಿಕೊಳ್ಳಲಿ. ವಿಷಯ ಗೊತ್ತಿಲ್ಲದೆ ಜೆಡಿಎಸ್ ಬಗ್ಗೆ ಮಾತಾಡಲು ಹೋಗಬೇಡಿ ಎಂದು ಕುಮಾರಸ್ವಾಮಿ ಅವರು ಟಾಂಗ್ ಕೊಟ್ಟರು.

ಕಾಂಗ್ರೆಸ್‌ನ ನಾಗಾಲೋಟಕ್ಕೆ ಕಡಿವಾಣ ಹಾಕಲು ಈ ಮೈತ್ರಿ ಮಾಡಿಕೊಂಡಿದ್ದೀರಾ ಎಂಬ ಪ್ರಶ್ನೆಗೆ, ಎಲ್ಲಿದೆ ನಾಗಾಲೋಟ? ಕಾವೇರಿ ನಾಗಾಲೋಟದಿಂದ ತಮಿಳುನಾಡಿಗೆ ಹರಿಯುತ್ತಿದ್ದಾಳೆ. ಎಲ್ಲರಿಗೂ ಕಾಣುತ್ತಿದೆಯಲ್ಲ. ಇದರಿಂದ ಜಲ ಸಂಪನ್ಮೂಲ ಸಚಿವರು ತೃಪ್ತರಾಗಿರಬೇಕು ಅಷ್ಟೇ ಎಂದು ಅವರು ಛೇಡಿಸಿದರು.



ರಾಜ್ಯ ಜೆಡಿಎಸ್ ಕೋರ್ ಕಮಿಟಿ ಬುಧವಾರ ಕೂಡಲಸಂಗಮಕ್ಕೆ ಭೇಟಿ ನೀಡಿ, ಸಂಗಮೇಶ್ವರ ಸ್ವಾಮಿಯ ದರ್ಶನ ಪಡೆದು ನಂತರ ಪಂಚಮಸಾಲಿ ಪೀಠಾಧ್ಯಕ್ಷರಾದ ಜಯಮೃತ್ಯುಂಜಯ ಸ್ವಾಮಿಗಳ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಕಮಿಟಿಯ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರನ್ನು ಶ್ರೀಗಳು ಸನ್ಮಾನಿಸಿದರು. ಈ ವೇಳೆ ಸದಸ್ಯರಾದ ಸಿ.ಎಸ್.ಪುಟ್ಟರಾಜು, ರಾಜೂಗೌಡ, ಕೃಷ್ಣರೆಡ್ಡಿ, ಸುರೇಶ್‌ಗೌಡ, ದೊಡ್ಡಪ್ಪಗೌಡ, ತಿಮ್ಮರಾಯಪ್ಪ, ಕೆ.ಬಿ.ಪ್ರಸನ್ನ ಕುಮಾರ್, ವೀರಭದ್ರಪ್ಪ ಹಾಲರವಿ, ಸೂರಜ್ ಸೋನಿನಾಯಕ್, ಹಿರಿಯ ಸಹಕಾರಿಗಳಾದ ಎಲ್.ಎಂ.ಪಾಟೀಲ್, ಪ್ರಾಂಶುಪಾಲರಾದ ಶರಣು, ಮಲ್ಲಿಕಾರ್ಜುನ, ಕೂಡಲ ಸಂಗಮ ಪಿಕೆಪಿಎಸ್ ಅಧ್ಯಕ್ಷ ಮಹಂತೇಶ್ ಉಪಸ್ಥಿತರಿದ್ದಾರೆ.



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನ್ಯಾಯಾಂಗ ನೌಕರರ ಸಂಘದ ವತಿಯಿಂದ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ ಶ್ರಾವ್ಯ ಮಹೇಶ್ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಮೈಸೂರು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ಸಂಗ್ರೇಶಿ ಅವರ ಪತ್ನಿ ಶ್ರೀಮತಿ ಅನುಸೂಯ, ನ್ಯಾಯಾಂಗ ನೌಕರರ ಸಂಘದ ಅಧ್ಯಕ್ಷ ಶೇಷಾದ್ರಿ, ನಿರ್ದೇಶಕರಾದ ತುಳಸಿ, ಉಮಾದೇವಿ, ಇತರರನ್ನು ಕಾಣಬಹುದು.

ಅ.2, ಮಾಂಸ ಮಾರಾಟ ನಿಷೇಧ

ಮೈಸೂರು, ಸೆ.27– ಗಾಂಧಿ ಜಯಂತಿ ಪ್ರಯುಕ್ತ ಅ.2ರಂದು ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ವಿವಿಧ ಮಾಂಸದ ಅಂಗಡಿಗಳನ್ನು, ಕುರಿ, ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು ವ್ಯಾಪಾರವನ್ನು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಪಾಲಿಕೆ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗರತ್ನಮ್ಮ ನಿಧನ



ಮೈಸೂರು, ಸೆ.27– ಮೈಸೂರಿನ ಶ್ರೀರಾಂಪುರ ನಿವಾಸಿ ಲೇಟ್ ನಾಗರಾಜು ಅವರ ಪತ್ನಿ ಶ್ರೀಮತಿ ನಾಗರತ್ನಮ್ಮ (75) ಅವರು ಇಂದು ರಾತ್ರಿ ನಿಧನರಾದರು. ಇವರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 1 ಗಂಟೆಗೆ ಕುವೆಂಪುನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
ಮಹಾರಾಣಿ ಮಹಿಳಾ ಕಲಾ ಕಾಲೇಜು ವಿದ್ಯಾರ್ಥಿನಿಲಯ,
ಝಾನ್ಸಿರಾಣಿ ಲಕ್ಷ್ಮಿ ಬಾಯಿ ರಸ್ತೆ, ಮೈಸೂರು – 570005
ಫೋನ್: 0821-2421666, ಮೊ: 9731475901/9448603302
ಇ-ಮೇಲ್: machwmysore@gmail.com

ಸಂಖ್ಯೆ: ಮಮಕಕಾ/ವಿನಿ/ಮೈ/22/2023–24 ದಿನಾಂಕ: 27.09.2023

ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಹಾರಾಣಿ ಮಹಿಳಾ ಕಲಾ ಕಾಲೇಜು ವಿದ್ಯಾರ್ಥಿನಿಲಯ, ಮೈಸೂರು., ಇಲ್ಲಿಗೆ ದಿನಸಿ ಸಾಮಾಗ್ರಿಗಳು ತರಕಾರಿ & ಸರಬರಾಜು ಮಾಡಲು ಸಂಖ್ಯೆ:ಮಮಕಕಾ/ವಿನಿ/ಮೈ/21/2023–24 ದಿನಾಂಕ:08.09.2023 ರಂದು ಓಪನ್ ಟೆಂಡರ್ ಕರೆಯಲಾಗಿತ್ತು, ಸಮಿತಿ ಇದನ್ನು ಪರಿಶೀಲಿಸಿದಾಗ ಅರ್ಹ ಟೆಂಡರ್‌ದಾರರು ಲಭ್ಯವಿಲ್ಲದ ಕಾರಣ ಮತ್ತೆ ಅಲ್ಪಾವಧಿ ಮರು ಟೆಂಡರನ್ನು ಕರೆಯಲಾಗಿದ್ದು ದಿನಸಿ ಸಾಮಾಗ್ರಿಗಳಿಗೆ ಮಾಸಿಕ ಅಂದಾಜು ಮೊತ್ತ ರೂ.3,00,000=00ಗಳು ಹಾಗೂ ತರಕಾರಿ ಸರಬರಾಜಿಗೆ ಮಾಸಿಕ ಅಂದಾಜು ಮೊತ್ತ ರೂ.50,000=00ಗಳಾಗಿದ್ದು, ಇ.ಎಂ.ಡಿ ಮೊತ್ತ ಒಟ್ಟು ರೂ:10,500=00, ವಿದ್ಯಾರ್ಥಿನಿಲಯದ ಕಛೇರಿಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿದ ಅರ್ಜಿ ಜೊತೆ ಇ.ಎಂ.ಡಿ ಮೊತ್ತವನ್ನು ಡಿಡಿ ಮೂಲಕ ಸಲ್ಲಿಸಲು ಕೊನೆಯ ದಿನಾಂಕ:06.10.2023ರ ಸಂಜೆ:4.00 ಗಂಟೆಯಾಗಿರುತ್ತದೆ. ದಿನಾಂಕ:07.10.2023ರಂದು ಮಧ್ಯಾಹ್ನ 12:00 ಗಂಟೆಗೆ ಪ್ರಾಂಶುಪಾಲರ ಕಛೇರಿಯಲ್ಲಿ ಟೆಂಡರ್ ತೆರೆಯಲಾಗುವುದು. ಹೆಚ್ಚಿನ ಹೆಚ್ಚಿನ ವಿವರಗಳಿಗೆ ಪ್ರಾಂಶುಪಾಲರ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಪ್ರಾಂಶುಪಾಲರು,
ಮಹಾರಾಣಿ ಮಹಿಳಾ ಕಲಾ ಕಾಲೇಜು ವಿದ್ಯಾರ್ಥಿ ನಿಲಯ, ಮೈಸೂರು – 5

ಗೌರವಾನ್ವಿತ 3ನೇ ಪ್ರಥಮ ದರ್ಜೆ ನ್ಯಾಯಾಧೀಶರ ನ್ಯಾಯಾಲಯ ಮೈಸೂರು
ಸಿ.ಮಿಸ್.ಸಂಖ್ಯೆ. 175/2022

ಅರ್ಜಿದಾರರು: ಶ್ರೀಮತಿ ಜಯಮ್ಮ ಲೇಟ್ ನಾಗೇಂದ್ರ, ವಯಸ್ಸು ಸುಮಾರು 55 ವರ್ಷ ವಾಸ: 389, 3ನೇ ಕ್ರಾಸ್, ಜಂಟಿ ಬೀದಿ ನಜರ್‌ಬಾದ್, ಮೈಸೂರು. ವಿರುದ್ಧ
ಎದುರುದಾರರು: 1. ಶ್ರೀ ಬಸವರಾಜು, ಲೇಟ್ ಸಿದ್ದಯ್ಯ @ ಕಂಬಳೇಗೌಡ ವಯಸ್ಸು ಸುಮಾರು 65 ವರ್ಷ. 2. ಶ್ರೀಮತಿ ನಾಗಮ್ಮ, ಕೋಂ ಚಿಕ್ಕಣ್ಣ ಬಿನ್ ಲೇಟ್ ಸಿದ್ದಯ್ಯ @ ಕಂಬಳೇಗೌಡ ವಯಸ್ಸು 75 ವರ್ಷ. 3. ಶ್ರೀಮತಿ ಕಮಲ, ಕೋಂ ಸುಬ್ಬಣ್ಣ, ಬಿನ್ ಲೇಟ್ ಸಿದ್ದಯ್ಯ (2) ಕಂಬಳೇಗೌಡ ವಯಸ್ಸು 70 ವರ್ಷ.
ಎದುರುದಾರರ ವಾಸ 1 ರಿಂದ 3ರವರೆಗೆವಾಸ, 226, ಕ್ಷೇತ್ರಯ್ಯ ರಸ್ತೆ, 8ನೇ ಕ್ರಾಸ್, ಕೆ.ಆರ್. ಮೊಹಲ್ಲಾ, ಮೈಸೂರು ಸಿಟಿ. 4. ಜನನ ಮತ್ತು ಮರಣಗಳ ಮುಖ್ಯ ರಿಜಿಸ್ಟ್ರಾರ್ ಮೈಸೂರು ಮಹಾನಗರ ಪಾಲಿಕೆ

ಪತ್ರಿಕಾ ಪ್ರಕಟಣೆಗಾಗಿ

ಮೇಲ್ಕಂಡ ಅರ್ಜಿದಾರನಾದ ನಾನು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ನನ್ನ ಮಾವನಾದ ಸಿದ್ದಯ್ಯ @ ಕಂಬಳೇಗೌಡ ಬಿನ್ ಲೇಟ್ ಮರಸಿದ್ದಣ್ಣ ರವರು ದಿನಾಂಕ: 30-11-1969 ರಲ್ಲಿ ಕ್ಷೇತ್ರಯ್ಯ ರಸ್ತೆ, 8ನೇ ಕ್ರಾಸ್, ಕೆ.ಆರ್ ಮೊಹಲ್ಲಾದ ಮನೆಯಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಸಮರ್ಥನ ಪತ್ರವನ್ನು ಪಡೆಯಲು ಎದುರುದಾರರ ವಿರುದ್ಧ ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ವಿಚಾರಣೆಯು ದಿನಾಂಕ 3-10-2023 ರಂದು ಮಾನ್ಯ 3ನೇ ಪ್ರಥಮ ದರ್ಜೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲಿದ್ದು, ಆಸಕ್ತಿ ಉಳ್ಳವರು ಸದರಿ ದಿನಾಂಕದಂದು ಹಾಜರಾಗಿ ತಕರಾರು ಸಲ್ಲಿಸಬಹುದು ಪತ್ರಿಕೆಗಳಲ್ಲಿ ಪ್ರಕಟಿಸಲು ಅನುಮತಿ ನೀಡಬೇಕಾಗಿ ಅರ್ಜಿದಾರರ ಪರವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಸಹಿ/– ಶಿರಸ್ತೇದಾರು , 3ನೇ ಪ್ರಥಮ ದರ್ಜೆ, ನ್ಯಾಯಾಲಯ, ಮೈಸೂರು

ಅರ್ಜಿದಾರರ ಪರ ವಕೀಲರು
ಸಹಿ/– ವಕೀಲರು,ಎಂ.ವಿ. ಚಂದ್ರಶೇಖರ್, ಎಂ.ಎ ಎಲ್.ಎಲ್.ಬಿ. 16/2, 1ನೇ ಮಹಡಿ, 2ನೇ ಮೇನ್, 2ನೇ ಕ್ರಾಸ್, ಜಯನಗರ,
ದಿನಾಂಕ: 14-11-2022, ಸ್ಥಳ: ಮೈಸೂರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಕನನೀಸ ಮತ್ತು ಒಚ ಮಂಡಳಿ, ನಗರ ವಿಭಾಗ (ಜೆ.ಎನ್.ನರ್ಮ್), ಜಲಭವನ, 2ನೇ ಮಹಡಿ, ಹಿ–4, 10ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು–570009. ಮೊ: 9480813129
ಇ–ಮೇಲ್: kwbmysjnee@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೈಸೂರು ನಗರದ ಯಾದವಗಿರಿಯಲ್ಲಿನ ಹೆಚ್.ಎಲ್.ಆರ್ ಆವರಣದಲ್ಲಿ ಇರುವ ಕಾರ್ಯಪಾಲಕ ಅಭಿಯಂತರರು, ನಗರ ವಿಭಾಗ, ಜೆ.ಎನ್.ನರ್ಮ್, ಮೈಸೂರು ರವರ ಹಳೆಯ ಕಛೇರಿಯ ನಂ.1 ಉಪವಿಭಾಗದ ತಾಂತ್ರಿಕ ಶಾಖೆ, ಉಗ್ರಾಣ ಶಾಖೆ, ಅತಿಥಿ ಗೃಹ ಮತ್ತು ಭಾಗಶಃ ವಿಭಾಗ ಕಛೇರಿಯ ಮೇಲ್ಛಾವಣಿಯ ವಾಟರ್ ಪ್ರೂಫಿಂಗ್ ಮತ್ತು ಇತರೆ ರಿಪೇರಿ ಕಾಮಗಾರಿಯ ಅಲ್ಪಾವಧಿ ಟೆಂಡರ್ ಪ್ರತ್ಯೇಕವಾಗಿ ಕರೆಯಲಾಗಿದ್ದು, ಟೆಂಡರ್ ಮೊತ್ತ– ರೂ.4,06,513/– ಹಾಗೂ ಖಾಲಿ ಟೆಂಡರ್ ಪುಸ್ತಕದ ಬೆಲೆ ರೂ.2,000/– ಅರ್ಜಿ ಸಲ್ಲಿಸಲು ಕೊನೆಯ ದಿ: 05.10.2023 ಖಾಲಿ ಟೆಂಡರ್ ಪತ್ರಗಳನ್ನು ವಿತರಿಸುವ ದಿ: 05.10.2023 ತನಕ, ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿ: 06.10.2023 ಇತರೆ ಮಾಹಿತಿ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀ ಎಂ.ಸಿದ್ದಪ್ಪ ಬಿನ್ ಮರಿಯಪ್ಪ, ವಾಸ ಬ್ಲಾಕ್–8, ನಂ.22, ಲಕ್ಷ್ಮಿ ನಿವಾಸ, ಬಿ.ಇ.ಎಂ.ಎಲ್ ನಗರ, ಶ್ರೀರಾಂಪುರ 2ನೇ ಹಂತ, ಮೈಸೂರು ರವರು ಈ ಕೆಳಕಂಡ ಸ್ವತ್ತನ್ನು ಅದರ ಮಾಲೀಕರಾದ ಶ್ರೀಮತಿ.ಶೃತಿ. ಆರ್ ಕೋಂ. ಎನ್.ಜೆ ಪ್ರಕಾಶ, ವಾಸ ಮನೆ ನಂ.5514, 3ನೇ ಕ್ರಾಸ್, ತ್ಯಾಗರಾಜ ಕಾಲೋನಿ, ನಂಜನಗೂಡು ಟೌನ್, ಮೈಸೂರು ಜಿಲ್ಲೆ ಇವರಿಂದ ಖರೀದಿಸಲು ಇಚ್ಛಿಸಿ ಇವರ ಇಚ್ಛೆ ಮೇರೆಗೆ ದಿನಾಂಕ 15-10-2020 ರಂದು ಕ್ರಯದ ಕರಾರನ್ನು ಮಾಡಿಕೊಂಡಿದ್ದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಯಾರೂ ವ್ಯವಹರಿಸಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾತ್ತಿದ್ದು ಒಂದೊಮ್ಮೆ ಈಗಿರುವಾಗ್ಯೂ ಯಾರಾದರೂ ವ್ಯವಹರಿಸಿದಲ್ಲಿ ಅಂತಹ ವ್ಯವಹಾರಗಳಿಗೆ ನಮ್ಮ ಕಕ್ಷಿದಾರರು ಭಾದ್ಯರಾಗಿರುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ನಂಜನಗೂಡು ಗ್ರಾಮಕ್ಕೆ ಸೇರಿದ್ದು, ತರೀ ಸರ್ವೆ ನಂ.765/2 ರ ವಿಸ್ತೀರ್ಣ 1 ಎಕರೆ 06 ಗುಂಟೆ ಆಕಾರ 2.87/– ಪೈಸೆ ಉಳ್ಳ ಜಮೀನಿಗೆ ಚೆಕ್ಕುಬಂದಿ :– ಪೂರ್ವಕ್ಕೆ: ಮಾಧುರವರ ಜಮೀನು, ಪಶ್ಚಿಮಕ್ಕೆ: ಜಾನಕಮ್ಮರವರ ಜಮೀನು ಮತ್ತು ವೆಂಕಟೇಶ ರವರ ಜಮೀನು. ಉತ್ತರಕ್ಕೆ : ಚಿಕ್ಕತಮ್ಮಯ್ಯ ರವರ ಜಮೀನು. ದಕ್ಷಿಣಕ್ಕೆ: ಹೊಟ್ಟೆ ಸಣ್ಣಪ್ಪನ ಮಗ ಚಂದ್ರು ರವರ ಜಮೀನು.

Sd/- Manukumar BAL.LLB
Advocate, Off: No. 35,
Kuvempu trust building Kalidasa road. Jayalakshmipuram .
Ph: 9620828974, MYSORE -12
ಸ್ಥಳ: ಮೈಸೂರು ದಿ: 27–09–2023

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–570 006
ಆಡಳಿತ ವಿಭಾಗ
ಸಂಖ್ಯೆ: ಕರಾಮುವಿ./ಆವಿ/ಸಿಬ್ಬಂದಿ–2/728/2023–24 ದಿ: 26.09.2023

ನೋಟಿಸ್

ಅನಧಿಕೃತ ಗೈರು ಹಾಜರಿ ಕುರಿತು.

ಶ್ರೀ. ಎಂ. ಶಿವರಾಮಕೃಷ್ಣ, ಹಿರಿಯ ಸಹಾಯಕ, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು, ಆದ ನಿಮಗೆ ಗೈರುಹಾಜರಿಯ ಬಗ್ಗೆ ಹಲವಾರು ಬಾರಿ ಸೂಚಿ ಹಾಗು ಕಾರಣ ಕೇಳಿ ನೋಟಿಸ್ ನೀಡಿದ್ದರೂ ಸಹಾ ನಡವಳಿಕೆಯಲ್ಲಿ ಯಾವುದೇ ಸುಧಾರಣೆ ಕಂಡುಬಂದಿರುವುದಿಲ್ಲ. ಕಛೇರಿ ಕರ್ತವ್ಯಕ್ಕೆ ದಿನಾಂಕ: 02.04.2023 ರಿಂದ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೇ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಅನಧಿಕೃತ ಗೈರುಹಾಜರಾಗಿರುತ್ತೀರಿ, ಈ ನಿಮ್ಮ ಅನಧಿಕೃತ ಗೈರುಹಾಜರಿ ಕುರಿತು"ಷೋಕಾಸ್ ನೋಟಿಸ್" ಅನ್ನು ದಿ: 20.05.2023, 26.06.2023 ಮತ್ತು 15.07.2023 ರಂದು ನೋಂದಾಯಿತ ಅಂಚೆಯ ಮೂಲಕ ನಿಮ್ಮ ವಿಳಾಸಕ್ಕೆ ಕಳುಹಿಸಲಾಗಿರುತ್ತದೆ. ಸದರಿ ಷೋಕಾಸ್ ನೋಟಿಸ್‌ಗಳನ್ನು ನೀವು ಸ್ವೀಕರಿಸದೇ ಇರುವ ಸಂಬಂಧ ವಾಪಸ್ಸು ಕಛೇರಿಗೆ ಬಂದಿರುತ್ತದೆ ಹಾಗೂ ನೀವು ಇದುವರೆವಿಗೂ ಯಾವುದೇ ಪ್ರತಿಕ್ರಿಯೆ ನೀಡದೇ ಮೇಲಾಧಿಕಾರಿಗಳ ಆದೇಶವನ್ನು ಉಲ್ಲಂಘನೆ ಮಾಡಿ ಕರ್ನಾಟಕ ನಾಗರೀಕ ಸೇವಾ ನಿಯಮದನ್ವಯ ಕರ್ತವ್ಯಲೋಪವೆಸಗಿರುತ್ತೀರಿ, ಇದು ವಿಶ್ವವಿದ್ಯಾನಿಲಯವು ಪ್ರಸ್ತುತ ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ವರ್ತನೆ) ಪರಿನಿಯಮದ ನಿಯಮ–3ಅನ್ನು ಉಲ್ಲಂಘಿಸಿದಂತಾಗಿರುತ್ತದೆ. ಆದ್ದರಿಂದ ಈ ಪ್ರಕಟಣೆಯು ಪ್ರಕಟಗೊಂಡ ಒಂದು ವಾರದೊಳಗಾಗಿ ನೀವು ಆಡಳಿತ ವಿಭಾಗ, ಕರಾಮುವಿ, ಮೈಸೂರು, ಇಲ್ಲಿ ಹಾಜರಾಗಿ ನಿಮ್ಮ ಸೂಕ್ತ ಸಮಜಾಯಿಷಿಯನ್ನು ಸಲ್ಲಿಸದಿದ್ದಲ್ಲಿ ಇದೇ ಅಂತಿಮ ಸೂಚನೆಯೆಂದು ಪರಿಗಣಿಸಿ ವಿಶ್ವವಿದ್ಯಾನಿಲಯದ ಕೆಲಸವನ್ನು ನಿರ್ವಹಿಸಲು ನಿಮಗೆ ಆಸಕ್ತಿ ಇಲ್ಲವೆಂದು ಭಾವಿಸಿ, ವಿಶ್ವವಿದ್ಯಾನಿಲವು ಪ್ರಸ್ತುತ ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ವರ್ತನೆ) ಪರಿನಿಯಮದನ್ವಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಸಹಿ/– ಕುಲಸಚಿವ
DIPR/DDMYS/KSMCA/312/2023-24

ಮೈಸೂರು ಅರಮನೆ ಮಂಡಳಿ, ಮೈಸೂರು
ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ಮೈಸೂರು. ದೂ:0821–2421051 ಇಮೇಲ್: ddmysorepalace@gmail.com
ಟೆಂಡರ್ ಅಧಿಸೂಚನೆ ಸಂಖ್ಯೆ:ಕಾನಿಅ/ಅಮಂ/ಉನಿ/ವಿದ್ಯುತ್/ಟೆಂಡರ್ ಸಂಖ್ಯೆ:01/2023–24 ದಿನಾಂಕ:22.09.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ ರೂ. 14.50 ಲಕ್ಷಗಳಿಗೆ ಸಂಬಂಧಿಸಿದ 04 ಸಂಖ್ಯೆ ಖರೀದಿ / ನಿರ್ವಹಣೆ / ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ / ನೋಂದಾಯಿತ ಏಜೆನ್ಸಿ/ತಯಾರಕರುಗಳಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 06–10–2023** ಸಂಜೆ 4:00 ಗಂಟೆಯವರೆಗೆ. (2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ **ದಿನಾಂಕ: 07–10–2023** ಸಂಜೆ 4:00 ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ **ದಿನಾಂಕ: 09–10–2023** ಸಂಜೆ 4.00 ಗಂಟೆಯವರೆಗೆ. (4) ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 09–10–2023**ರ ಸಂಜೆ 4.30 ಗಂಟೆಗೆ. (5) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ. 5.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ.2.50 ಲಕ್ಷಗಳು. ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ/ ತಿರಸ್ಕರಿಸುವ ಹಕ್ಕು ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– ಉಪ ನಿರ್ದೇಶಕರು
ಮೈಸೂರು ಅರಮನೆ ಮಂಡಳಿ, ಮೈಸೂರು
DIPR/MYS/KAVITA/427/23-24